ಎಂ. ಫಿಲ್. ಪದವಿಯ ಸಂಪ್ರಬಂಧ

ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ದಲಿತ ಸಂವೇದನೆ

ಒಂದು ಅಧ್ಯಯನ

ಸಂಶೋಧನ ವಿದ್ಯಾರ್ಥಿ

ಮಹಾದೇವಮ್ಮ ಎಸ್.

ಮಾರ್ಗದರ್ಶಕರು

ಡಾ|| ವಿಜಯಸುಬ್ಬರಾಜ್

ಬಿ.ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು,

ಎಂ. ವಿ. ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ

ಮೂಲಕ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಲ್ಲಿಸಿದೆ

೨೦೦೭

ಅಭ್ಯರ್ಥಿಯ ಪ್ರಮಾಣ ಪತ್ರ

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ. ವಿ. ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ 2007-08ನೇ ಸಾಲಿನ ಎಂ.ಫಿಲ್. ಪದವಿಗಾಗಿ **ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ದಲಿತ ಸಂವೇದನೆ** ಸಂಪ್ರಬಂಧವನ್ನು **ಡಾ॥ ವಿಜಯಾಸುಬ್ಬರಾಜ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ಸಂಪ್ರಬಂಧ ನನ್ನ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : ೨-೮-೨೦೦೭

ಸ್ಥಳ : ಬೆಂಗಳೂರು.

ಸಹಿ

(ಮಹದೇವಮ್ಮ ಎಸ್.)

ಮಾರ್ಗದರ್ಶಕರ ಪ್ರಮಾಣ ಪತ್ರ

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ. ವಿ. ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ 2007-08ನೇ ಸಾಲಿನ ಎಂ.ಫಿಲ್. ಪದವಿಗಾಗಿ **ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ದಲಿತ ಸಂವೇದನೆ** ಸಂಪ್ರಬಂಧವನ್ನು ಶ್ರೀ **ಮಹದೇವಮ್ಮ ಎಸ್.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಸಂಪ್ರಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ವಿಜಯಾ ಸುಬ್ಬರಾಜ್

ಸಹಿ

(ಡಾ॥ ವಿಜಯಾ ಸುಬ್ಬರಾಜ್)

ದಿನಾಂಕ : ೭-೮-೨೦೦೭

ಸ್ಥಳ : ಬೆಂಗಳೂರು.

ಪರಿವಿಡಿ

ಅಧ್ಯಾಯ			ಪುಟ ಸಂಖ್ಯೆ
ಅಧ್ಯಾಯ – ೧			
೧.	ಸಿದ್ಧಲಿಂಗಯ್ಯನವರ ಜೀವನ ಮ್ಮತು ಸಾಧನೆ	–	೦೧–೦೭
ಅಧ್ಯಾಯ – ೨			
೨.	ಅಧ್ಯಯನದ ಸ್ವರೂಪ ಮತ್ತು ಉದ್ದೇಶ	–	೦೮–೧೦
ಅಧ್ಯಾಯ – ೩			
೩.	ಸಿದ್ಧಲಿಂಗಯ್ಯನವರ ಕಾವ್ಯಗಳಲ್ಲಿ ದಲಿತ ಸಂವೇದನೆ	–	೧೧–೫೧
ಅಧ್ಯಾಯ – ೪			
೪.	ಸಿದ್ಧಲಿಂಗಯ್ಯನವರ ನಾಟಕಗಳಲ್ಲಿ ದಲಿತ ಸಂವೇದನೆ	–	೫೨–೬೮
ಅಧ್ಯಾಯ – ೫			
೫.	ಸಿದ್ಧಲಿಂಗಯ್ಯನವರ ಗದ್ಯ ಮತ್ತು ಆತ್ಮಕಥೆಗಳಲ್ಲಿ ದಲಿತ ಸಂವೇದನೆ	–	೬೯–೮೧
ಅಧ್ಯಾಯ – ೬			
೬.	ಉಪಸಂಹಾರ	–	೮೨–೮೫

ಅಧ್ಯಾಯ –೧

ಸಿದ್ಧಲಿಂಗಯ್ಯನವರ ಜೀವನ ಮತ್ತು ಸಾಧನೆ

ದಲಿತ ಚಳುವಳಿ ಹಾಗೂ ದಲಿತ ಸಾಹಿತ್ಯ ಕರ್ನಾಟಕದ ಸಾಮಾಜಿಕ ಬದುಕು ಮತ್ತು ಕನ್ನಡ ಸಾಹಿತ್ಯಕ್ಕೆ ಹೊಸ ದಿಕ್ಕನ್ನೆ ತೋರಿಸಿವೆ. "೧ ಆರ್ಥಿಕವಾಗಿ, ಸಾಮಾಜಿಕವಾಗಿ ತುಳಿತಕ್ಕೆ ಒಳಗಾಗಿ ಪಶುಸಮಾನ ಬದುಕನ್ನು ಬದುಕಿದ ಜನಗಳಲ್ಲಿ ಉಂಟಾದ ಅಕ್ಷರ ಕ್ರಾಂತಿಯೇ ಈ ಸಾಹಿತ್ಯದ ಉಗಮಕ್ಕೆ ಮೂಲ ಕಾರಣ ೧" ದಲಿತ ಅನುಭವದಿಂದ ಮೂಡಿ ಬಂದ ಸಿದ್ಧಲಿಂಗಯ್ಯನವರ ಕಾವ್ಯ ಆಧುನಿಕ ಕನ್ನಡ ಕಾವ್ಯಕ್ಕೆ ಒಂದು ಹೊಸ ದಾರಿಯನ್ನು ತೋರಿಕೊಟ್ಟಿದೆ. ಬಹುಶಃ ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಯಂತಹ ದಟ್ಟ ಸಾಮಾಜಿಕ ಕಳಕಳಿಯುಳ್ಳ ಪ್ರಗತಿಪರ ಸಂಘಟನೆ ಹುಟ್ಟದಿದ್ದರೆ ಶೋಷಿತರ, ಅದರಲ್ಲೂ ದಲಿತ ಜನಾಂಗದ ಬದುಕಿನ ಸ್ಥಿತಿಗತಿಗಳ ಕಡೆಗೆ ಕಣ್ಣು ಹಾಯಿಸಲು ಸಾಧ್ಯವಾಗುತ್ತಿರಲಿಲ್ಲ. ಉಸಿರೆ ಇಲ್ಲದಂಥ ಸ್ಥಿತಿಯಲ್ಲಿದ್ದ ಈ ಶೋಷಿತ ಜನಾಂಗಗಳು ಸಂಘಟನೆಯಾಗುವಲ್ಲಿ ಪ್ರಮುಖ ಶಕ್ತಿಯಾಗಿ ಪ್ರೇರಣೆಯಾಗಿ ಮೂಡಿ ಬಂದವರು ತುಂಬು ಮಹತ್ವದ ಕವಿಗಳೂ, ಸೂಕ್ಷ್ಮಸಂವೇದನೆಯ ಚಿಂತಕರೂ ಆದ ಸಿದ್ಧಲಿಂಗಯ್ಯನವರು.

ಸಿದ್ಧಲಿಂಗಯ್ಯನವರು ದಲಿತಸಾಹಿತಿಯಾಗಿ ರೂಪುಗೊಳ್ಳುವಲ್ಲಿ ಅವರ ಬಾಲ್ಯದ ಅನುಭವಗಳು, ಬೆಳೆದ ಪರಿಸರ ಪ್ರಮುಖ ಕಾರಣವಾಗಿವೆ. ಪ್ರಸ್ತುತ ನನ್ನ ಬರವಣಿಗೆಯ ವಸ್ತು 'ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ದಲಿತ ಸಂವೇದನೆ' ಎಂಬುದಾಗಿರುವುದರಿಂದ ಮೊದಲಿಗೆ ಸಿದ್ಧಲಿಂಗಯ್ಯನವರ ಜೀವನ ಕೌಟುಂಬಿಕ ಹಿನ್ನಲೆ ಮತ್ತು ಅವರ ವ್ಯಕ್ತಿತ್ವದ ಬಗ್ಗೆ ಹೇಳಲೇ ಬೇಕಾಗುತ್ತದೆ.

ಸಿದ್ಧಲಿಂಗಯ್ಯನವರು ೧೯೫೪ರ ಫೆಬ್ರವರಿ ಮೂರರಂದು ಅವರ ತಾಯಿಯ ತವರಾದ ರಾಮನಗರ ತಾಲ್ಲೂಕಿನ ಮಂಚನಬಲೆ ಎಂಬ ಗ್ರಾಮದಲ್ಲಿ ಜನ್ಮತಾಳಿದರು. ಸಿದ್ಧಲಿಂಗಯ್ಯನವರ ತಂದೆ ದೇವಯ್ಯ, ತಾಯಿ ವೆಂಕಟಮ್ಮ ಇವರಿಗೆ ಒಟ್ಟು ಆರು ಜನ ಮಕ್ಕಳಿದ್ದು ಸಿದ್ಧಲಿಂಗಯ್ಯನವರೆ ಹಿರಿಯ ಮಗ ಇವರ ಬಾಲ್ಯದ ಹೆಸರು ಸಿದ್ಧಲಿಂಗಮೂರ್ತಿ ಎಂದಿತ್ತು. ಸಿದ್ಧಲಿಂಗಯ್ಯನವರ ಪೂರ್ವಿಕರು "೨ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಆತಗೂರಿನವರು ೨". ಕಾರಣಾಂತರಗಳಿಂದ ಜೀವನ ನಡೆಸಲು ಕಷ್ಟವಾದದ್ದರಿಂದ ಸಿದ್ಧಲಿಂಗಯ್ಯನವರ ಪೂರ್ವಿಕರು ಮಾಗಡಿಯ ಕೊಂಡಹಳ್ಳಿಗೆ ಬಂದುನೆಲೆಸಿದರು. ಬಾಲ್ಯದ ದಿನಗಳಲ್ಲಿ ಸಿದ್ಧಲಿಂಗಯ್ಯನವರ ಒಟ್ಟು ವ್ಯಕ್ತಿತ್ವದ ಮೇಲೆ ಅವರ ತಂದೆಯ ಅಣ್ಣನವರಾದ ಆಲಯ್ಯ, ಗಂಗಮಾಳಗಯ್ಯ ಹಾಗೂ ಸಿದ್ಧಗಂಗಯ್ಯನವರುಗಳ ಪ್ರಭಾವ ದಟ್ಟವಾಗಿ ಬೇರೂರಿದೆ. ದೊಡ್ಡಪ್ಪನವರಾದ ಆಲಯ್ಯನವರು

ಮೊದಲ ತಲೆಮಾರಿನ ವಿದ್ಯಾವಂತರಾಗಿದ್ದರು. ಇವರು ದನಗಳನ್ನು ಮೇಯಿಸಲು ಹೋದಾಗ ಜೈಮಿನಿಭಾರತ ಕೃತಿಯನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗಿ ಸಿದ್ಧಲಿಂಗಯ್ಯನವರಿಗೆ ಹೇಳಿಕೊಡುತ್ತಿದ್ದ ವಿಷಯವನ್ನು ಸ್ವತಃ ಸಿದ್ಧಲಿಂಗಯ್ಯನವರೆ ಸ್ಮರಿಸಿಕೊಳ್ಳುತ್ತಾರೆ. ಸಿದ್ಧಲಿಂಗಯ್ಯನವರ ತಂದೆ ದೇವಯ್ಯನವರು ಸ್ವತಃ ಮಾಗಡಿಯವರಾಗಿದ್ದ ಕೂಲಿ ಕೆಲಸ ಮಾಡಿ ಮಕ್ಕಳನ್ನು ಸಾಕುತ್ತಿದ್ದರಂತೆ. ಜೊತೆಗೆ ಮಾಗಡಿಯಲ್ಲಿ ಕೂಲಿ ಸಿಗದಿದ್ದಾಗ ಬೇರೆ ಕಡೆ ಕೆಲಸಹುಡುಕಿಕೊಂಡು ತಿಂಗಳುಗಟ್ಟಲೆ ಹೋಗಿಬಿಡುತ್ತಿದ್ದರಂತೆ.

ಈ ರೀತಿ ಕಡುಬಡದಲಿತ ಕುಟುಂಬದಲ್ಲಿ ಜನಿಸಿದ ಸಿದ್ಧಲಿಂಗಯ್ಯನವರು ಬಾಲ್ಯದುದ್ದಕ್ಕೂ ಹಸಿವು, ಬಡತನ, ನೋವು, ಅಪಮಾನ, ಕಷ್ಟಗಳನ್ನು ಪ್ರತ್ಯಕ್ಷವಾಗಿ ಕಂಡುಂಡವರಾಗಿದ್ದರು. ಜೊತೆಗೆ ತಮ್ಮ ನೆರೆಹೊರೆಯ ಜನರ ಜೀವನ ಶ್ರಮ ಕೂಡ ಶೋಚನೀಯವಾಗಿದ್ದನ್ನು ನೋಡಿದ್ದರು. ಈ ಬಗೆಯ ಶೋಷಿತರ ಬದುಕಿನ ಸ್ಥಿತ್ಯಂತರಗಳು ಲೇಖಕರ ಮನಸ್ಸಿನ ಮೇಲೆ ಗಾಢಪ್ರಭಾವ ಬೀರಿರುವುದನ್ನು ನೋಡಬಹುದು. "೩ ಕವಿಯ ಸೃಜನಶೀಲ ಚೈತನ್ಯದ ಮೂಲ ಸೆಲೆಯು ಅವನ ಬಾಲ್ಯಾನುಭವಗಳ ಫಲಿತವಾದ ಪ್ರತಿಸ್ಪಂದನದಿಂದ ಹೆಚ್ಚು ಮಾಗತೊಡಗುತ್ತದೆ ೩". ಬಾಲ್ಯದ ಒಂದೊಂದು ನೆನಪು ವ್ಯಕ್ತಿಯನ್ನು ಭವಿಷ್ಯದಲ್ಲಿ ಉತ್ತಮವಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮಂಚನಬಲೆ ನಿಜವಾದ ಗ್ರಾಮೀಣ ಸಂಸ್ಕೃತಿಯ ಸೊಗಡನ್ನು ಹೊಂದಿದ್ದ ಊರಾಗಿತ್ತು ಪ್ರಾಕೃತಿಕ ಸೌಂದರ್ಯದಷ್ಟೆ ಶ್ರೀಮಂತ ಜನಪದ ಸಂಸ್ಕೃತಿಯನ್ನು ಒಳಗೊಂಡಿತ್ತು. ಸಾಮಾನ್ಯವಾಗಿ ಗ್ರಾಮೀಣಪ್ರದೇಶಗಳಲ್ಲಿ ಸಂಜೆಯ ವೇಳೆಯಲ್ಲಿ ಎಲ್ಲರೂ ಮನೆಯ ಹೊರಗಡೆ ಕುಳಿತು ಹಾಡುಗಳು, ಕಥೆಗಳು, ಒಗಟುಗಳನ್ನು ಹೇಳಿಕೊಳ್ಳುವಂತೆಯೆ ಇಲ್ಲಿಯೂ ಕೂಡ ಪ್ರತಿನಿತ್ಯ ಸಂಜೆ ನಡೆಯುತ್ತಿತ್ತು. ಸಿದ್ಧಲಿಂಗಯ್ಯನವರು ಅದರಲ್ಲಿ ಪಾಲ್ಗೊಂಡು ಅದರಿಂದ ಪ್ರಭಾವಿತರಾಗಿದ್ದಾರೆ. ಮಾಗಡಿ ಮಂಚನಬಲೆಯಷ್ಟೇ ಅವ್ವೇರಹಳ್ಳಿಯ ಪರಿಸರ ಬಾಲ್ಯದ ದಿನಗಳಲ್ಲಿ ಸಿದ್ಧಲಿಂಗಯ್ಯನವರ ಮನಸ್ಸನ್ನು ಗಾಢವಾಗಿ ಕಲಕಿದೆ. ಇವರ ತಾಯಿಯ ಅಕ್ಕ ವೆಂಕಟಮ್ಮನನ್ನು ಅವ್ವೇರಹಳ್ಳಿಯ ಕಾಳಿಂಗಯ್ಯನವರಿಗೆ ಕೊಟ್ಟು ಮದುವೆಮಾಡಲಾಗಿತ್ತು. ಅವ್ವೇರಹಳ್ಳಿ ಬೆಟ್ಟಗುಡ್ಡ, ಕಾಡುಗಳಿಂದ ಸುತ್ತುವರಿದು ಸುಂದರ ಪ್ರಕೃತಿ ತಾಣವಾಗಿತ್ತು. ಇಂತಹ ಪರಿಸರದಿಂದ ಆಕರ್ಷಿತರಾದ ಸಿದ್ಧಲಿಂಗಯ್ಯನವರು ತಮ್ಮ ಬಾಲ್ಯದ ಮುಖ್ಯ ದಿನಗಳನ್ನು ಅವ್ವೇರಹಳ್ಳಿಯಲ್ಲಿ ಕಳೆದರು.

ಇಂದು ಸಮಾಜದಲ್ಲಿ ಅನೇಕ ಜಟಿಲ ಸಮಸ್ಯೆಗಳು ಉಲ್ಬಣಗೊಂಡಿವೆ ಎಂದರೆ ಅದು ಜಾತೀಯತೆಯ ಕಾರಣದಿಂದಲೆ ಎಂದು ಹೇಳಬಹುದು. ಅಸ್ಪೃಶ್ಯತಾಚರಣೆಯಿಂದಾಗಿ ಮನುಷ್ಯ ಸಂಬಂಧಗಳು ತನ್ನಲ್ಲೇ ಮೌಲ್ಯಗಳನ್ನು ಕಳೆದುಕೊಳ್ಳುತ್ತಿವೆ. ಮಾಗಡಿ ಮತ್ತು ಮಂಚನಬಲೆ ಸಾಮಾಜಿಕ ಬದುಕಿನಲ್ಲಿದ್ದ ಜಾತೀಯತೆಯ ಪರಿಣಾಮ ಬಾಲ್ಯದ ದಿನಗಳಲ್ಲಿ ಸಿದ್ಧಲಿಂಗಯ್ಯನವರ ಮುಗ್ಧಮನಸ್ಸನ್ನು ಬಹಳವಾಗಿ ಪ್ರಭಾವಿಸಿದೆ. ಮಾಗಡಿಯಲ್ಲಿ ನಾಟಕ ನಡೆದರೆ ದಲಿತರು,

ಸವರ್ಣೀಯರಿಂದ ಪ್ರತ್ಯೇಕಗೊಂಡು ದೂರದಲ್ಲಿ ಕುಳಿತು ನಾಟಕವನ್ನು ವೀಕ್ಷಿಸಬೇಕಾಗಿತ್ತು. ಬರಗಾಲದಲ್ಲಿ ಪಕ್ಕದ ಊರುಗಳಲ್ಲಿ ನಡೆಯುತ್ತಿದ್ದ ಪರಕ್ಕೆ [ದೇವಸ್ಥಾನಗಳಲ್ಲಿ ನಡೆಯುವ ದಾಸೋಹ] ದಲಿತರು ಹೋದರೆ ಅವರನ್ನು ಪ್ರತ್ಯೇಕವಾಗಿ ಕೂರಿಸುತ್ತಿದ್ದರು. ಜಾತಿಯ ಕಾರಣದಿಂದಾಗಿ ದಲಿತರು ಕುಡಿಯುವ ನೀರಿಗಾಗಿ ಪರಿತಪಿಸುತ್ತಿದ್ದುದನ್ನು ಸಿದ್ಧಲಿಂಗಯ್ಯನವರು ಬಾಲ್ಯದಲ್ಲಿ ಕಂಡಿದ್ದಾರೆ. ಹೋಟೆಲ್‌ಗಳಲ್ಲೂ ಸಹ ಇದೇ ರೀತಿಯ ಪರಿಸ್ಥಿತಿ ಇದ್ದು ಜಾತೀಯತೆಯ ಬಗ್ಗೆ ಸಾಕಷ್ಟು ನೋವನ್ನುಂಟುಮಾಡಿರುವುದು ತಿಳಿಯುತ್ತದೆ. ಜೀವನದ ಸ್ಥಿತ್ಯಂತರದ ನಡುವೆ ಬೆಂಗಳೂರಿನ ಶ್ರೀರಾಂಪುರಕ್ಕೆ ಬಂದು ನೆಲೆಸುತ್ತಾರೆ. ಅಲ್ಲಿನ ಪರಿಸರವನ್ನು ಕುರಿತು ತಮ್ಮ ಆತ್ಮಕಥನ 'ಊರುಕೇರಿ' ಯಲ್ಲಿ ಈ ರೀತಿ ಹೇಳಿಕೊಂಡಿದ್ದಾರೆ. "ೞ ಇಲ್ಲಿ ಯಾವಾಗಲೂ ಜನ ಕುಡಿದು ಜಗಳ ಮಾಡುತ್ತಿದ್ದರು, ಕೊಲೆಗಳು ನಡೆಯುತ್ತಿದ್ದವು, ರೌಡಿಗಳ ಕಾಟ ಇದ್ದುದರಿಂದ ಇಲ್ಲಿ ಹಳ್ಳಿಯಲ್ಲಿದ್ದ ಮುಗ್ಧತೆ ಇರಲಿಲ್ಲ. ಇಲ್ಲಿನ ರೌಡಿ ಪರಿಸರ ನೋಡಿ ನಾನು ಒಬ್ಬ ರೌಡಿ ಆಗಬೇಕು, ದಾದಾಗಿರಿ ಮಾಡಬೇಕು ಅಂದುಕೊಳ್ಳುತ್ತಿದ್ದೆ ೞ". ಎಂಬುದಾಗಿ ಸಿದ್ಧಲಿಂಗಯ್ಯನವರು ಬಾಲ್ಯದಲ್ಲಿ ಅಂದುಕೊಂಡಿದ್ದರೂ ಅನಂತರದ ದಿನಗಳಲ್ಲಿ ಇವರ ವ್ಯಕ್ತಿತ್ವ ವಿಕಾಸದಲ್ಲಿ ಇಲ್ಲಿನ ವಾತಾವರಣ ಪೂರಕವಾಗಿಯೆ ಪರಿಣಮಿಸಿತು. ಸಿದ್ಧಲಿಂಗಯ್ಯನವರು ಸಾಹಿತಿಗಳಾಗಿ, ಚಳುವಳಿಗಾರರಾಗಿ ಬೆಳೆಯುವಲ್ಲಿ ಶ್ರೀರಾಮಪುರದ ಪರಿಸರ ಎಷ್ಟು ಪ್ರಭಾವ ಬೀರಿದೆಯೋ ಅವರು ಒಬ್ಬ ದೊಡ್ಡ ವ್ಯಕ್ತಿಯಾಗಿ ಭವಿಷ್ಯದಲ್ಲಿ ಬೆಳೆಯುವಲ್ಲಿಯೂ ಅಷ್ಟೇ ಪ್ರಭಾವ ಬೀರಿದೆ ಎಂದು ಹೇಳಬಹುದು.

ಸಿದ್ಧಲಿಂಗಯ್ಯನವರ ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ "ಜ ಅರ್ಥಹೀನ ಜೀವನ ನಡೆಸುತ್ತಿದ್ದ ದಲಿತ ಜನಗಳಲ್ಲಿ ಉಂಟಾದ ಅಕ್ಷರ ಕ್ರಾಂತಿಯೇ ಸಾಹಿತ್ಯದ ಉಗಮಕ್ಕೆ ಮೂಲ ಕಾರಣ ಜ". ಅಕ್ಷರದಿಂದ ವಂಚಿತರಾಗಿದ್ದ ಜನಕ್ಕೆ ಆಂಗ್ಲರ ಆಗಮನ ಮತ್ತು ಅವರ ಮುಕ್ತ ಶಿಕ್ಷಣ ಪದ್ಧತಿಯಿಂದ ಅವರ ಬದುಕಿನ ಮೂಲ ಆಶಯಗಳನ್ನು ಕಂಡುಕೊಳ್ಳುವ, ವ್ಯವಸ್ಥೆಯ ವಿರುದ್ಧ ಸಿಡಿದೇಳುವ ಮನೋಭಾವ, ಧೈರ್ಯಗಳನ್ನು ಬೆಳೆಸಿಕೊಳ್ಳುವಲ್ಲಿ ಜೊತೆಗೆ ಅಮೂಲಾಗ್ರ ಬದಲಾವಣೆಯನ್ನು ವ್ಯವಸ್ಥೆಯಲ್ಲಿ ತರುವಲ್ಲಿ ಅಕ್ಷರಜ್ಞಾನ ಅತೀ ಮುಖ್ಯವಾದುದು. ಸಿದ್ಧಲಿಂಗಯ್ಯನವರುಎರಡನೆ ತಲೆಮಾರಿನ ಅಕ್ಷರಸ್ಥರಾಗಿದ್ದು ತಮ್ಮ ವಿದ್ಯಾರ್ಥಿ ಬದುಕನ್ನು / ಜೀವನವನ್ನು ನಿರುತ್ಸಾಹದಿಂದಲೇ ಆರಂಭಿಸಿದರೆಂದು ಹೇಳಬಹುದು. ಕಾರಣ ಬಾಲ್ಯದ ದಿನಗಳಲ್ಲಿ ಇವರು ಶಾಲೆಗಿಂತ ಹೆಚ್ಚಾಗಿ ಬಯಲು, ನದಿ, ಕಾಡನ್ನು ಇಷ್ಟ ಪಡುತ್ತಿದ್ದರು. ಹಾಗಾಗಿ ಇವರನ್ನು ಶಾಲೆಗೆ ಸೇರಿಸುವಲ್ಲಿ ದೊಡ್ಡಪ್ಪ ಆಲಯ್ಯ ಮತ್ತು ಮನೆಯವರು ಹರಸಾಹಸ ಮಾಡಬೇಕಾಯಿತು. ಆನಂತರದ ದಿನಗಳಲ್ಲಿ ಆದರ್ಶ ವಿದ್ಯಾರ್ಥಿಯ ಎಲ್ಲಾ ಗುಣಲಕ್ಷಣಗಳನ್ನು ಮೈಗೂಡಿಸಿಕೊಂಡು ಹಂತಹಂತವಾಗಿ ಮೇಲೇರಿದರು.

ಮಾಗಡಿಯ ಹೊಸಪೇಟೆ ಮತ್ತು ಬೆಂಗಳೂರಿನ ಶ್ರೀರಾಂಪುರದಲ್ಲಿ ಸಿದ್ಧಲಿಂಗಯ್ಯನವರ ಪ್ರಾಥಮಿಕ ವಿದ್ಯಾಭ್ಯಾಸ ನಡೆಯಿತು. ಇವರ ಪ್ರತಿಭೆ ಕೇವಲ ಓದಿಗೆ ಮಾತ್ರ ಮೀಸಲಾಗಲಿಲ್ಲ.

ಜೊತೆಗೆ ಸಾಂಸ್ಕೃತಿಕವಾಗಿಯೂ ಜೀವಪಡೆದುಕೊಂಡಿದೆ. ಅಂದಿನ ರಾಜಕಾರಣಿಗಳಾದ ಆರ್. ಭರಣಯ್ಯ, ಎಸ್. ನಿಜಲಿಂಗಪ್ಪ, ಡಿ. ಆರ್. ನಂಜಯ್ಯ ಮುಂತಾದ ಗಣ್ಯರು ಅಂಬೇಡ್ಕರ್ ಅವರನ್ನು ಕುರಿತು ಮಾಡಿದ ಭಾಷಣಗಳು ಇವರನ್ನು ಹೆಚ್ಚು ಪ್ರಭಾವಿಸಿವೆ. ಹಾಗೆಯೇ ಪಿ.ಯು.ಸಿಗೆ ಸೇರಿದ ಬಳಿಕ ಇವರ ಓದಿನ ಹರವು ಹೆಚ್ಚಾಗತೊಡಗುತ್ತದೆ. ಇವರು ದಿನನಿತ್ಯದ ಓದನ್ನು ಹವ್ಯಾಸದ ರೀತಿಯಲ್ಲಿ ಮೈಗೂಢಿಸಿಕೊಂಡರು. ಕಬ್ಬನ್ ಪಾರ್ಕ್ ಗ್ರಂಥಾಲಯ ಇವರ ಜ್ಞಾನದ ಹಸಿವನ್ನು ಇಂಗಿಸಿದ [ಹೋಗಲಾಡಿಸಿದ] ಭಂಡಾರವೆಂದು ಹೇಳಬಹುದು.

ಸಿದ್ಧಲಿಂಗಯ್ಯನವರು ಬಿ. ಎ. ಆನರ್ಸ್ ಓದುತ್ತಿದ್ದಾಗ ಕನ್ನಡ ಸಾಹಿತ್ಯದ ಶ್ರೇಷ್ಠ ಚಿಂತಕರು, ವಿಮರ್ಶಕರೂ ಆದ ಡಿ. ಆರ್. ನಾಗರಾಜ್ ಅವರು ಇವರ ಹಿರಿಯ ಸಹಪಾಠಿಯಾಗಿದ್ದು ಒಳ್ಳೆಯ ಗೆಳೆಯರಾಗಿ ಬೆಳೆಯತೊಡಗಿದರು. ಒಳ್ಳೆಯ ಚರ್ಚಾಪಟುಗಳಾಗಿದ್ದ ಇವರು ಹಲವಾರು ಬಹುಮಾನಗಳನ್ನು ಪಡೆದಿದ್ದೂ ಉಂಟು. "೬ ನಾನಂತೂ ಬಹುಮಾನ ಗಳಿಸುವುದು ಮತ್ತು ಮಾರುವುದರಲ್ಲಿ ಪ್ರವೀಣನಾದೆ. ಒಮ್ಮೊಮ್ಮೆ ನಗದು ಬಹುಮಾನ ಬರುತ್ತಿತ್ತು. ಆ ಹಣದಿಂದ ಬಟ್ಟೆ ಬರೆ ಹೊಲಿಸಿಕೊಳ್ಳುತ್ತಿದ್ದೆ. ಹೀಗೆ ಚರ್ಚಾಸ್ಪರ್ಧೆ ನನಗೆ ಜೀವನೋಪಾಯದ ಮಾರ್ಗವೂ ಆಯಿತು ೬" ಎಂದು ಹೇಳಿಕೋಂಡಿದ್ದಾರೆ. ಸಿದ್ಧಲಿಂಗಯ್ಯನವರು ಎಂ. ಎ. ಓದುತ್ತಿದ್ದಾಗ ಅವರ ನೆಚ್ಚಿನ ಗುರುಗಳಾಗಿದ್ದವರು ಜಿ. ಎಸ್. ಶಿವರುದ್ರಪ್ಪನವರು. ಇವರ ಮಾರ್ಗದರ್ಶನದಲ್ಲಿ ಗ್ರಾಮದೇವತೆಗಳು ಎಂಬ ವಿಷಯದ ಬಗ್ಗೆ ಸಂಶೋಧನೆ ಕೈಗೊಂಡು ೧೯೮೯ ರಲ್ಲಿ ಬೆಂ. ವಿ. ವಿ. ಯಿಂದ ಪಿ. ಎಚ್. ಡಿ. ಪದವಿಯನ್ನು ಪಡೆದುಕೊಂಡರು. ಅನೇಕ ಎಡರು ತೊಡರುಗಳ ನಡುವೆಯೂ ತಮ್ಮ ಗುರಿಯನ್ನು ಮುಟ್ಟಿದರು.

ತಮ್ಮ ವಿದ್ಯಾಭ್ಯಾಸದ ಮಧ್ಯೆಯೂ ಸಾಬೂನು ಕಾರ್ಖಾನೆ, ಪತ್ರಿಕೆಗಳಲ್ಲಿ ದುಡಿದು ಜೀವನ ನಿರ್ವಹಣೆ ಮಾಡುತ್ತಿದ್ದರು. ಆನಂತರ ಅಧಿಕೃತವಾಗಿ ಸಿದ್ಧಲಿಂಗಯ್ಯನವರ ಉದ್ಯೋಗ ಬದುಕು ಆರಂಭಗೊಂಡಿದ್ದು ೧೯೭೬ ರಲ್ಲಿ. ಸ್ನಾತಕೋತ್ತರ ಪದವಿ ಪಡೆದು ನಿರುದ್ಯೋಗಿಯಾಗಿದ್ದು ಪ್ರತಿಭಾವಂತ ಸಿದ್ಧಲಿಂಗಯ್ಯನವರನ್ನು ಸಂಶೋಧನ ಸಹಾಯಕರಾಗಿ ಜಿ. ಎಸ್. ಎಸ್. ಅವರು ಕನ್ನಡ ಅಧ್ಯಯನ ಕೇಂದ್ರಕ್ಕೆ ನೇಮಿಸಿದರು. ಅನಂತರ ಸೆಂಟ್ರಲ್ ಕಾಲೇಜಿನ ತಾತ್ಕಾಲಿಕ ಉಪನ್ಯಾಸಕರಾಗಿದ್ದು ತದನಂತರ ಖಾಯಂ ಕನ್ನಡ ಉಪನ್ಯಾಸಕರಾಗಿ ನೇಮಕಗೊಂಡರು. ೨೦೦೧ ಮೇ ೧೩ ರಿಂದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ ಇವರು ಪ್ರಸ್ತುತ ಕನ್ನಡ ಅಭಿವೃದ್ಧಿ ಪ್ರಾದಿಕಾರದ ಅಧ್ಯಕ್ಷರಾಗಿದ್ದು ಅನೇಕ ಕನ್ನಡಪರ ಕೆಲಸ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ.

ಬಸವಣ್ಣ ಮತ್ತು ಅಂಬೇಡ್ಕರ್ ಅವರ ಜಾತ್ಯಾತೀತ ಪರಿಕಲ್ಪನೆಯಿಂದ ಪ್ರಭಾವಿತರಾಗಿ ಅಂತರ್ಜಾತಿ ವಿವಾಹಕ್ಕೆ ಒತ್ತುಕೊಟ್ಟು ಬಲಿಜನಾಯ್ಡು ಜನಾಂಗದ ಸಿ. ರಮಾಕುಮಾರಿ ಎಂಬುವವರನ್ನು ವಿವಾಹ ಮಾಡಿಕೊಳ್ಳುವ ಮೂಲಕ ವೈವಾಹಿಕ ಜೀವನ ಶುರು ಮಾಡಿದ ಇವರಿಗೆ ಮಾನಸ ಮತ್ತು ಗೌತಮ ಎಂಬ ಇಬ್ಬರು ಮಕ್ಕಳಿದ್ದಾರೆ.

ಬಾಲ್ಯದಿಂದಲೇ ಸಂಘರ್ಷಾತ್ಮಕ ಬದುಕಿಗೆ ಸಹಜವಾಗಿಯೇ ತಮ್ಮನ್ನು ತೊಡಗಿಸಿಕೊಂಡಿದ್ದರೂ. ಇವರು ಚಳುವಳಿಗಾರರಾಗಿ, ಭಾಷಣಕಾರರಾಗಿ ಮಾಡಿದ ಸಾಧನೆ ಅಗಾಧವಾದುದ್ದು. ಚಳುವಳಿಯಲ್ಲಿ ತೊಡಗಿಕೊಳ್ಳುತ್ತಲೇ ಸಮಾಜವನ್ನು ಅರ್ಥೈಸಿಕೊಳ್ಳುತ್ತಾ, ಸೈದ್ಧಾಂತಿಕ ಆಲೋಚನೆ, ಜನಪರ ಕಾಳಜಿ ಹಾಗೂ ಮಾನವೀಯ ಬದುಕಿನ ನೆಲೆಗಳನ್ನು ಕಂಡುಕೊಂಡರು. "೭ ಕವಿಯಾಗಿ ಗುರುತಿಸಲ್ಪಡುವುದಕ್ಕಿಂತ ಮೊದಲು ದಲಿತ ಹೋರಾಟಗಾರನೆಂದು ನಾನು ಗುರುತಿಸಲ್ಪಟ್ಟಿದ್ದೆ ೭" ಎಂದು ಅವರೇ ಹೇಳಿಕೊಂಡಿದ್ದಾರೆ.

ಸಿದ್ಧಲಿಂಗಯ್ಯನವರು ೧೯೭೧ರಲ್ಲೇ ಡಿ. ಆರ್. ನಾಗರಾಜ್, ಕರೀಗೌಡ ಬೀಚನಹಳ್ಳಿ, ಅಗ್ರಹಾರ ಕೃಷ್ಣಮೂರ್ತಿ ಮೊದಲಾದವರೊಡಗೂಡಿ 'ಅಂಬೇಡ್ಕರ್ ವಿಚಾರವಾದಿ ಪರಿಷತ್ತ' ನ್ನು ಕಟ್ಟಿ ಅದರ ಸಂಚಾಲಕರಾಗಿದ್ದರು. ಬಿ. ಬಸವಲಿಂಗಪ್ಪ ನವರ 'ಬೂಸಾಪ್ರಕರಣ' ವನ್ನು ಸಿದ್ಧಲಿಂಗಯ್ಯನವರ ಬಗ್ಗೆ ಅಧ್ಯಯನ ಮಾಡುವಾಗ ಗಮನಿಸಲೇ ಬೇಕಾಗುತ್ತದೆ. ಅಂಬೇಡ್ಕರ್ ಹಾಗೂ ಮಾರ್ಕ್ಸ್‌ನ ಸೈದ್ಧಾಂತಿಕ ವಿಚಾರಗಳು ಸಿದ್ಧಲಿಂಗಯ್ಯನವರನ್ನು ಪ್ರಭಾವಿಸಿದಂತೆಯೆ ಬೂಸಾಪ್ರಕರಣ ಕೂಡ ಇವರಲ್ಲಿ ಒಂದು ತಿರುವನ್ನುಂಟು ಮಾಡಿ ಅವರೇ ಹೇಳುವಂತೆ "೮ ಬೂಸಾ ಚಳುವಳಿಯ ನಂತರ ನನ್ನ ಮನಸ್ಸು ಕಮ್ಯುನಿಸಂ ಕಡೆ ವಾಲತೊಡಗಿತು. ಎಲ್ಲ ಜಾತಿಯ ಬಡವರ ಪರವಾಗಿ ದನಿಯೆತ್ತಬೇಕೆಂಬ ಧೋರಣೆ ನನ್ನಲ್ಲಿ ಮೊಳೆಯ ತೊಡಗಿತು ೮". ಹಾಗಾಗಿ ನಾನು ಚಳುವಳಿಯಲ್ಲಿ ಪಾಲ್ಗೊಳ್ಳುವ ಮೂಲಕ ದಲಿತ ಹೋರಾಟಗಾರನಾಗಿ ಮಾರ್ಪಟ್ಟಿದ್ದೇನೆ ಎಂದು ಹೇಳಿದ್ದಾರೆ.

ಇವರು ಚಳುವಳಿಗಾರರಾಗಿ ಮಾಡಿದ ಸಾಧನೆಗಳಲ್ಲಿ ಅತೀ ಮುಖ್ಯವಾದುದು ಬೆಂಗಳೂರಿನ ಕೊಳಗೇರಿಗಳಲ್ಲಿ ಆರಂಭಿಸಿದ ರಾತ್ರಿ ಶಾಲೆಗಳು. ಈ ಶಾಲೆಗಳ ಸ್ಥಾಪನೆಯ ಮುಖ್ಯ ಉದ್ದೇಶ ಶೋಷಿತರಲ್ಲಿ ಪ್ರಜ್ಞೆ ಮೂಡಿಸಲು ಮತ್ತು ಅವರ ಅನೇಕ ಸಮಸ್ಯೆಗಳಿಗೆ ಅಕ್ಷರ ಕ್ರಾಂತಿಯ ಮೂಲಕ ಪರಿಹಾರ ದೊರಕಿಸಿಕೊಡುವುದಾಗಿತ್ತು. ೧೯೭೪ ರಲ್ಲಿ ದೇವನೂರು ಮಹಾದೇವ ಅವರೊಡಗೂಡಿ 'ದಲಿತ ಲೇಖಕರು ಮತ್ತು ಕಲಾವಿದರ ಒಕ್ಕೂಟ' [ದಲೇಕ] ವನ್ನು ಸ್ಥಾಪಿಸಿ ಭದ್ರಾವತಿಯಲ್ಲಿ ಅದರ ಮೊದಲ ಸಮ್ಮೇಳನವನ್ನು ಆಯೋಜಿಸಿದರು. ಅನಂತರ ಕರ್ನಾಟಕದಲ್ಲಿ ದಲಿತ ಚಳುವಳಿ ಮತ್ತು ದಲಿತ ಸಂಘರ್ಷ ಸಮಿತಿಯ ಹುಟ್ಟಿಗೆ ಕಾರಣರಾಗಿ ಅನೇಕ ಚಳುವಳಿ, ಮೆರವಣಿಗೆ, ಧರಣಿಗಳಲ್ಲಿ

ಪಾಲ್ಗೊಂಡು ಯಶಸ್ಸುಗೊಳಿಸಿದ್ದಾರೆ. ಇವರು ಬರೆದ ಕ್ರಾಂತಿಗೀತೆಗಳು ದಲಿತರು ಜಾಗೃತರಾಗಿ ಸಂಘಟನೆಗೊಳ್ಳಲು ಪ್ರಮುಖ ಪ್ರೇರಣೆಯಾಗಿ ಈಗಲೂ ಕೇಳಿಬರುತ್ತಿವೆ.

ಮಂಗಳೂರಿನಲ್ಲೂ ಕೂಡ ದಲಿತ ಸಂಘರ್ಷ ಸಮಿತಿಯ ಉಪಶಾಖೆಯನ್ನು ಸ್ಥಾಪಿಸಿದ್ದು ಹಲವಾರು ಪ್ರಕರಣಗಳ ವಿರುದ್ಧ ಸಿಡಿದೆದ್ದು ಹೋರಾಟ ನಡೆಸಿದ್ದಾರೆ. ಡಿ. ಆರ್. ನಾಗರಾಜ್ ಅವರೊಡಗೂಡಿ 'ಬಂಡಾಯ ಸಾಹಿತ್ಯ ಸಮ್ಮೇಳನ' ನಡೆಸಿದ್ದು ಅವರ ದೊಡ್ಡ ಸಾಧನೆಯೇ ಆಗಿದೆ.

ಸಿದ್ಧಲಿಂಗಯ್ಯನವರ ಸಾಮಾಜಿಕ ಮತ್ತು ಸಾಹಿತ್ಯಕ ಕೆಲಸಗಳನ್ನು ಗುರುತಿಸಿ ಸರ್ಕಾರ ಅವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ನೇಮಕ ಮಾಡಿತು. ಸಿದ್ಧಲಿಂಗಯ್ಯನವರು ಸತತವಾಗಿ ಹನ್ನೆರಡು ವರ್ಷಗಳ ಕಾಲ ವಿಧಾನ ಪರಿಷತ್ ಸದಸ್ಯರಾಗಿದ್ದರು. ಈ ಅವಧಿಯಲ್ಲಿ ಬುದ್ಧದೇವನಲ್ಲಿರುವ ಕರುಣೆ, ದಯೆ, ಪ್ರೀತಿ, ಅಪಾರವಾದ ಸಂಯಮ, ಅಂಬೇಡ್ಕರ್ ಅದರಲ್ಲಿದ್ದ ಅಧ್ಯಯನಶೀಲತೆ, ಲೋಹಿಯಾ ಅವರ ಚುರುಕುತನದ ಹುಡುಗಾಟಿಕೆ ಮುಂತಾದುವುಗಳನ್ನೇ ತಮ್ಮ ಪ್ರತಿಭೆಯಲ್ಲಿ ಅರಗಿಸಿಕೊಂಡಿದ್ದಾರೆ. ಕನ್ನಡ ನಾಡುನುಡಿ ಸಂಸ್ಕೃತಿಯೂ ಸೇರಿದ ಹಾಗೆ ಸಹಾಯಕರ, ನಿರ್ಗತಿಕರ ಸಮಸ್ಯೆಗಳನ್ನೊತ್ತು ಬರುವವರೆಲ್ಲರ ಊರುಗೋಲಾಗಿ ನಿಂತು ಕಾನೂನು ಚೌಕಟ್ಟಿನ ಒಳಗೆ ತುಂಬು ಕಳಕಳಿಯಿಂದ ಕೆಲಸ ಮಾಡುತ್ತಾರೆ. ಇವರ ಯಶಸ್ವಿಕಾರ್ಯಕ್ಕಾಗಿ ಅವರ ಅಪಾರ ಅಭಿಮಾನಿಗಳು ದಿನಾಂಕ ೦೪/೦೮/೨೦೦೧ ರಲ್ಲಿ ಬೆಂಗಳೂರಿನ ಯವನಾದಲ್ಲಿ ಅಭಿನಂದನ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಈ ಕಾರ್ಯಕ್ರಮದಲ್ಲಿ ಮಂಗಳೂರಿನ ಕೊರಗರು, ತೋಟಿತಳವಾರರು, ಅಗ್ನಿಶಾಮಕದಳದವರು, ಕಸಗುಡಿಸುವವರಲ್ಲಿ ಹೃದಯ ತುಂಬಿ ಅಭಿನಂದಿಸಿದ್ದು ವಿಶೇಷವೆನಿಸಿತ್ತು.

ಪುಟ್ಟಣ್ಣಕಣಗಾಲ್ ಅವರ ಮುಖಾಂತರ ಸಿನಿಮಾರಂಗಕ್ಕೆ ಪರಿಚಿತರಾದ ಸಿದ್ಧಲಿಂಗಯ್ಯನವರು ಗೀತರಚನಾಕಾರರಾಗಿ, ರಾಗ ಸಂಯೋಜಕರಾಗಿ, ಸಂಗೀತ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಇವರು 'ಧರಣಿಮಂಡಲ ಮಧ್ಯದೊಳಗೆ' ಎಂಬ ಚಲನಚಿತ್ರಕ್ಕೆ ಬರೆದಿರುವ 'ಗೆಳತಿ ಓ ಗೆಳತಿ ....., ಕಾಸನ್ನು ಬೀಸಿ ಪ್ರೀತಿಯ ಬೆಲೆಯನು ನಿಗದಿ ಮಾಡುವ ಅಂದಕರೆ .... ಈ ಗೀತೆಗಳು ತುಂಬಾ ಜನಪ್ರಿಯತೆಯನ್ನು ಪಡೆದಿವೆ. 'ಪ್ರೇಮಯುದ್ಧ' ಸಿನಿಮಾದ ಹಾಡುಗಳು ಕೂಡ ಪ್ರಖ್ಯಾತಿಯಾಗಿವೆ.

ಹಾಗೆಯೇ ಎಪ್ಪತ್ತರ ದಶಕದ ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಸಿದ್ಧಲಿಂಗಯ್ಯನವರದು ಅತ್ಯಂತ ಪ್ರಮುಖ ಹೆಸರಾಗಿದ್ದು ಸೃಜನಶೀಲ ಕವಿಯಾಗಿ ಸ್ವಂತಿಕೆಯ ನೆಲೆಯನ್ನು ಸ್ಥಾಪಿಸಿದ್ದಾರೆ. ೧೯೭೫ ರಲ್ಲಿ 'ಹೊಲೆಮಾದಿಗರಹಾಡು' ೧೯೭೯ ರಲ್ಲಿ 'ಸಾವಿರಾರುನದಿಗಳು' ೧೯೮೨ ರಲ್ಲಿ ಕಪ್ಪುಕಾಡಿನಹಾಡು ಕವನಸಂಕಲನಗಳನ್ನು ಪ್ರಕಟಿಸಿದ್ದಾರೆ. ಅನಂತರ ಮೂರು ಕವನ ಸಂಕಲನಗಳನ್ನು ಸೇರಿ 'ಮೆರವಣಿಗೆ' ಎಂಬ ಸಮಗ್ರ ಕವನಸಂಕಲನವನ್ನು ಅಂಕಿತ ಪುಸ್ತಕ ಪ್ರಕಾಶನದವರು ೨೦೦೦ನೇ ಇಸವಿಯಲ್ಲಿ ಹೊರತಂದಿದ್ದಾರೆ.

೧೯೮೦ ರಲ್ಲಿ 'ಪಂಚಮ' ಮತ್ತು 'ನೆಲಸಮ', ೧೯೮೬ ರಲ್ಲಿ 'ಏಕಲವ್ಯ' ಎಂಬ ಸಮಾಜ ಮುಖಿ ನಾಟಕಗಳನ್ನು 'ಅವತಾರಗಳು' ಎಂಬ ಪ್ರಬಂಧ ಸಂಕಲನವನ್ನು, ೧೯೯೧ ರಲ್ಲಿ 'ಹಕ್ಕಿನೋಟ' ಎಂಬ ವಿಮರ್ಶಾಕೃತಿಯನ್ನು ಹೊರತಂದಿದ್ದಾರೆ. ೧೯೯೭ ರಲ್ಲಿ ಪ್ರಕಟವಾದ 'ಊರುಕೇರಿ' ಇವರ ಬದುಕು ಮತ್ತು ವ್ಯಕ್ತಿತ್ವವನ್ನು ಪರಿಚಯಿಸುವ ವಿಶಿಷ್ಟ ಆತ್ಮಕಥೆಯಾಗಿದೆ. ೧೯೯೭ ರಲ್ಲಿ ಇವರ ಸಂಶೋಧನಾತ್ಮಕ, ವಿದ್ವತ್ಪೂರ್ಣ ಪಿ.ಹೆಚ್.ಡಿ. ಮಹಾಪ್ರಬಂಧವಾದ 'ಗ್ರಾಮದೇವತೆಗಳು' ಕೃತಿಯು ಪ್ರಕಟಗೊಂಡಿದೆ. ಇವುಗಳಲ್ಲದೆ ಹಲವಾರು ಪತ್ರಿಕೆಗಳಲ್ಲಿ ಇವರ ಸಾಹಿತ್ಯನೆಲೆಗಳು ಪ್ರಕಟಗೊಂಡಿದ್ದು, ಈ ಮೂಲಕ ಕನ್ನಡ ಸಾಹಿತ್ಯಲೋಕವನ್ನು ಶ್ರೀಮಂತಗೊಳಿಸಿದ್ದಾರೆ.

'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬ ಮಾತಿನಂತೆ ಆಕಾರದಲ್ಲಿ ವ್ಯಕ್ತಿ ಚಿಕ್ಕವರಂತೆ ಕಂಡರೂ ಅವರ ವ್ಯಕ್ತಿತ್ವ, ಬದುಕು, ಬರಹ, ಸಾಧನೆಗಳೆಲ್ಲವೂ ತ್ರಿವಿಕ್ರಮನಂತಿರುವುದು ಮಹತ್ವದ ವಿಷಯವಾಗಿದೆ.

ಅಧ್ಯಾಯ – ೨

ಅಧ್ಯಯನದ ಸ್ವರೂಪ ಮತ್ತು ಉದ್ದೇಶ

ಇಪ್ಪತ್ತನೆಯ ಶತಮಾನದ ಕನ್ನಡ ಕಾವ್ಯದಲ್ಲಿ ಸಿದ್ಧಲಿಂಗಯ್ಯನವರಿಗೆ ಸ್ಥಾನವಿರುವುದು ಈ ಶತಮಾನದಲ್ಲಿ ಅವರು ದಲಿತರ ಆದಿಕವಿ ಎಂಬ ಕಾರಣಕ್ಕೆ. ಈ ಶತಮಾನದ ಎಲ್ಲಾ ದಲಿತರ ಆತ್ಮಪ್ರತಿನಿಧೀಕರಣದ ಎಲ್ಲಾ ಸಮಸ್ಯೆಗಳೂ ಈ ಕವಿಯಲ್ಲಿ ಎದ್ದು ಕಾಣುತ್ತವೆ. ಸಿದ್ಧಲಿಂಗಯ್ಯನವರ ವ್ಯಕ್ತಿತ್ವ ಅವರ ಕಾವ್ಯದ ಮಾನವೀಯ ತುಡಿತಕ್ಕೆ ತಾಳಿಕೆಯಾಗುವಂತದ್ದು. ನೊಂದವರ ಆಕ್ರಂದನವನ್ನು ಹಾಡಾಗಿಸಿದ ಕಾವ್ಯದ ನಾಡಿಬಡಿತಕ್ಕೆ ಹೊಸಬಗೆಯ ನಾದವನ್ನು ಜೀವವನ್ನು ತಂದವರು. ಅವರ ಕಾವ್ಯದ ಆಶಯಗಳು ತುಡಿತ ಮತ್ತು ಕನಸುಗಳು ಇಡೀ ಅವರ ಕಾವ್ಯ ಶರೀರದ ತುಂಬ ಚಿಗಿತುಕೊಂಡಿವೆ. ಈ ಪರಿಯ ಹಂಬಲ ಇಡೀ ಕನ್ನಡ ಕಾವ್ಯಲೋಕದಲ್ಲಿಯೇ ಅಪರೂಪದ್ದು. ಸಿದ್ಧಲಿಂಗಯ್ಯನವರು ಸಮಷ್ಠಿ ಚಿಂತನೆಯನ್ನು ತಮ್ಮ ಸಾಹಿತ್ಯದ ವಸ್ತುವಾಗಿಸಿಕೊಂಡಿದ್ದಾರೆ. ತಮ್ಮ ಕವಿತೆಗಳ ಹೊಸ ಮೈಯಲ್ಲಿ ನ್ಯಾಯದ ಆಕ್ರಂದನವನ್ನು ಹಾಡಾಗಿಸುತ್ತಿದ್ದರೂ ಅದರಾಳದಲ್ಲಿ ಪುರಾತನ ಸಮಷ್ಟಿಸ್ಮೃತಿಬಿಂಬವನ್ನು ತೋರುತ್ತಾರೆ.

ಇಂತಹ ಸಮಷ್ಟಿಸ್ಮೃತಿ ಸಂವೇದನೆಯ ಕಾರಣವಾಗಿಯೆ ಸಿದ್ಧಲಿಂಗಯ್ಯನವರು ಜನತೆಯ ಕವಿಯಾಗಿದ್ದಾರೆ. ಭಾಷೆಯ ಸೊಬಗು ಕೂಡ ಅವರ ಸಾಹಿತ್ಯ ವಿಭಿನ್ನತೆಯನ್ನು ಗುರ್ತಿಸುವ ಪ್ರಮುಖ ಅಂಶವಾಗಿರುವುದನ್ನು ನಾವು ನೋಡಬಹುದು. ಅವರ ಕಾವ್ಯದ ಭಾಷೆ ಬರವಾಗಿದ್ದರೂ, ಹೊಸ ರೂಪ ನಯವಾಗಿಲ್ಲದಿದ್ದರೂ ಅದರ ಒಳಮೈ ಅತ್ಯಂತ ಕೋಮಲವಾದದ್ದು ಜೀವದಷ್ಟೆ ಸೂಕ್ಷ್ಮವಾದದ್ದು, ಸಂಕೀರ್ಣವಾದದ್ದು. ಯಾವಾಗಲೂ ನೊಂದವರ ದನಿ ಗಡುಸಾಗಿಯೇ ಇರುತ್ತದೆಂಬುದಕ್ಕೆ ಸಿದ್ಧಲಿಂಗಯ್ಯನವರ ಭಾಷೆ ಉತ್ತಮ ಉದಾಹರಣೆಯಾಗಬಲ್ಲದು. ಸಿದ್ಧಲಿಂಗಯ್ಯನವರ ಹೊರಮೈಯನ್ನಷ್ಟೆ ಮುಟ್ಟಿದರೆ ನಿಜವಾದ ಸಂವೇದನೆಯ ಅನುಸಂಧಾನವಾಗಲಾರದು. ಬಹುಪಾಲು ದಲಿತ ಸಮುದಾಯದ ಲೇಖಕರೆಲ್ಲರ ಬರಹಗಳನ್ನು ಹೊರಗಿನಿಂದಲೇ ಓದಿ ಹೊರ ಮೈಯನ್ನಷ್ಟೆ ಮುಟ್ಟಿ ತೀರ್ಮಾನಿಸುವ ಸಾಧ್ಯತೆಗಳು ಹೆಚ್ಚಾಗಿವೆ. ಆದರೆ ಸಿದ್ಧಲಿಂಗಯ್ಯನವರ ಕಾವ್ಯದ ಒಳದನಿ ಸಮಷ್ಟಶೀಲವಾಗಿರುವಂತೆಯೆ ಎಲ್ಲದನ್ನು ಒಳಗೊಳ್ಳುವಂತದ್ದು.

ಸಮಾಜ, ಸಾಹಿತ್ಯ ಹಾಗೂ ಹೋರಾಟಗಳು ಪರಸ್ಪರ ಪೂರಕ – ಪ್ರೇರಕ ಎಂಬಂತೆ ಎಪ್ಪತ್ತರ ದಶಕದಲ್ಲಿ ವ್ಯಕ್ತಗೊಂಡವು. ಸಾಹಿತ್ಯ ಮತ್ತು ಚಳುವಳಿ ಏಕೀಭವಿಸುತ್ತಲೆ ತುಳಿತಕ್ಕೊಳಪಟ್ಟ ಜನಸಮುದಾಯದಲ್ಲಿ ಸಮಾಜದ ಭೀಕರ ವಾಸ್ತವತೆಯನ್ನು ಅಭಿವ್ಯಕ್ತಿಸುವುದರ ಜೊತೆಗೆ, ಬದುಕಿನ ಅಸ್ತಿತ್ವದ ಹುಡುಕಾಟ ಕೂಡ ಗೋಚರಿಸುತ್ತದೆ. ತಳಸಮುದಾಯದಿಂದ ಬಂದಂತಹ ಹಲವು

ಲೇಖಕರು ತಮ್ಮ ಸಾಹಿತ್ಯ ಹಾಗೂ ಹೋರಾಟದ ಮೂಲಕ ಶೋಷಿತರ ಬದುಕು ಮತ್ತು ಶೋಷಕರ ದೌರ್ಜನ್ಯಗಳನ್ನು ವಾಸ್ತವದ ತಳಹದಿಯ ಮೇಲೆ ಕಟ್ಟಿಕೊಡಲಾರಂಬಿಸಿದರು. ಎಪ್ಪತ್ತರ ದಶಕ ದಲಿತ–ಬಂಡಾಯ ಸಾಹಿತ್ಯದಲ್ಲಿ ಪ್ರಧಾನವಾಗಿ ದಲಿತರ ಮೇಲಿನ ದೌರ್ಜನ್ಯ, ಹಸಿವು, ಬಡತನ, ಸಾಮಾಜಿಕ ಅಸಮಾನತೆ, ಅಪಮಾನ ಮೊದಲಾದವುಗಳ ನಡುವೆಯೆ ದಲಿತರ ಸ್ವಾಭಿಮಾನ ವ್ಯಕ್ತಗೊಂಡಿದೆ.

ಸಿದ್ಧಲಿಂಗಯ್ಯನವರು ಎಪ್ಪತ್ತರ ದಶಕದ ದಲಿತ – ಬಂಡಾಯ ಕಾವ್ಯಕ್ಕೆ ತಮ್ಮ ಪ್ರಖರವಾದ ಪ್ರತಿಭಟನಾತ್ಮಕ ಕವಿತೆಗಳ ಮೂಲಕ ಆರಂಭಿಕ ಚಾಲನೆ ಕೊಟ್ಟ ಕನ್ನಡದ ಪ್ರಮುಖ ಕವಿ. ಮಡಿವಂತ ಸಮಾಜನಿಬ್ಬೆರಗಾಗಿ ದಲಿತ ಸಮುದಾಯವನ್ನು ನೋಡುವಂತೆ ಮಾಡಿದವರು. ತಮ್ಮ ಸಾಹಿತ್ಯ ಹಾಗೂ ಹೋರಾಟದ ಮುಖೇನ ಒಟ್ಟು ಶೋಷಕ ವ್ಯವಸ್ಥೆಯನ್ನು ತಲ್ಲಣಗೊಳಿಸಿದ ಬಹುಮುಖಿ ಚಿಂತಕರು. ಇಡೀ ಕನ್ನಡ ಸಾಹಿತ್ಯಕ್ಕೆ ಶೋಷಿತ ಸಮುದಾಯದ ನೋವಿನಾಳದ ಬದುಕನ್ನು ಪರಿಚಯಿಸುತ್ತಲೇ, ಸಾಹಿತ್ಯ ಹಾಗೂ ಹೋರಾಟಗಳ ಸಾಮಾಜಿಕ ಜವಬ್ದಾರಿಯನ್ನು ಪ್ರತಿಪಾದಿಸಿದವರು. ಇಂತಹ ಮಹತ್ವದ ಲೇಖಕರೊಬ್ಬರ ಜೀವನ, ಹೋರಾಟ, ವ್ಯಕ್ತಿತ್ವ, ಸಾಧನೆ, ಸಾಹಿತ್ಯದ ಬಗೆಗೆ ಹಲವಾರು ಲೇಖನಗಳು, ಚರ್ಚೆಗಳು, ವಿಮರ್ಶೆಗಳು, ಸಂಶೋಧನಾಗ್ರಂಥಗಳು ಕಂಡುಬಂದಿವೆಯಾದರೂ ಈವರೆಗೂ ಅವರ ಭಾಷೆ ಮತ್ತು ಅವರಸಂವೇದನಾ ಶಕ್ತಿಯ ಬಗೆಗೆ ಯಾವೊಂದು ಲೇಖನಗಳು ಪ್ರಕಟಗೊಂಡಿಲ್ಲ. ಅದಕಾರಣ ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ಮೂಡಿಬಂದಿರುವ ದಲಿತಸಂವೇದನೆ ಹೇಗೆ ಸಮಷ್ಟಿಯನ್ನು ಎಚ್ಚರಿಸಬಲ್ಲದೆಂಬುದನ್ನು ತಿಳಿಸುವುದು ಈ ನನ್ನ ಸಂಪ್ರಬಂಧದ ಉದೇಶವಾಗಿದೆ.

"೯ ಹೊಲೆಮಾದಿಗರಹಾಡು" ವಿನಿಂದ ಶುರುವಾಗಿ ತೀರಾ ಇತ್ತೀಚಿನ ತನಕ ಸಿದ್ಧಲಿಂಗಯ್ಯನವರ ಕಾವ್ಯವನ್ನು ಈ ಶತಮಾನದ ದಲಿತರ, ಕೆಳಜಾತಿಗಳ ಆತ್ಮಪ್ರತಿನಿಧೀಕರಣದ ಮೂರು ಪ್ರಧಾನ ಆಶಯಗಳು ರೂಪಿಸಲ್ಪಟ್ಟಿರುವುದನ್ನು ನೋಡಬಹುದು. ಈ ಬಗೆಯ ಆಶಯಗಳು ಹೊಸ ರೀತಿಯ ಪ್ರಜ್ಞಾವಂತ ದಲಿತ ತನ್ನ ಭೂತ, ವರ್ತಮಾನ, ಭವಿಷ್ಯವನ್ನು ಕಾಣುತ್ತಿದ್ದ ಬಗೆಯನ್ನು ತೆರೆದು ತೋರಿಸುವಂತಹುಗಳು. ಈ ಕಾರಣಕ್ಕಾಗಿ ಕವಿಯ ಕಾವ್ಯ ದಲಿತರ ಪ್ರಣಾಳಿಕೆಯಂತಾಗಿ ನಾಡಿನಾದ್ಯಂತ ಪ್ರಸಿದ್ಧಿಯಾಗಿದೆ. ಅಂದರೆ ದಲಿತರಿಗೆ ಶೋಷಣೆ, ದಮನಗಳಿಂದ ಹೊರತಾದ ಬೇರೆ ದಾರಿಯೇ ಇಲ್ಲ ಎಂಬ ಚಾರಿತ್ರಿಕ ಗ್ರಹಿಕೆ, ಆತ್ಮಾನುಕಂಪ ಮತ್ತು ಆಕ್ರೋಶಗಳ ನಡುವೆ ತುಯ್ಯಲಾಡುತ್ತಿದ್ದ ರಾಜಕೀಯ ಸ್ಥಿತಿ, ಚರಿತ್ರೆಯ ವಿಕಾಸ ಪಥದಲ್ಲಿ ಆಧುನೀಕರಣ ಮಾತ್ರ ತಮ್ಮ ಬಿಡುಗಡೆಯ ಏಕಮಾತ್ರ ದಾರಿ ಎಂಬ ಆಶಾವಾದ ೯" ಈ ಮೂರು ಮುಖ್ಯ ಆಶಯಗಳನ್ನಿಟ್ಟುಕೊಂಡು ತಮ್ಮೆಲ್ಲಾ ಕಾವ್ಯ ನಾಟಕಗಳನ್ನು ಹೇಗೆ ಪ್ರತಿಬಿಂಬಿಸಿದ್ದಾರೆಂಬುದನ್ನು ನನ್ನ ಅಧ್ಯಯನದ ವ್ಯಾಪ್ತಿಯೊಳಗೆ ಹೇಳುವ ಪ್ರಯತ್ನವನ್ನು ಮಾಡಿದ್ದೇನೆ.

ಜೊತೆಗೆ ಎಪ್ಪತ್ತರ ದಶಕದಲ್ಲಿ ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ದಲಿತ ಚಳುವಳಿಗಳು ಪರಸ್ಪರ ಈ ಆಶಯಗಳನ್ನು ರೂಪಿಸಿಕೊಂಡಿದ್ದವು. ದಲಿತ ಹೋರಾಟದ ಎಲ್ಲ ಆಶಯಗಳೂ ಕವಿಯ ಕಾವ್ಯದಲ್ಲಿ ಪ್ರತಿಧ್ವನಿಸಿದವು. ಅಂಬೇಡ್ಕರ್ ಹಾಗೂ ಮಾರ್ಕ್ಸ್‌ವಾದಗಳು ಹೇಗೆ ಸಿದ್ಧಲಿಂಗಯ್ಯನವರ ಜೀವನ ಹಾಗೂ ಸಾಹಿತ್ಯವನ್ನು ಪ್ರಭಾವಿಸಿವೆ ಎಂಬುರು ಸಹ ಇಲ್ಲಿ ಗಮನಾರ್ಹ.

ಕಾವ್ಯ, ನಾಟಕ, ಆತ್ಮಕಥೆಗಳಲ್ಲಿ ಸಿದ್ಧಲಿಂಗಯ್ಯನವರು ಹೇಗೆ ಸೂಕ್ಷ್ಮವಾಗಿ ದಲಿತ ಸಂವೇದನೆಯನ್ನು ವ್ಯಕ್ತಪಡಿಸಿದ್ದಾರೆಂಬುದನ್ನು ಹೇಳುವುದರ ಜೊತೆಗೆ ಎಪ್ಪತ್ತರ ದಶಕದ ಸಾಮಾಜಿಕ, ರಾಜಕೀಯ, ಸಾಹಿತ್ಯ, ಸಾಂಸ್ಕೃತಿಕ ಸಂದರ್ಭದ ಸ್ಥಿತ್ಯಂತರಗಳನ್ನು [ಕಾವ್ಯ, ನಾಟಕ, ಆತ್ಮಕಥೆಗಳು] ತಿಳಿಯಬಹುದಾಗಿದೆ. ತಾರತಮ್ಯದ ವಿರುದ್ಧ ಅಸ್ಪೃಶ್ಯನೊಬ್ಬನ ಸಿಟ್ಟು, ಆಕ್ರೋಶ, ವಿಡಂಬನೆಯ ಜೊತೆಗೆ ಬದುಕಿನ ಗಾಢ ಆಪ್ತತೆಯನ್ನು ನೋಡಬಹುದಾಗಿದೆ.

"೧೦ ಕುವೆಂಪು ಅವರಲ್ಲಿ ಕಾಣುವ ದಟ್ಟ ಸ್ವಭಾವವನ್ನು ಈ ಕವಿಯಲ್ಲೂ ಮೊದಲು ಕಾಣಬಹುದಾಗಿತ್ತು. ಏಕೆಂದರೆ ಕನ್ನಡದಲ್ಲಿ ಕ್ರಾಂತಿಕವಿತೆ ಬರೆವಾತನಿಗೆ ಕುವೆಂಪು ವ್ಯೂಹದಿಂದ ತಪ್ಪಿಸಿಕೊಳ್ಳಲು ಸಾಧ್ಯವೆ ಇಲ್ಲ. ಸಿದ್ಧಲಿಂಗಯ್ಯನವರ ಘಟ್ಟ ದೇಹದಲ್ಲಿ ಕುವೆಂಪು ಆವಾಹನೆಯಾದದ್ದು ಕನ್ನಡ ಪರಂಪರೆಯ ಮೂಲಾಧಾರಗಳ ದೃಷ್ಟಿಯಿಂದ ನಿರೀಕ್ಷಿತವೇ ಆಗಿತ್ತು ೧೦".

ಹೀಗೆ ತಮ್ಮ ಸಾಹಿತ್ಯದ ಮೂಲಕ ಕ್ರಾಂತಿಯನ್ನೆಬ್ಬಿಸಿದ, ಸಾಹಿತ್ಯ ಕ್ರಾಂತಿಯ ಮೂಲಕ ಸಮಾಜದಲ್ಲಿ ಬದಲಾವಣೆಗಳನ್ನುಂಟು ಮಾಡಿ ತಮ್ಮದೆ ವಿಶಿಷ್ಟ ಶೈಲಿಯನ್ನು ಅಥವಾ ಭಾಷೆಯನ್ನು ರೂಪಿಸಿಕೊಂಡವರು ಸಿದ್ಧಲಿಂಗಯ್ಯನವರು. ಅವರ ವಿಭಿನ್ನ ಭಾಷೆ ಮತ್ತು ಆಂತರ್ಯದಲ್ಲಿ ಮಿಡಿಯುತ್ತಿದ್ದ ಸಂವೇದನೆಗಳು ಅವರನ್ನು ವಿಶಿಷ್ಟ ವ್ಯಕ್ತಿಯನ್ನಾಗಿಸಿವೆ ಎಂದು ಹೇಳಬಹುದು.

ಅಧ್ಯಾಯ – ೩

ಸಿದ್ಧಲಿಂಗಯ್ಯನವರ ಕಾವ್ಯಗಳಲ್ಲಿ ದಲಿತ ಸಂವೇದನೆ

"೧೧ ಕನ್ನಡ ಕಾವ್ಯ ಪರಂಪರೆಯಲ್ಲಿ ದಲಿತ ಸಂವೇದನೆ ಎಂಬುದು ಹನ್ನೆರಡನೆಯ ಶತಮಾನದ ವಚನಕಾರರಾದ ಮಾದಾರ ಚೆನ್ನಯ್ಯನಿಂದ ಪ್ರಾರಂಭವಾಗುತ್ತದೆ. ಹಾಗೆಯೇ ಹದಿನೇಳನೆ ಶತಮಾನದ ಮಲೈಮಾದೇಶ್ವರ ಮತ್ತು ಮಂಟೇಸ್ವಾಮಿ ಮಹಾಕಾವ್ಯಗಳಲ್ಲಿ ದಲಿತ ಸಂವೇದನೆ ಸ್ಪಷ್ಟವಾಗಿ ಗೋಚರಿಸುತ್ತದೆ ೧೧". ಆಧುನಿಕ ದಲಿತ ಕಾವ್ಯವು ಬಂಡಾಯ ಚಳುವಳಿಯ ಮೂಲಕ ಹುಟ್ಟಿಕೊಂಡಿರುವುದರಿಂದ ಶತಶತಮಾನಗಳಿಂದ ನೋವನ್ನನುಭವಿಸಿದ, ಮೂಕ ವೇದನೆಯನ್ನು ಅನುಭವಿಸುತ್ತಿದ್ದ ದಲಿತ ಸಮುದಾಯ ಮೊದಲ ಬಾರಿಗೆ ತನ್ನ ಸಿಟ್ಟು ಸೆಡವುಗಳನ್ನು ವ್ಯಕ್ತಪಡಿಸಿದ್ದು ಕಾವ್ಯದ ಮೂಲಕ.

"೧೨ ದಲಿತ ಸಂವೇದನೆ ಎಂಬುದು ಬಂಡಾಯ ಸಾಹಿತ್ಯದೊಳಗಿನ ಅಭಿವ್ಯಕ್ತಿ ಕ್ರಮ. ದಲಿತ ಎಂದರೆ ಸೀಳಲ್ಪಟ್ಟವನು, ಸಮಾಜದ ಕಟ್ಟಕಡೆಯ ಮನುಷ್ಯ, ಅಸ್ಪೃಶ್ಯ ಎಂದೆಲ್ಲಾ ಅರ್ಥಗಳಿವೆ. ಕನ್ನಡದಲ್ಲಿ ದಲಿತಸಂವೇದನೆಗೆ ತನ್ನದೆ ಆದ ವೈಶಿಷ್ಟ್ಯಗಳಿವೆ ೧೨". ಬಂಡಾಯ ಸಾಹಿತ್ಯದಿಂದ ತಮ್ಮದೆ ಆದ ಅಸ್ತಿತ್ವವನ್ನು ಬಯಸುವ ದಲಿತಲೇಖಕರು ಮತ್ತು ಕೆಲವು ನವ್ಯ ವಿಮರ್ಶಕರು ಬಂಡಾಯದಿಂದ ಬೇರೆ ಮಾಡುವ ಕಾರ್ಯ ಕೈಗೊಂಡರು. ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಯ ಚಟುವಟಿಕೆಗಳಿಗೂ ದಲಿತ ಸಾಹಿತ್ಯದ ಅಭಿವ್ಯಕ್ತಿ ಕ್ರಮಕ್ಕೂ ಸಂಬಂಧವಿದೆ. ಜೊತೆಗೆ ಹೊಸದಾಗಿ ಅಕ್ಷರಸ್ಥರಾದ ದಲಿತ ಲೇಖಕರು ತಮ್ಮ ಜನಾಂಗಕ್ಕಾಗಿರುವ, ತಮಗಾಗಿರುವ ಸಾಮಾಜಿಕ ಅಪಮಾನ, ಹಿಂಸೆ, ಅನ್ಯಾಯಗಳ ವಿರುದ್ಧ ದನಿ ಎತ್ತಿದ ಕಾಲಕ್ಕೆ ತಮ್ಮದೇ ಆದ ಸಾಹಿತ್ಯಾಭಿವ್ಯಕ್ತಿಯೂ ಸಾಧ್ಯವಾಯಿತು.

ಆಧುನಿಕ ದಲಿತ ಕಾವ್ಯವು ಡಿ. ಗೋವಿಂದದಾಸ ಅವರಿಂದ ಪ್ರಾರಂಭವಾದರೂ ಚಳುವಳಿಯ ಕಾವ್ಯವಾಗಿ ಮೊಟ್ಟಮೊದಲು ಪ್ರಕಟವಾದದ್ದು ಡಾ। ಸಿದ್ಧಲಿಂಗಯ್ಯನವರ 'ಹೊಲೆಮಾದಿಗರಹಾಡು' ಕವನ ಸಂಕಲನದ ಮೂಲಕ.

ದಲಿತ ಚಳುವಳಿ ಹಾಗೂ ದಲಿತ ಸಾಹಿತ್ಯ ಕರ್ನಾಟಕದ ಸಾಮಾಜಿಕ ಬದುಕು ಮತ್ತು ಕನ್ನಡ ಸಾಹಿತ್ಯಕ್ಕೆ ಹೊಸ ದಿಕ್ಕನ್ನೆ ತೋರಿಸಿವೆ. ಮುಖ್ಯವಾಗಿ ನೋವಿನ ಅಚ್ಚ ಅಸಲಿ ದಲಿತ ಅನುಭವದಿಂದ ಮೂಡಿಬಂದ ಸಿದ್ಧಲಿಂಗಯ್ಯನವರ ಕಾವ್ಯ ಆಧುನಿಕ ಕನ್ನಡ ಕಾವ್ಯಕ್ಕೆ ಒಂದು ಹೊಸ ದಾರಿಯನ್ನು ತೋರಿ, ಕನ್ನಡ ಕಾವ್ಯದ ಪರಿಧಿಯನ್ನು ವಿಸ್ತರಿಸಿದೆ.

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ, ಎಲ್ಲಾ ಬಗೆಯ ಸಾಮಾಜಿಕ ವಲಯಗಳಿಂದ ಅಲಕ್ಷಿಸಲ್ಪಟ್ಟಿದ್ದ ದಲಿತರ ಬದುಕಿನ ಒಳ ತುಮುಲಗಳನ್ನು ವಸ್ತು ನಿಷ್ಠವಾಗಿ ತಮ್ಮ ಕಥೆ, ಕಾದಂಬರಿಗಳ ಮೂಲಕ ದೇವನೂರು ಮಹದೇವ ಅವರು ಅಭಿವ್ಯಕ್ತಿಸಿದ್ದರೆ; ಸಿದ್ಧಲಿಂಗಯ್ಯನವರು ತಮ್ಮ ಕಾವ್ಯ, ನಾಟಕಗಳ ಮುಖೇನ ಅವುಗಳನ್ನು ತೆರೆದಿಡುವಲ್ಲಿ ಯಶಸ್ವಿಯಾಗಿದ್ದಾರೆ. ಜೊತೆಗೆ ಶ್ರೇಣೀಕೃತ ಸಮಾಜದಲ್ಲಿನ ಅಸ್ಪೃಶ್ಯಜನಾಂಗಗಳ ಎಲ್ಲಾ ಬಗೆಯ ಸ್ಥಿತಿಗತಿಗಳನ್ನು ಕಾವ್ಯದ ತೆಕ್ಕೆಗೆ ತರಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಪರಂಪರೆಯ ಸತ್ವವನ್ನು ಮೈಗೂಡಿಸಿಕೊಳ್ಳುತ್ತಲೇ. ಒಟ್ಟು ಪರಂಪರೆಯನ್ನು ಆತ್ಮಾವಲೋಕನಕ್ಕೆ ಒಳಗು ಮಾಡುತ್ತ ವಾಸ್ತವ ಬದುಕಿನ ನಿಜದ ನೆಲೆಯನ್ನು ಕಂಡುಕೊಂಡಿದ್ದಾರೆ. ಇವರು ಕಾವ್ಯದ ಮೂಲಕ ಉಂಟುಮಾಡಿದ ತಲ್ಲಣ, ಬೆರಗು ಹುಟ್ಟಿಸುವಂತಹದು. ಈ ಹಿಂದಿನ ಕನ್ನಡ ಕಾವ್ಯಪರಂಪರೆಯ ವಸ್ತು, ಆಶಯ ಆಲೋಚನೆ, ಅಭಿವ್ಯಕ್ತಿಯ ಶೈಲಿಯ ಕ್ರಮಕ್ಕಿಂತ ಸಿದ್ಧಲಿಂಗಯ್ಯನವರ ಕಾವ್ಯ ವಿಶಿಷ್ಟವೆನಿಸಿತು. "೧೩ ಸಿದ್ಧಲಿಂಗಯ್ಯ ಬರೆದದ್ದು ಎಲ್ಲ ಬಡವರ ಪರವಾಗಿ. ಶ್ರೀ ಕುವೆಂಪು ಅವರ ತರುವಾಯ ಸಿದ್ಧಲಿಂಗಯ್ಯನವರೇ ನಂಬರ್ ಎರಡು ಅವರಷ್ಟು ಭಕ್ತಿಪೂರ್ವಕವಾಗಿ ಬಂಡಾಯದವರಲ್ಲಿ ಬೇರೆ ಯಾರು ಬರೆದಿಲ್ಲ. ಕಾವ್ಯ ನಿಜವಾದ ಖಡ್ಗ ಆದದ್ದು ಸಿದ್ಧಲಿಂಗಯ್ಯನವರ ಕೈಯಲ್ಲಿ ೧೩" ಎಂಬ ಕಟ್ಟೀಮನಿಯವರ ಮಾತುಗಳು ಅಕ್ಷರಶಃ ಸತ್ಯವೆನಿಸುತ್ತವೆ.

ಸಿದ್ಧಲಿಂಗಯ್ಯನವರ ಒಟ್ಟು ಕಾವ್ಯಗಳಲ್ಲಿ 'ಹೊಲೆಮಾದಿಗರಹಾಡು', 'ಸಾವಿರಾರುನದಿಗಳು', 'ಕಪ್ಪುಕಾಡಿನಹಾಡು', 'ಮೆರವಣಿಗೆ' ಗಳನ್ನು ನನ್ನ ಅಧ್ಯಯನದ ದೃಷ್ಟಿಯಿಂದ ಆಯ್ಕೆ ಮಾಡಿಕೊಂಡಿದ್ದೇನೆ. ಈ ಕಾವ್ಯಗಳಲ್ಲಿ ಸಿದ್ಧಲಿಂಗಯ್ಯನವರ ಭಾಷೆ ಮತ್ತು ಸಂವೇದನೆಗಳು ಹೇಗೆ ಮಿಳಿತಗೊಂಡಿವೆ ಎಂಬುದನ್ನು ಈ ಅಧ್ಯಾಯದಲ್ಲಿ ನೋಡಬಹುದು.

ಸಿದ್ಧಲಿಂಗಯ್ಯನವರು ಬಾಲ್ಯದಲ್ಲಿಯೇ ಕವಿ ಮನಸ್ಸಿನ ಸಂವೇದನಾಶೀಲಗುಣವನ್ನು ಪ್ರಜ್ಞಾಪೂರ್ವಕವಾಗಿ ತಮ್ಮೊಳಗೆ ಗರ್ಭೀಕರಿಸಿಕೊಂಡಿದ್ದರು. ಪ್ರಾಥಮಿಕ ಶಾಲಾ ವಿದ್ಯಾರ್ಥಿಯಾಗಿದ್ದಲೇ ಕವನಗಳನ್ನು ಓದುವ, ಬರೆಯುವ ಕೌಶಲವನ್ನು ಅಥವಾ ಹವ್ಯಾಸವನ್ನು ಕರಗತ ಮಾಡಿಕೊಂಡಿದ್ದರು. ಇವರ ಕಾವ್ಯಪ್ರಪಂಚ ಗಟ್ಟಿಗೊಳ್ಳಲು ಪ್ರಮುಖ ಕಾರಣಗಳೆಂದರೆ ಬಾಲ್ಯದ ಪರಿಸರ, ಅನುಭವ ಮತ್ತು ವಿದ್ಯಾಭ್ಯಾಸಗಳೆಂದು ಹೇಳಬಹುದು.

ಜೀವಪರ ಅಂತಃಕರಣವುಳ್ಳ ಸಿದ್ಧಲಿಂಗಯ್ಯನವರ ಸಾಹಿತ್ಯದ ಒಟ್ಟು ಆಶಯ ಶೋಷಿತ ಹಾಗೂ ಶೋಷಕರ ಬದುಕಿನ ನಡುವಿನ ಅಮಾನವೀಯ ಅಂತರವನ್ನು ಇಲ್ಲವಾಗಿಸುವುದು. ಇವರ ಒಟ್ಟು ಚಿಂತನಶೀಲ ಆಲೋಚನೆಯೇ ಮನುಷ್ಯ ಸಂಬಂಧಗಳ ಬೆಸುಗೆಯ ಬುನಾದಿಯ ಮೇಲೆ ಜಾತ್ಯಾತೀತ, ವರ್ಗಾತೀತ ಸಂವೇದನಾಶೀಲ ಬದುಕನ್ನು ಕಟ್ಟುವುದಾಗಿದೆ. ವಿಶಾಲ

ಆಲೋಚನೆಯನ್ನು ಬೆಳೆಸಿಕೊಂಡು ಸಾಹಿತಿ, ಬೌದ್ಧಿಕ ಹಾಗೂ ಸಾಮಾಜಿಕ ಬದುಕಿನ ಸಂಘರ್ಷದಲ್ಲಿ ಮಾಗುತ್ತಾ ಹೋದಂತೆ ಜಾತ್ಯಾತೀತವಾದ ಜೀವನಪರಸ್ಪಂದನದ ಕಡೆಗೆ ತನ್ನನ್ನು ತಾನು ತೆರೆದುಕೊಳ್ಳುತ್ತಾನೆ. ಈ ಬಗೆಯ ಚಿಂತನೆಯಲ್ಲಿ ಸಿದ್ಧಲಿಂಗಯ್ಯನವರು ತಮ್ಮನ್ನು ತಾವೇ ಆತ್ಮವಿಮರ್ಶೆಗೆ ಒಳಗು ಮಾಡಿಕೊಂಡು ಪರಿಪಕ್ವವಾಗಿರುವುದನ್ನು ಅವರ ಈಗಿನ 'ಮೆರವಣಿಗೆ' ಕವನ ಸಂಕಲನದಲ್ಲಿ ನೋಡಬಹುದು.

ಒಂದು ದೇಶದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಆ ನೆಲದಲ್ಲೆ ಮೂಡಿಬಂದ ಸಾಹಿತ್ಯ ಕೈಗನ್ನಡಿಯಾಗಬಲ್ಲದು. ಒಬ್ಬ ಸಾಹಿತಿ ಇಡೀ ವ್ಯಕ್ತಿತ್ವವನ್ನು ಅವನಿಗಿರುವ ಸಮಾಜಿಕ ಕಳಕಳಿಯನ್ನು ಆತನ ಒಟ್ಟು ಸಾಹಿತ್ಯ ಪ್ರತಿಬಿಂಬಿಸುತ್ತದೆ. ಹಾಗಾಗಿ ಸಿದ್ಧಲಿಂಗಯ್ಯನವರ ಒಟ್ಟು ವ್ಯಕ್ತಿತ್ವದ ಹಂತಹಂತದ ಬೆಳವಣಿಗೆಯನ್ನು ಅವರ 'ಹೊಲೆಮಾದಿಗರಹಾಡು', 'ಸಾವಿರಾರುನದಿಗಳು', 'ಕಪ್ಪುಕಾಡಿನಹಾಡು', 'ಮೆರವಣಿಗೆ' ಕವನಸಂಕಲನಗಳಲ್ಲಿ ಗುರುತಿಸಬಹುದು.

ಕರ್ನಾಟಕದಲ್ಲಿ ೧೯೭೦ರ ದಶಕದಲ್ಲಿ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ವಲಯಗಳಲ್ಲಿ ಪುನರ್ ಮೌಲ್ಯೀಕರಣದ ಕಾವು ಏರುತ್ತಿದ್ದ ಸಂಧಿಗ್ದಕಾಲದಲ್ಲಿ ಸಾಹಿತ್ಯವಲಯದಲ್ಲಿ ಬಿರುಗಾಳಿಯ ಅಲೆಯನ್ನು ಎಬ್ಬಿಸಿದ್ದು ೧೯೭೦ರಲ್ಲಿ ಪ್ರಕಟವಾದ ಸಿದ್ಧಲಿಂಗಯ್ಯನವರ 'ಹೊಲೆಮಾದಿಗರಹಾಡು' ಕವನಸಂಕಲನ. ಸಿದ್ಧಲಿಂಗಯ್ಯನವರು ರಚಿಸಿರುವ ಸಾಹಿತ್ಯ ಹಾಗೂ ಹೋರಾಟದೊಂದಿಗಿನ ಅನುಭವ ಪರಸ್ಪರ ಪೂರಕವಾದವು. ಇವರ ಒಟ್ಟು ಕಾವ್ಯಗಳಲ್ಲಿ ಹೆಚ್ಚಿನವು ಚಳುವಳಿಯ ಒತ್ತಡದಿಂದ ಮೂಡಿ ಬಂದವುಗಳು ಇವರ ಕಾವ್ಯವು ಹಾಡಾಗುವ ಮೂಲಕ ಒಟ್ಟು ದಲಿತ-ಬಂಡಾಯ, ರೈತ ಚಳುವಳಿಗಳನ್ನು ಪ್ರಭಾವಕ್ಕೆ ಒಳಪಡಿಸಿದೆ. ಜೊತೆಗೆ ಶೋಷಿತರಲ್ಲಿ ಸಂಘಟನಾತ್ಮಕ ಬಲವನ್ನು ಪ್ರಬಲಗೊಳಿಸುವಲ್ಲಿ ಗಮನಾರ್ಹ ಕೊಡುಗೆಯಾಗಿದೆ. ಇಡೀ ಶೋಷಿತ ಸಮುದಾಯವನ್ನು ಸಾಂಸ್ಕೃತಿಕವಾಗಿ ಒಗ್ಗೂಡಿಸುವ ಜೀವಮುಖಿ ಕಾವ್ಯ ಇವರದಾಗಿದೆ. ಆಧುನಿಕ ಕನ್ನಡ ಸಾಹಿತ್ಯ ಬೌದ್ಧಿಕ ಚಿಂತನೆಗೆ ಹೆಚ್ಚು ಒತ್ತುಕೊಟ್ಟಿದ್ದ ಸಂದರ್ಭದಲ್ಲಿ ಸಿದ್ಧಲಿಂಗಯ್ಯನವರು ತಮ್ಮ 'ಹೊಲೆಮಾದಿಗರಹಾಡು' ಸಂಕಲನದ ಮೂಲಕ ತಳಸಮುದಾಯದ ಬದುಕನ್ನು ಕಾವ್ಯವಾಗಿಸಿದರು.

ದಲಿತ ಸಾಹಿತ್ಯಕ್ಕೆ ಭದ್ರಬುನಾದಿಯನ್ನು ರೂಪಿಸಿ ದಲಿತಧ್ವನಿ, ದಲಿತ ಪ್ರಜ್ಞೆ, ದಲಿತ ಸಂವೇದನೆ ಹಾಗೂ ದಲಿತ ಸಾಂಸ್ಕೃತಿಗಳ ಶೋಧನೆ ಮತ್ತು ತಾತ್ವಿಕ ಚರ್ಚೆ ಬಗೆಗೆ ಹೊಸ ಹೊಳಹುಗಳನ್ನು 'ಹೊಲೆಮಾದಿಗರಹಾಡು' ಹುಟ್ಟು ಹಾಕಿತು. ಈ ಕವನಸಂಕಲನ ಶತಶತಮಾನದ ಅನ್ಯಾಯವನ್ನು ಕಣ್ಣಮುಂದೆ ನಿಲ್ಲಿಸುತ್ತದೆ, ಜೊತೆಗೆ ಅದರ ವಿರುದ್ಧ ಪ್ರತಿಭಟಿಸುವ ಶಕ್ತಿಯು ಇದೆ. ಈ

ಕವನಸಂಕಲನದ ರಚನೆಗೆ ದಲಿತ ಬದುಕು ಮೂಲ ಪ್ರೇರಣೆಯಾಗಿದೆ. ಸಿದ್ಧಲಿಂಗಯ್ಯನವರು ಬಾಲ್ಯದಿಂದಲೂ ಕಂಡುಂಡ ಹಸಿವು, ಬಡತನ, ಅಸ್ಪೃಶ್ಯತೆಯ ನೋವಿನ ತೀವ್ರತೆಯನ್ನು ಇಲ್ಲಿ ಕಾವ್ಯವಾಗಿಸಿದ್ದಾರೆ. ಹಾಗಾಗಿ ಈ ಸಂಕಲನ ಕವಿತೆಗಳು ನೋವು ಮತ್ತು ಪ್ರತಿಭಟನೆಯ ಮೂಲನೆಲೆಯಲ್ಲಿ ಮೈದಾಳಿವೆ. ದಲಿತರ ದುರಂತಕ್ಕೆ ಕಾರಣವಾಗಿರುವ ವ್ಯವಸ್ಥೆಯ ವಿರುದ್ಧ ಸಿಟ್ಟು, ಅದನ್ನು ಧ್ವಂಸ ಮಾಡಿಬಿಡಬೇಕೆಂಬ ಅದಮ್ಯ ಉತ್ಸಾಹ, ತನ್ನವರ ಅಜ್ಞಾನ ಮತ್ತು ಹೆಡ್ಡತನಕ್ಕಾಗಿ ನೋವು, ಬೇಸರ, ದಲಿತರನ್ನು ಸಂಘರ್ಷಕ್ಕೆ ಪ್ರಚೋದಿಸುವ ಬಯಕೆ, ಕ್ರಾಂತಿಯ ಬಗ್ಗೆ ಅಚಲವಾದ ನಂಬಿಕೆ ಇವೇ ಮೊದಲಾದವುಗಳು ಇವರ ಕಾವ್ಯದ ಪ್ರಧಾನ ಪ್ರೇರಣೆ ಮತ್ತು ವಸ್ತು. "೧೪ ನವ್ಯೋದಯದಿಂದ ತಮಗೆ ಬೇರಾದ ಲಯ, ವಿನ್ಯಾಸವನ್ನು ಜನಪದ ಸಾಹಿತ್ಯದಿಂದ ಅಗತ್ಯಕ್ಕೆ ಬೇರಾದಷ್ಟು ಪದಸಮುಚ್ಚಯಗಳನ್ನು ತೆಗೆದುಕೊಂಡು ಸಿದ್ಧಲಿಂಗಯ್ಯನವರು ತಮ್ಮ ಅಭಿವ್ಯಕ್ತಿಗೆ ಪುಷ್ಟೀಕರಣ ನೀಡಿದ್ದಾರೆ. ಉಪಮೆಗಳನ್ನು ನೀಡುವ ಮೂಲಕ ದಲಿತರ ಪರಿಸರ ಮತ್ತು ಆ ಪರಿಸರದ ಭಾಷೆಯನ್ನು ಉಪಯೋಗಿಸಿಕೊಂಡು ತಮ್ಮದೇ ಆದ ಅಭಿವ್ಯಕ್ತಿ ಮಾರ್ಗವನ್ನು ರೂಢಿಸಿಕೊಂಡರು ೧೪". ಎಂಬ ಪುರುಷೋತ್ತಮಬಿಳಿಮಲೆ ಅವರ ಮಾತುಗಳು ಸಿದ್ಧಲಿಂಗಯ್ಯನವರ ಕಾವ್ಯದ ತಾತ್ವಿಕ ಮಜಲುಗಳನ್ನು ಚನ್ನಾಗಿ ಪರಿಚಯಿಸುತ್ತವೆ.

ದಲಿತ ಚಳುವಳಿಯ ಆಶಯಗಳನ್ನು ವ್ಯಕ್ತಪಡಿಸುವಂತಿರುವ ಈ ಕವನಸಂಕಲನದ ಎಲ್ಲಾ ಹಾಡುಗಳು ದಲಿತನೊಬ್ಬ ನೇರವಾಗಿ ಅನಿಭವಿಸಿದ ಶೋಷಣೆಯ ತೀವ್ರತರವಾದ ಒತ್ತಡದಿಂದ ಬಂದವುಗಳಾಗಿವೆ. ಈ ಕವನ ಸಂಕಲನ ಬಿಡುಗಡೆಯಾದಾಗ ಕೆಲವು ಪ್ರಶಂಸೆ ಹಾಗೂ ವಿಮರ್ಶಾತ್ಮಕ ಹೇಳಿಕೆಗಳು ಕೇಳಿಬಂದವು. ಇವರ ಕಾವ್ಯ ಕಾವ್ಯವೇ ಅಲ್ಲ ಬರೀ ವಾಚಾಳಿತನವೇ ಎದ್ದು ಕಾಣುತ್ತವೆ ಎಂಬ ಆರೋಪಗಳು ಕೇಳಿಬಂದಾಗ ಸ್ವತಃ ಸಿದ್ಧಲಿಂಗಯ್ಯನವರೇ "೧೫ ಇವುಗಳು ಹಾಡುಗಳು ಅಂದರೆ 'ಹೊಲೆಮಾದಿಗರಹಾಡು' ಕವನ ಸಂಕಲನದಲ್ಲಿ ಹಾಡುಗಳು ಇವೆ. ಇವುಗಳನ್ನು ಗಟ್ಟಿಯಾಗಿ ಲಯಬದ್ಧವಾಗಿ ಹಾಡಿದಾಗ ಓದಿಕೊಂಡಾಗ ಮಾತ್ರ ನನ್ನ ರಚನೆಯ ಉದ್ಧೇಶ ಸ್ಪಷ್ಟವಾಗುತ್ತದೆ ೧೫" ಎಂದು ಹೇಳಿದ್ದಾರೆ. ಶೋಷಿತರಲ್ಲಿ ಜಾಗೃತಿಯನ್ನು ಮೂಡಿಸುವ ಉದೇಶದಿಂದ ಹಾಗೂ ದಲಿತರು ಮೌನವಾಗಿ ಅನುಭವಿಸಿದ ನೋವಿನ ತೀವ್ರತೆ ಅವರಿಗೆ ಸರಿಯಾಗಿ ತಟ್ಟಬೇಕಾದರೆ ಗಟ್ಟಿಯಾಗಿ ಹಾಡಬೇಕೆಂಬುದೇ ಸಿದ್ಧಲಿಂಗಯ್ಯನವರ ಉದೇಶವಾಗಿತ್ತು. ಇವರ ಎಲ್ಲಾ ಹಾಡುಗಳು ಕೇವಲ ಒಂದು ಜನಾಂಗವನ್ನಲ್ಲದೆ ಇಡೀ ವಿಶ್ವದ ಎಲ್ಲಾ ದಲಿತರನ್ನು ಎಚ್ಚರಿಸುವ ಒಂದು ಗೂಡಿಸುವ ಸಾಮರ್ಥ್ಯವನ್ನು ಪಡೆದುಕೋಂಡಿವೆ. ಅಂತರ್ಗತವಾಗಿರುವ ನೋವು, ಆಕ್ರೋಶಗಳು ಒಂದು ಹಂತದಲ್ಲಿ ಮುಗಿಲು ಮುಟ್ಟುವಂತೆ ಜೋರಾದ ದನಿಯಲ್ಲಿ ಉತ್ಪ್ರೇಕ್ಷೆಗಳು ತುಂಬಿರುವ ಭಾಷೆಯಲ್ಲಿ ಅಭಿವ್ಯಕ್ತವಾಗಿವೆ. ಹಾಗಾಗಿ ಇಲ್ಲಿ ಮೇಲು ಮಾತಿಗಾಗಗಲಿ, ಸಮಾಧಾನಕ್ಕಾಗಲಿ ಅವಕಾಶವಿಲ್ಲ. ಇಲ್ಲಿನ ಕವಿತೆಗಳಲ್ಲಿ ವ್ಯಕ್ತಗೊಂಗಿಡುವ ಸಿಟ್ಟು

ದಲಿತರೊಡಲೊಳಗೆ ಕುದಿಯುತ್ತಿದ್ದ ಶತಮಾನದ ಸಿಟ್ಟಾಗಿದೆ. ಈ ಕವಿತೆಗಳಲ್ಲಿ ಸ್ಫೋಟಿಸುತ್ತಿರುವ ರೊಚ್ಚು ಈ ದೇಶದ ಇತಿಹಾಸದ ಒಂದು ಭಾಗವೆಂಬುದನ್ನು ಮರೆಯಬಾರದು. ಆ ರೊಚ್ಚನ್ನು ಹಾಗೆ ಅಭಿವ್ಯಕ್ತಿಸಲು ಸಿದ್ಧಲಿಂಗಯ್ಯನವರಿಗೆ ಹಕ್ಕಿದೆ ಎಂಬ ಜಿ.ಎಸ್. ಶಿವರುದ್ರಪ್ಪನವರ ಮಾತುಗಳು ಸಿದ್ಧಲಿಂಗಯ್ಯನವರ ಅಭಿವ್ಯಕ್ತಿಗೆ ಒತ್ತು ನೀಡುತ್ತವೆ.

ಜಡಗೊಂಡ ಸಮಾಜವನ್ನು ಚಲನಶೀಲವಾಗಿಸುವ, ಸನಾತನವಾದ ಸ್ಥಾಪಿತ ಮೌಲ್ಯಗಳನ್ನು ವಿಘಟನೆಗೊಳಿಸುವ ಚಿಂತನೆಯಲ್ಲಿ ಹೊಸತನವನ್ನು ಸೃಷ್ಟಿಸುವ ಶಕ್ತಿ ಮನುಷ್ಯಪರ ಸಾಮಜಿಕ ಚಳುವಳಿಗಿದೆ. ಇಡೀ ಕರ್ನಾಟಕದ ಸಂದರ್ಭದಲ್ಲಿ ಮೂಲಭೂತವಾದಿ ವ್ಯವಸ್ಥೆಗೆ ಪ್ರಭಾವಿಪೂರ್ಣ ಚಿಕಿತ್ಸೆ ನಡೆದದ್ದು ಎರಡು ಸಂದರ್ಭಗಳಲ್ಲಿ. ಮೊದಲನೆಯದು ಹನ್ನೆರಡನೆಯ ಶತಮಾನದ ವಚನಚಳುವಳಿಯ ಸಂದರ್ಭ. ಎರಡನೆಯದು ಎಪ್ಪತ್ತರ ದಶಕದ ದಲಿತ ಚಳುವಳಿಯ ಸಂದರ್ಭ. ಹೀಗೆ ಒಂದು ಜೀವಪರ ಸಾಮಾಜಿಕ ಚಳುವಳಿಗೆ ಸಮಾಜದ ಎಲ್ಲಾ ರಂಗಗಳನ್ನು ಪ್ರಭಾವಿಸುವ, ವ್ಯವಸ್ಥೆಯನ್ನು ಬುಡಮೇಲಾಗಿಸುವ ಚೈತನ್ಯವಿದೆ. ಇದಕ್ಕೆ ನಿದರ್ಶನವೆಂಬಂತೆ ಎಪ್ಪತ್ತರ ದಶಕದ ದಲಿತ ಚಳುವಳಿ ಪ್ರತ್ಯಕ್ಷ ಸಾಕ್ಷಿಯಾಗಿದೆ. ಕತ್ತಲು ಕವಿದಿದ್ದ ಇಡೀ ಸಾಮಾಜಿಕ ಬದುಕಿಗೆ ವಿದ್ಯುತ್‌ಸ್ಪರ್ಶತೆಯನ್ನು ಕೊಟ್ಟು ಹೊಸ ಬಗೆಯ ಚಿಂತನ ಕ್ರಮ, ಸಮಾಜಮುಖಿ ದೃಷ್ಟಿಕೋನವನ್ನು ದಲಿತ ಚಳುವಳಿ ಮೂಡಿಸಿತು. ಒಂದು ಚಳುವಳಿಯ ಸಾಮಾಜಿಕ ಜವಾಬ್ದಾರಿ ಯಾವ ಬಗೆಯದು ಹಾಗೂ ಅದರ ಒಟ್ಟು ಪರಿಣಾಮ ಎಂತಹುದು ಎಂಬುದಕ್ಕೆ ದಲಿತಚಳುವಳಿಯ ನಂತರದ ವ್ಯವಸ್ಥೆಯಲ್ಲಾದ ಬದಲಾವಣೆಯನ್ನು ಗಮನಿಸಬಹುದಾಗಿದೆ. ದಲಿತ ಚಳುವಳಿಒಂದು ರೀತಿಯಲ್ಲಿ ವಿಭಿನ್ನ ರೂಪುರೇಷೆಗಳನ್ನೊಳಗೊಂಡ ಚಳುವಳಿ. ಇದು ಕೇವಲ ಸಾಮಾಜಿಕ ಚಳುವಳಿ ಮಾತ್ರವಾಗಿರದೆ ಏಕಕಾಲದಲ್ಲಿ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಚಳುವಳಿ ಕೂಡ ಹೌದು. ಸಾಮಾಜಿಕ ಬದುಕಿನ ಎಲ್ಲ ಸ್ತರಗಳನ್ನು ಪ್ರಭಾವಿಸಿದ ಚಳುವಳಿ. ವಿಶೇಷವಾಗಿ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಆಲೋಚನಾ ಪರಿಧಿಯನ್ನು ಹೊಸನೆಲೆಗೆ ಕೊಂಡೊಯ್ದ ಶ್ರೇಯಸ್ಸು ದಲಿತ ಚಳುವಳಿಯದು.

ಕರ್ನಾಟಕದ ಸಂದರ್ಭದಲ್ಲಿ ದಲಿತಚಳುವಳಿಯ ಆಸ್ತಿತ್ವಕ್ಕೆ ಶ್ರಮಿಸಿದವರಲ್ಲಿ ಸಿದ್ದಲಿಂಗಯ್ಯನವರು ಪ್ರಮುಖರು ಈ ಚಳುವಳಿಗೆ ಭದ್ರವಾದನೆಲೆಗಳನ್ನ ಒದಗಿಸಿದ್ದು ಬಿ. ಬಸವಲಿಂಗಪ್ಪನವರ 'ಬೂಸಾಪ್ರಕರಣ'. ಇದು ಸಾಮಾಜಿಕ, ರಾಜಕೀಯ, ಸಾಹಿತ್ಯಕ ಹಾಗೂ ಬೌದ್ಧಿಕ ವಲಯದಲ್ಲಿ ಹೊಸಬಗೆಯ ಸ್ಥಿತ್ಯಂತರಕ್ಕೆ ಕಾರಣವಾದ ಘಟನೆಯಾಗಿದೆ. ಸಿದ್ದಲಿಂಗಯ್ಯನವರು ರಚಿಸಿರುವ ಒಟ್ಟು ಕಾವ್ಯಗಳಲ್ಲಿ ಹೆಚ್ಚಿನವು ದಲಿತ ಚಳವಳಿಯ ಒತ್ತಡದಿಂದ ಮೂಡಿಬಂದವು. ಇವರ ಕಾವ್ಯವು ಹಾಡಾಗುವ ಮೂಲಕ ಒಟ್ಟು ದಲಿತ, ಬಂಡಾಯ ರೈತ ಚಳುವಳಿಗಳನ್ನು ಪ್ರಭಾವಕ್ಕೆ ಒಳಪಡಿಸಿದೆ. ಜೊತೆಗೆ ಶೋಷಿತರಲ್ಲಿ ಸಂಘಟನಾತ್ಮಕ ಬಲವನ್ನು ಪ್ರಬಲಗೊಳಿಸುವಲ್ಲಿ ಗಮನಾರ್ಹವಾದ ಕೆಲಸ

ಮಾಡಿದೆ. ಇಡೀ ಶೋಷಿತರನ್ನು ಸಾಂಸ್ಕೃತಿಕವಾಗಿ ಒಗ್ಗೂಡಿಸುವ ಜೀವನಮುಖಿ ಕಾವ್ಯ ಇವರದಾಗಿದೆ. ಚಳುವಳಿಯ ಮುಂಚೂಣಿಯಲ್ಲಿ (ಮುಂದಾಳತ್ವ) ನಿಂತು ಲಾಟಿಪ್ರಹಾರ, ಜೈಲುವಾಸವನ್ನು ಅನುಭವಿಸುವ ಮುಖೇನ ತಮ್ಮ ಒಟ್ಟು ವ್ಯಕ್ತಿತ್ವವನ್ನು ರೂಪಿಸಿಕೊಂಡಿರುವುದು, ಸನಾತನ ವಾದಿಗಳ ವಿರುದ್ಧ ಸಿಡಿದೆದ್ದು ಅವರ ಕ್ರೂರತನಕ್ಕೆ ಬಲಿಯಾಗಿರುವ ಅಂಶಗಳೆಲ್ಲವು ಅವರ ಕಾವ್ಯಗಳಲ್ಲಿ ಎದ್ದು ಕಾಣುವ ಅಂಶಗಳಾಗಿವೆ. ದಲಿತ ಚಳುವಳಿಯ ಸಂದರ್ಭದಲ್ಲಿ ಸಿದ್ಧಲಿಂಗಯ್ಯನವರ ಕಾವ್ಯವು ಕ್ರಾಂತಿಯ, ಪ್ರತಿಭಟನೆಯ ರೂಪಕವಾಗಿ ಬಳಕೆಯಾಗಿದೆ. ಕರ್ನಾಟಕದ ದಲಿತರು ಎಪ್ಪತ್ತರ ದಶಕದ ತರುವಾಯ ಜಾಗೃತಗೊಳ್ಳಲು ಇವರ ಕಾವ್ಯ ಪ್ರಮುಖ ಪಾತ್ರವಹಿಸಿದೆ. ಅನಾಧಿಕಾಲದಿಂದಲೂ ತುಳಿತಕ್ಕೊಳಪಟ್ಟ ಸಮುದಾಯದಿಂದ ಬಂದ ವಿದ್ಯಾವಂತ ಯುವಕನ ಅಭಿವ್ಯಕ್ತಿ ಎಷ್ಟು ತೀವ್ರತರವಾದದ್ದು ಎಂಬುದಕ್ಕೆ ಅವರ ಕಾವ್ಯಗಳು ನಿದರ್ಶನವಾಗಬಲ್ಲವು.

'ಹೊಲೆಮಾದಿಗರಹಾಡು' ಕವನಸಂಕಲನದಲ್ಲಿ ಒಟ್ಟು ೨೧ ಕವನಗಳಿದ್ದು ಎಲ್ಲಾ ಕವನಗಳು ಸಾಮಾಜಿಕ ಅಸಮಾನತೆ ಇರುವತನಕ ಸಾರ್ವಕಾಲಿಕ ಸತ್ಯಗಳಾಗಿ ನೆಲೆಗೊಳ್ಳುವ ಸತ್ವವನ್ನು ಗರ್ಭೀಕರಿಸಿಕೊಂಡಿವೆ. ಅನುಭವದ ಶ್ರೀಮಂತಿಕೆ, ವಸ್ತುವಿನ ಆಯ್ಕೆ ಆಯ್ಕೆಗೆ ತಕ್ಕ ಅಭಿವ್ಯಕ್ತಿ, ಅಭಿವ್ಯಕ್ತಿಗೆ ಪೂರಕವಾದ ಸಮುದಾಯದ ಭಾಷಾ ಬಳಕೆ, ಅದರಲ್ಲಿನ ತೀವ್ರತೆ – ಈ ಎಲ್ಲ ಸಾಹಿತ್ಯಕ ಮೌಲ್ಯಗಳನ್ನು ಕವಿ ಇಲ್ಲಿ ಔಚಿತ್ಯಪೂರ್ಣವಾಗಿ ಬಳಸಿಕೊಂಡಿದ್ದಾರೆ. ಡಿ.ಆರ್. ನಾಗರಾಜ್ ಅವರು ಈ ಕವನಸಂಕಲನಕ್ಕೆ ಮುನ್ನುಡಿ ಬರೆಯುತ್ತಾ "೧೭ ಎರಡು ದಶಕಗಳಿಗೂ ಹಿಂದೆ ಮೊದಲಬಾರಿಗೆ ನಾನು ಗೆಳೆಯ ಸಿದ್ಧಲಿಂಗಯ್ಯನವರ ಕವಿತೆಗಳನ್ನು ಓದಿದಾಗ ಬೆಚ್ಚಿಬಿದ್ದಿದ್ದೆ. ಕಾರಣ ಕವಿಯ ವ್ಯಕ್ತಿತ್ವಕ್ಕೂ ಕವಿತೆಗಳಿಗೂ ಇರುವ ವ್ಯತ್ಯಾಸ. ದೈನ್ಯತೆಯೇ ಸಾಕಾರವಾಗಿದ್ದ ಪುಟಾಣಿಕವಿ ಹೆಚ್ಚೆಂದರೆ ಇಪ್ಪತ್ತೈದು ಕೆ. ಜಿ. ಆಳು ಆದರೆ ಕವಿತೆಗಳೋ ಬೆಂಕಿಯ ಉಂಡೆಗಳು ೧೭". – ಎಂಬುದಾಗಿ ಸಿದ್ಧಲಿಂಗಯ್ಯನವರ ವ್ಯಕ್ತಿತ್ವ ಮತ್ತು ಕಾವ್ಯ ಸತ್ವವನ್ನು ಸ್ಪಷ್ಟವಾಗಿ ಗುರುತಿಸಿರುವುದು ಮಹತ್ವದ ಸಂಗತಿಯಾಗಿದೆ. ಈ ಕವನಸಂಕಲನದಲ್ಲಿ ದಲಿತರ ಸಾಮಾಜಿಕ ಬದುಕು, ಹಸಿವು, ಬಡತನ, ರೈತರ ಸಂಕಷ್ಟಗಳನ್ನು ಮಾರ್ಕ್ಸ್‌ವಾದಿ ಹಿನ್ನೆಲೆಯಲ್ಲಿ ಚಿತ್ರಿಸಲ್ಪಟ್ಟಿರುವ ಹಲವಾರು ಕವನಗಳನ್ನು ಹೆಸರಿಸಬಹುದಾಗಿದೆ.

೧೯೨೯ ರಲ್ಲಿ ಪ್ರಕಟವಾದ 'ಸಾವಿರಾರುನದಿಗಳು' ಕವನಸಂಕಲನ ಸಿದ್ಧಲಿಂಗಯ್ಯನವರಿಗೆ ಹೊಲೆಮಾದಿಗರ ಹಾಡಿನಷ್ಟೇ ಕೀರ್ತಿಯನ್ನು ಯಶಸ್ಸನ್ನು ಗಳಿಸಿಕೊಟ್ಟಂತಹ ಕೃತಿ. ಹೆಚ್ಚಾಗಿ ಸಿದ್ಧಲಿಂಗಯ್ಯನವರ ಹೆಸರನ್ನು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಚಿರಸ್ಥಾಯಿಗೊಳಿಸಿದ ಮಹತ್ವದ ಕೃತಿ. ಇದರಲ್ಲಿನ ಒಂದೊಂದು ಕವಿತೆಯೂ ಸಮಾಜದ ದ್ವಂದ್ವ ನೀತಿ ಮಲೀನತೆಯನ್ನು ತೊಳೆದು ಶುಭ್ರಗೊಳಿಸಬೇಕೆಂಬ ಆಶಯದ ಒಡಲೊಳಗಿನಿಂದ ಹುಟ್ಟಿದಂತವುಗಳು.

ಕರ್ನಾಟಕದಾದ್ಯಂತ ದಲಿತ ಚಳುವಳಿಯು ತೀವ್ರ ಸ್ವರೂಪವನ್ನು ಪಡೆದುಕೊಂಡು ಕ್ರಿಯಾಶೀಲ ಕಾರ್ಯಚಟುವಟಿಕೆಯಲ್ಲಿ ತೊಡಗಿದ್ದ ಸಂದರ್ಭ ಹಾಗೂ ಬಂಡಾಯ ಸಾಹಿತ್ಯ ಸಂಘಟನೆಯ ಆರಂಭಿಕ ಕಾಲಘಟ್ಟದಲ್ಲಿ 'ಸಾವಿರನದಿಗಳು' ಪ್ರಕಟಗೊಂಡಿತು. ಪ್ರಾರಂಭದಲ್ಲಿ ಸಿದ್ಧಲಿಂಗಯ್ಯನವರಲ್ಲಿ ಕಂಡುಬಂದ ರೊಚ್ಚು, ಆವೇಶಗಳು ವಿಷಯದಲ್ಲಿ ಮತ್ತು ಅಭಿವ್ಯಕ್ತಿಕ್ರಮದಲ್ಲೆರಡರಲ್ಲೂ ಸೌಮ್ಯತೆ ಪಡೆದಿರುವುದು ಈ ಕವನ ಸಂಕಲನದ ವಿಶೇಷತೆ. ಜೊತೆಗೆ ಇಲ್ಲಿನ ಕವಿತೆಗಳಲ್ಲಿ ಗಾಂಭೀರ್ಯತೆ ಮತ್ತು ಪ್ರತಿಭಟನೆ ಎರಡೂ ಒಟ್ಟೊಟ್ಟಿಗೆ ಬೆಸೆದು ಕೊಂಡಿವೆ. "೧೮ ಆಕ್ರೋಶ, ಆವೇಶಗಳಿಂದಲೇ ಕಾವ್ಯಲೋಕಕ್ಕೆ ಕಾಲಿರಿಸಿದ ಸಿದ್ಧಲಿಂಗಯ್ಯ ತಮ್ಮ ಎರಡನೆ ಸಂಕಲನದಲ್ಲೇ ಅನುಭವವನ್ನು ಕಾವ್ಯವಾಗಿಸುವ ತಮ್ಮ ಕಾವ್ಯಕರ್ಮದ ಬಗ್ಗೆ ಗಮನ ಹರಿಸಿ ಯಶಸ್ಸಿನತ್ತ ನಡೆದಿರುವುದು ಭರವಸೆಯ ವಿಷಯವಾಗಿದೆ ೧೮" ಎಂಬ ಜಿ. ಎಸ್. ಸಿದ್ಧಲಿಂಗಯ್ಯನವರ ಅಭಿಪ್ರಾಯ 'ಸಾವಿರಾರುನದಿಗಳು' ಸಂಕಲನದ ಎಲ್ಲಾ ಕವಿತೆಗಳಿಗೂ ಅನ್ವಯಿಸುತ್ತದೆ.

ಸಿದ್ಧಲಿಂಗಯ್ಯನವರು ಆರಂಭದ ಕವನಗಳಲ್ಲಿ ವ್ಯಕ್ತಪಡಿಸಿದ ಸಮಾಜಪರ, ಶೋಷಿತಪರ ಆಲೋಚನೆ, ಆಶಯ, ಧೋರಣೆಗಳನ್ನು ಹಾಗೆಯೇ ಉಳಿಸಿಕೊಂಡು ಅವುಗಳ ಎಲ್ಲೆಯನ್ನು ವಿಸ್ತರಿಸಿಕೊಳ್ಳುವುದರ ಜೊತೆಗೆ ಕಾವ್ಯಾಭಿವ್ಯಕ್ತಿಯ ಶೈಲಿಯಲ್ಲಿ ಹೊಸಮಾರ್ಗವನ್ನು ಕಂಡುಕೊಂಡಿದ್ದಾರೆ. 'ಸಾವಿರಾರುನದಿಗಳು' ಸಂಕಲನದ ಧೋರಣೆ ಇವರ ಮೊದಲ ಸಂಕಲನಕ್ಕಿಂತ ಭಿನ್ನವಾಗೇನೂ ಇಲ್ಲ. ಆದರೆ 'ಹೊಲೆಮಾದಿಗರಹಾಡು' ಸಂಕಲನದಲ್ಲಿ ವಾಚ್ಯಾಭಿವ್ಯಕ್ತಿ ಪಡೆದುಕೊಂಡಿದ್ದ ಇವರ ರೊಚ್ಚು, ಆಕ್ರೋಶ, ಸಿಟ್ಟು, ಆವೇಶಗಳಿಲ್ಲ ಇಲ್ಲಿ ಮರದೊಳಗಣ ಕಿಚ್ಚಿನಂತೆ ತಣ್ಣನೆಯ ಸ್ವರೂಪವನ್ನು ಪಡೆದುಕೊಂಡಿದೆ. 'ಸಾವಿರಾರುನದಿಗಳು' ಸಂಕಲನದಲ್ಲಿ ಅಭಿವ್ಯಕ್ತವಾದ ಪ್ರತಿಭಟನೆಯ ಕ್ರಾಂತಿಯ ಕನಸನ್ನು ಹೊತ್ತಿರುವುದರಿಂದ ಮೊದಲನೆಯ ಸಂಕಲನಕ್ಕಿಂತ ಹೆಚ್ಚು ಪ್ರೌಢವಾಗಿ ಈ ಜಗದ ಜಡತೆಯನ್ನು ದಣಿವನ್ನು, ದ್ವಂದ್ವನೀತಿಯನ್ನು ಉಚ್ಚಾಟಿಸುವ ಇಲ್ಲಿನ ಸಾಲುಗಳಿಗೆ ಲೋಕದ ಸ್ವಾಸ್ಥ್ಯವನ್ನು ಕಾಪಾಡುವ ಹೊಣೆಗಾರಿಕೆ ಇದೆ. ಸಮಕಾಲೀನ ಸಾಮಾಜಿಕ ಅನ್ಯಾಯಗಳ ದಾಖಲಾತಿಯಷ್ಟೆ ಇಲ್ಲಿ ನಡೆದಿಲ್ಲ. ಬದಲಾಗಿ ಪರ್ಯಾಯಗಳ ಸೃಷ್ಟಿಯಿದೆ. ಈ ಬಗೆಯ ಪ್ರತಿಭಟನೆಗೆ ಕಲಾತ್ಮಕತೆ ಲಭ್ಯವಾದದ್ದೇ ಅದರೊಳಗಿನ ತೇಜಸ್ಸಿನಿಂದಾಗಿ ಎಂಬುದು ಇಲ್ಲಿನ ಎಲ್ಲಾ ಕವನಗಳನ್ನು ಓದಿದಾಗ ಅವುಗಳ ಆಂತರ್ಯವನ್ನು ಅರಿತಾಗ ಗೊತ್ತಾಗುತ್ತದೆ.

ಈ ಸಂಕಲನ ಕವಿಯಲ್ಲಾಗಿರುವ ಬೌದ್ಧಿಕ ಪಕ್ವತೆಯನ್ನು ಹಾಗೂ ಮಾನಸಿಕ ಬೆಳವಣಿಗೆಯನ್ನು ಎತ್ತಿತೋರಿಸುತ್ತದೆ. 'ಹೊಲೆಮಾದಿಗರಹಾಡು' ಸಂಕಲನದಲ್ಲಿ ಹೇಳಲಾದ ಸಮಸ್ಯೆಗಳನ್ನೇ, ವಿಚಾರಗಳನ್ನೇ ಇಲ್ಲಿ ಬಹಳ ಸೂಕ್ಷ್ಮವಾಗಿ ವ್ಯಷ್ಟಿ ಚಿಂತನೆಯಿಂದ ಸಮಷ್ಟಿ ಚಿಂತನೆಯ ಕಡೆಗೆ ಗಮನ ಹರಿಸಿ ಅಂತಃಕರಣಪೂರ್ವಕವಾಗಿ ಹೇಳಿರುವುದು ಕವಿಯಲ್ಲಾಗಿರುವ ಬೆಳವಣಿಗೆಯನ್ನು, ಅನುಭವದ, ಅಭಿವ್ಯಕ್ತಿಯ ಪಕ್ವತೆಯನ್ನು ಪರಿಚಯಿಸುತ್ತದೆ. 'ಹೊಲೆಮಾದಿಗರಹಾಡು' ಸಂಕಲನದ

ಸಂದರ್ಭದ ಕವಿ 'ಸಾವಿರ ನದಿಗಳು' ಸಂಕಲನದ ವೇಳೆಗೆ ಬದಲಾಗುವುದ ಜೊತೆಗೆ ಆಲೋಚನಾ ಕ್ರಮ, ಅಭಿವ್ಯಕ್ತಿ ವಿಧಾನಗಳೆಲ್ಲವೂ ಮಾಗಿ ಪಕ್ವಗೊಂಡು ಬೆಳೆದಿರುವುದು ತಿಳಿಯುತ್ತದೆ. ಇಲ್ಲಿನ ಕವನಗಳಲ್ಲಿ ಕವಿ ತುಂಬಾ ಆಶಾವಾದಿ ಎಂಬುವುದು ವ್ಯಕ್ತವಾಗುತ್ತದೆ. ದಲಿತವರ್ಗದವರು ಹೆಚ್ಚೆತ್ತಿದ್ದಾರೆ, ಧರ್ಮ ದೇವರುಗಳೆಂಬ ಸೋಗಿನ ಆಳವನ್ನು ಅರಿತಿದ್ದಾರೆ. ಶ್ರೀಮಂತರ ಅಥವಾ ಶೋಷಕರ ಸೊಕ್ಕನ್ನು ಖಂಡಿತಾ ಮುರಿಯುತ್ತಾರೆ ಎಂಬ ಆಸೆ ಈ ಸಂಕಲನದಲ್ಲಿ ಕಾಣುತ್ತದೆಯಲ್ಲದೆ ಮೊದಲ ಸಂಕಲನದಲ್ಲಿ ಕಂಡುಬಂದಂತಹ ದ್ವೀತೀಯ ವ್ಯಕ್ತಿಯನ್ನು ಹುರಿದುಂಬಿಸುವ ಘೋಷಣೆಗಳಿಗಿಂತ ಕವಿ ಎಲ್ಲಾ ಅನುಭವಗಳ ಒಂದು ಭಾಗವಾಗಿ ಕಂಡುಬರುತ್ತಾನೆ. ಹೊರಗಿನಿಂದ ನಿಂತು ಪ್ರಚೋದಿಸುವುದಕ್ಕಿಂತ ಕ್ರಾಂತಿಯ ಒಂದು ಭಾಗವಾಗುವುದನ್ನು ಅದಕ್ಕೆ ಸಿದ್ದತೆ ನಡೆಸುವ ಬಗ್ಗೆ ಇಲ್ಲಿಯ ಕವನಗಳು ತೋರಿಸುವುದರಿಂದ ಕಾವ್ಯ ಅಂತರ್ಮುಖಿಯು ಆಗದೆ, ಪರಕೀಯವೂ ಆಗದೆ ಜೀವನಿಷ್ಟವಾಗುತ್ತದೆ ಎಂಬುದನ್ನು ಇಲ್ಲಿನ ಕವಿತೆಗಳ ಆಂತರ್ಯ ಸ್ಪಷ್ಟಡಿಸುತ್ತದೆ. ಸಿದ್ಧಲಿಂಗಯ್ಯನವರ ಸಾಮಾಜಿಕ ದೃಷ್ಟಿಕೋನ ಅನುಭವದ ಗ್ರಹಿಕೆ ಈ ಸಂಕಲನದಲ್ಲಿ ಜಾತ್ಯಾತೀತ ಮನೋಭಾವದ ವಿಶಾಲವಂತಿಕೆಯ ಛಾಪನ್ನು ಪಡೆದುಕೊಂಡಿದೆ. ಈ ಸಂಕಲನ ರಚನೆಯ ಸಂದರ್ಭಕ್ಕಾಗಲೇ ಕವಿಗೆ ಕೇವಲ ಹೊಲೆಮಾದಿಗರ ಸಮಸ್ಯೆಗಳಷ್ಟೇ ಮುಖ್ಯವೆನಿಸದೇ ಎಲ್ಲಾ ವರ್ಗದ ಬಡವರ, ಶೋಷಿತರ ಕೂಲಿಕಾರ್ಮಿಕರ ಸಮಸ್ಯೆಗಳು ಪ್ರಮುಖ ಎನಿಸಿವೆ. ಸ್ವತಃ ಸಿದ್ಧಲಿಂಗಯ್ಯನವರೇ "೧೯ ಸಾವಿರಾರುನದಿಗಳು" ಪ್ರಕಟವಾಗುವ ವೇಳೆಗೆ ನನ್ನ ನಿಲುವು, ದೋರಣೆಗಳಲ್ಲಿ ತುಂಬಾ ಬದಲಾವಣೆ ಆಯಿತು. 'ಹೊಲೆಮಾದಿಗರಹಾಡು' ಸಂಕಲನದಲ್ಲಿ ನಿರ್ಧಿಷ್ಟವರ್ಗವನ್ನು ಗಮನದಲ್ಲಿಟ್ಟುಕೊಂಡು ಕವಿತೆಗಳನ್ನು ರಚಿಸಿದರೆ 'ಸಾವಿರಾರುನದಿಗಳು' ಸಂಕಲನದಲ್ಲಿ ಸಮಾಜದ ಶೋಷಿತ ವರ್ಗದ ಎಲ್ಲಾ ಜಾತಿಗಳ ಬಗ್ಗೆ ಹೆಚ್ಚರ ವಹಿಸಿದ್ದೇನೆ ೧೯" ಎಂಬುದಾಗಿ ಹೇಳಿಕೊಂಡಿದ್ದಾರೆ. ಇದು ಕವಿಯಲ್ಲಾದ ಆಲೋಚನೆ ಪ್ರೌಢಿಮೆಯನ್ನು ಸೂಚಿಸುತ್ತದೆ. ಸಾಮಾಜಿಕ ಜವಬ್ದಾರಿ ಇರುವ ಸೃಜನಶೀಲ ಕವಿಯಾದವನು ಎಲ್ಲಾ ವರ್ಗದ ನೊಂದವರ, ಬಡವರ, ಶ್ರಮಿಕರ ಶೋಷಿತರ ಸಮಸ್ಯೆಗಳನ್ನು ಪ್ರಜಾಪ್ರಭುತ್ವೀಕರಣಗೊಳಿಸಿ, ಸಾರ್ವತ್ರಿಕ ನೆಲೆಯಲ್ಲಿ ನಿಂತು ಆ ಸಮಸ್ಯೆಗಳ ನಿವಾರಣೆಗೆ ತನ್ನ ಸಾಹಿತ್ಯದ ಮುಖೇನ ಹೋರಾಡಬೇಕಸಿದೆ. ಈ ನಿಟ್ಟಿನಲ್ಲಿ ಸಿದ್ದಲಿಂಗಯ್ಯನವರು ತಮ್ಮ ಎರಡನೇ ಕವನಸಂಕಲನದ ವೇಳೆಗೆ ಸಮಾಜದ ಎಲ್ಲಾ ವರ್ಗದ ಹತಾಶರ ದನಿಯಾಗಿ ರೂಪುಗೊಂಡಿರುವುದು ಮಹತ್ವದ ಸಂಗತಿಯಾಗಿದೆ. 'ಸಾವಿರಾರುನದಿಗಳು' ದಲಿತ ಚಳುವಳಿಯ ಹಿನ್ನೆಲೆಯಲ್ಲಿ ರಚನೆಯಾಗಿದ್ದು ಎಲ್ಲಾ ಕವಿತೆಗಳು ಚಳುವಳಿಯ ವಾಸ್ತವ ಪ್ರಜ್ಞೆಯ ಪ್ರಭಾವದ ಒತ್ತಡದಿಂದ ಹೊರಬಂದಂತಹುಗಳು. ಚಳುವಳಿಯ ನಡುವೆ ಬೆಳೆದ ಸಿದ್ಧಲಿಂಗಯ್ಯನವರು ಹೋರಾಟದ ತೀವ್ರತೆ, ಅದರ ಸಾಫಲ್ಯ ಮತ್ತು ಶೋಷಿತರಲ್ಲಿ ಹೋರಾಟದ ಅರಿವು ಮೂಡಿಸಿರುವ ಆಶಾದಾಯಕವಾದ ಎಚ್ಚರದ ಪ್ರಜ್ಞೆಯ ಹಿನ್ನಲೆಯಲ್ಲಿ ಇಲ್ಲಿನ ಕವಿತೆಗಳನ್ನು

ರಚಿಸಿದ್ದಾರೆ. ದಲಿತರ ಮೇಲೆ ನಡೆಯುವ ಅಮಾನವೀಯವಾದ ದಬ್ಬಾಳಿಕೆ, ದೌರ್ಜನ್ಯಗಳ ವಿರುದ್ಧ ಶೋಷಿತರನ್ನು ಪ್ರತಿಭಟನೆಗೆ ಅಣಿಗೊಳಿಸುವುದು ಅರ್ಥಹೀನ ದೇವರು, ಧರ್ಮದ ಬಗೆಗಿನ ವಿಡಂಬನೆ ಮೊದಲಾದವು ಇಲ್ಲಿನ ಕವಿತೆಗಳ ವಸ್ತುವಾಗಿವೆ.

'ಸಾವಿರಾರುನದಿಗಳು' ಕವನ ಸಂಕಲನದಲ್ಲಿ ಒಂದು ಖಂಡಕಾವ್ಯವನ್ನು ಒಳಗೊಂಡಂತೆ ಒಟ್ಟು ಹದಿನೈದು ಕವಿತೆಗಳಾಗಿವೆ ಇಲ್ಲಿನ ಕವಿತೆಗಳ ವಸ್ತು ಮಾನವೀಯತೆಯ ಸಂವೇದನಾ ಗುಣವುಳ್ಳದ್ದಾಗಿದ್ದು ಶೋಷಣೆಯ ನಾನಾ ಮುಖಗಳು ಸಾಕಾರಗೊಂಡಿವೆ. ಎಲ್ಲಾ ಜಾತಿಯ ಶೋಷಿತರು ಸಂಘಟಿತರಾಗಿ ವ್ಯವಸ್ಥೆಯ ವಿರುದ್ಧ ಬಂಡಾಯ ಸಾರಿದರೆ ಸಮಸಮಾಜದ ನಿರ್ಮಾಣ ಸಾಧ್ಯ ಎಂಬುದು ಕವಿಯ ಆಶಾಯವಾಗಿದೆ. 'ದಲಿತ' ಎನ್ನುವ ಪದ ಇಲ್ಲಿ ಸಾರ್ವತ್ರಿಕ ಅರ್ಥವ್ಯಾಪ್ತಿ ಪಡೆದುಕೊಂಡಿದೆ. ಒಟ್ಟಾರೆ 'ಸಾವಿರಾರುನದಿಗಳು' ವರ್ಗ, ವರ್ಣ, ಜಾತಿರಹಿತ ಸಮಾಜ ಪರಿಕಲ್ಪನೆಯ ನೆಲೆಯಲ್ಲಿ ಎಲ್ಲ ಸಮುದಾಯದ ಸಂಕಷ್ಟಗಳನ್ನು ತಲಸ್ಪರ್ಶಿಯಾಗಿ ಈ ಕವನಸಂಕಲನ ಆಲೊಚಿಸುತ್ತದೆ.

ಇನ್ನು ಸಿದ್ಧಲಿಂಗಯ್ಯನವರ ಮೂರನೇ ಕವನ ಸಂಕಲನವಾದ 'ಕಪ್ಪುಕಾಡಿನಹಾಡು' ೧೯೮೩ ರಲ್ಲಿ ಪ್ರಕಟಗೊಂಡಿದ್ದು ಹದಿನೆಂಟು ಕವಿತೆಗಳನ್ನೊಳಗೊಂಡಿದೆ. ಸಾಮಾಜಿಕ ವ್ಯವಸ್ಥೆಯನ್ನು ಬಹಿರ್ಮುಖವಾಗಿ ಗ್ರಹಿಸುತ್ತಿದ್ದ ಕವಿ ಇಲ್ಲಿ ಅಂತರ್ಮುಖಿಯಾಗಿ ಗೋಚರಿಸುವುದು ಕವಿತೆಗಳ ಮೂಲಕ ತಿಳಿದು ಬರುತ್ತದೆ. ಶೋಷಣೆಯ ತೀವ್ರತೆಯು ಈ ಸಂಕಲನದಲ್ಲಿ ಅಭಿವ್ಯಕ್ತಿ ಹಿನ್ನೆಲೆಯಲ್ಲಿ ವ್ಯಕ್ತಗೊಂಡಿದ್ದು ಮೊದಲ ಎರಡು ಕವನ ಸಂಕಲನಕ್ಕಿಂತ ಅಭಿವ್ಯಕ್ತಿ ಕ್ರಮದಲ್ಲಿನ ಕಲಾತ್ಮಕ ಬೆಳವಣಿಗೆಯನ್ನು ಈ ಸಂಕಲನದಲ್ಲಿ ಗುರುತಿಸಲು ಸಾದ್ಯ. ಬಾಷೆ ಲಯದಲ್ಲಿನ ಹೊಸ ಸಾಧ್ಯತೆಗಳನ್ನು ಇಲ್ಲಿನ ಕವಿತೆಗಳಲ್ಲಿ ಕಾಣಬಹುದು. ಸೂಕ್ಷ್ಮವಾಗಿ ನೋಡಿದರೆ ಬದಲಾವಣೆಯನ್ನು ಬಯಸಿದ ಕವಿ ಇಲ್ಲಿ ಸಿಟ್ಟು, ರೋಷ, ಆವೇಶ, ಕ್ರಾಂತಿಯ ಬದಲಿಗೆ ಪ್ರೀತಿ ಪ್ರೇಮದ ನೆಲೆಯಲ್ಲಿ ನಿಂತು ಸಮಾಜವನ್ನು ನೋಡುವ ತಮ್ಮ ಬದುಕನ್ನು ಕಟ್ಟುವ ತಹತಹಿಕೆ ಇಲ್ಲಿಯ ಕವಿತೆಗಳಲ್ಲಿ ವ್ಯಕ್ತವಾಗಿದೆ.

'ಹೊಲೆಮಾದಿಗರಹಾಡು' ಸಂಕಲನ ವ್ಯಷ್ಟೀಯವಾಗಿ ಆಕ್ರೋಶ, ಭಾವುಕತೆಯನ್ನು ಅಭಿವ್ಯಕ್ತಿಸಿ ಸಾಹಿತ್ಯಲೋಕದಲ್ಲಿ ಕೋಲಾಹಲವನ್ನು ಉಂಟುಮಾಡಿತು. 'ಸಾವಿರಾರುನದಿಗಳು' ಸೂಕ್ಷ್ಮವಾಗಿ ಸಮಷ್ಟಿ [ಸಮಗ್ರ] ಪ್ರಜ್ಞೆಯೊಂದಿಗೆ ಉದಾರತಾ ಭಾವವನ್ನು [ಲಿಬರಲ್] ಪ್ರಕಟಿಸಿತು. 'ಕಪ್ಪುಕಾಡಿನಹಾಡು' ಕ್ರಾಂತಿಗೆ ಬದಲಾಗಿ ಪ್ರೀತಿ ಪ್ರೇಮಗಳ ಮೂಲಕ ಸಕಲವನ್ನು ಜಯಿಸಬಹುದೆಂಬ ಆಶಾವಾದದೊಂದಿಗೆ ಓದುಗರ ಗಮನ ಸೆಳೆಯುತ್ತದೆ. ಜೊತೆಗೆ ಸಿದ್ಧಲಿಂಗಯ್ಯನವರ ವಸ್ತುಗ್ರಹಿಕೆಯಲ್ಲಿನ ವೈವಿಧ್ಯತೆಯನ್ನು ಪರಿಚಯಿಸುತ್ತದೆ. ರೋಷ, ವಿಷಾದ,

ಶೋಷಣೆ, ಪ್ರೀತಿ, ಪ್ರೇಮ ಎಲ್ಲವೂ ಇಲ್ಲಿನ ಕವಿತೆಗಳಲ್ಲಿ ಕಲಾತ್ಮಕವಾಗಿ ಅಭಿವ್ಯಕ್ತವಾಗಿವೆ. ಆರಂಭದ ಕವಿತಗಳಲ್ಲಿ ವಾಚ್ಯತೆ ಇಲ್ಲಿ ಧ್ವನಿಪೂರ್ಣತೆಯನ್ನು ಪಡೆದುಕೊಂಡಿದೆ. ಕವಿಯ ಅನುಭವಗಳಲ್ಲಿ ಇಲ್ಲಿ ಗರಿ ಬಿಚ್ಚಿವೆ. ಭಾಷಾ ಬಳಕೆಯಲ್ಲಿನ ಪ್ರೌಢಿಮೆ ಕೂಡ ಹಿಡಿತ ಸಾಧಿಸಿದೆ. ಕೆಲವು ಕವಿತೆಗಳು ಲಯಗಾರಿಕೆಯನ್ನು. ಗರ್ಭೀಕರಿಸಿಕೊಂಡಿವೆ. ಸಾಹಿತ್ಯ ಮತ್ತು ಲಯಗಾರಿಗಳು ಇಲ್ಲಿ ಒಂದಕ್ಕೊಂದು ಬೆಸೆದುಕೊಂಡಿರುವುದರಿಂದ ಇಲ್ಲಿನ ಕವಿತೆಗಳು ಹಾಡುಗಳಾಗಿ ಓದುಗರನ್ನು ತನ್ನತ್ತ ಆಕರ್ಷಿಸುವಲ್ಲಿ ಯಶಸ್ವಿಯಾಗಿವೆ. ಸ್ವತಃ ಸಿದ್ಧಲಿಂಗಯ್ಯನವರೇ ಹೇಳಿಕೊಂಡಿರುವ ಹಾಗೆ ಇಲ್ಲಿನ ಕೆಲವು ಕವಿತೆಗಳನ್ನು ರಂಗಭೂಮಿಯಲ್ಲಿ ಬಳಸಿಕೊಳ್ಳಲಾಗಿದೆ.

ಸಿದ್ಧಲಿಂಗಯ್ಯನವರು ಮತ್ತೊಂದು ಪ್ರಮುಖ ಕವನ ಸಂಕಲನ 'ಮೆರವಣಿಗೆ'. 'ಮೆರವಣಿಗೆಯ' ಕೆಲವು ಕವಿತೆಗಳನ್ನು ಹೊಸಕವಿತೆಗಳನ್ನು ಪಟ್ಟಿಯಲ್ಲಿ ಸೇರಿಸಲಾಗಿದೆ. ಇಲ್ಲಿನ ಎಲ್ಲಾ ಕವಿತೆಗಳು ಶ್ರೀರಾಂಪುರದ ಸ್ಲಮ್ಮಿನಿಂದ ಹೊಮ್ಮಿ ಬಂದ ಬಾಷೆಯ ವೈವಿಧ್ಯತೆಯಿಂದ ಕೂಡಿವೆ. ಈ ಸಂಕಲನದಲ್ಲಿರುವ 'ಪಂಚನದಿಗಳ ನಾಡು', 'ಕಾರ್ಲ್‌ಮಾರ್ಕ್ಸ್', 'ಬೆಂಜಮಿನ್ ಮೊಲಾಯಿಸ್', 'ರಾಮಚಂದ್ರ ಶರ್ಮ', 'ಯುಗಾದಿ', 'ಮಂಕಾದ ಜನಗಳು', 'ಗಾಂಧಿ', 'ಗ್ರಾಮದೇವತೆಗಳು', 'ಕಣ್ಣಾವಲು', 'ಹಕ್ಕಿಗಳು', 'ಕನವರಿಕೆ', 'ಆಸೆ' ಮೊದಲಾದವುಗಳು ಶೋಷಣೆಯ ವಿರುದ್ಧ ಆಶಯವನ್ನು ವ್ಯಕ್ತಪಡಿಸುತ್ತವೆ.

ಒಟ್ಟಾರೆ ಸಿದ್ಧಲಿಂಗಯ್ಯನವರ ಎಲ್ಲಾ ಕಾವ್ಯಗಳ ಮೂಲ ಉದ್ದೇಶ ಸಮ ಸಮಾಜದ ನಿರ್ಮಾಣಕ್ಕೆ ಉತ್ತೇಜಿಸುವುದು. ಅದಕ್ಕೆ ಅವರು ಬಳಸಿಕೊಂಡ ಸಾಧನಗಳೆಂದರೆ, ಮಾರ್ಕ್ಸ್‌ವಾದ, ಲೋಹಿಯಾವಾದ ಮತ್ತು ಅಂಬೇಡ್ಕರ್ ಅವರ ಕೆಲವು ತಾತ್ವಿಕ ಚಿಂತನೆಗಳು.

ಸಿದ್ಧಲಿಂಗಯ್ಯನವರು ಕಾವ್ಯಗಳಲ್ಲಿ ಪ್ರದಾನವಾಗಿ ನಾವು ಗುರುತಿಸಬಹುದಾದ ಕಾವ್ಯದ ವಿಶೇಷತೆಗಳು ಹಾಗೂ ಪ್ರಧಾನ ಅಂಶಗಳನ್ನು ಈ ಕೆಳಗಿನಂತಿವೆ.

ಎಪ್ಪತ್ತರ ದಶಕದ ದಲಿತಚಳುವಳಿ ಹಾಗೂ ದಲಿತಸಾಹಿತ್ಯದ ನಡುವೆ ಪರಸ್ಪರ ಪೂರಕ ಹಾಗೂ ಪ್ರೇರಕವಾದ ತಾತ್ವಿಕ ಸಂಬಂಧವಿದೆ. ಸಾಹಿತ್ಯದ ಸೃಷ್ಟಿಗೆ ಚಳುವಳಿ ಕಾರಣವಾದರೆ ಚಳುವಳಿಯನ್ನು ಉದ್ದೀಪಿಸುವಲ್ಲಿ, ತೀವ್ರಗೊಳಿಸುವಲ್ಲಿ ದಲಿತಸಾಹಿತ್ಯ ಅಗಾಧವಾಗಿ ಕೆಲಸಮಾಡಿದೆ. ಎಪ್ಪತ್ತರ ದಶಕದ ಆರಂಭದಲ್ಲಿ ದಲಿತ ಕವಿಗಳು ರಚಿಸಿದ ಕವಿತೆಗಳು ಸಮೂಹದನಿಯ ಹಾಡುಗಳಾಗಿ ಕೋಲಾರದಿಂದ ಬೀದರ್‌ನವರೆಗೆ ಪ್ರತಿಭಟನಾ ಮೆರವಣಿಗೆಗಳಲ್ಲಿ, ರೈತಚಳುವಳಿಗಳಲ್ಲಿ ಮೊಳಗಿದವು. ಬಹುತೇಕ ಕವಿತೆಗಳು ಚಳುವಳಿಯನ್ನೇ ಮುಖ್ಯವಾಗಿಟ್ಟುಕೊಂಡು ರಚನೆಯಾದವು. ಅವುಗಳಲ್ಲಿ ಪ್ರಧಾನವಾಗಿ ಸಿದ್ಧಲಿಂಗಯ್ಯನವರ ಕವಿತೆಗಳು ಹೋರಾಟದ ದನಿಯಾಗಿ ಬಂಡಾಯದ ಬನಿಯಾಗಿ ಅಭಿವ್ಯಕ್ತಗೊಂಡಿವೆ. ಬಂಡಾಯದ

ಭಾಷೆಯೊಂದಿಗೆ ರಚಿತಗೊಂಡ ಇವರ ಕಾವ್ಯ ನವ್ಯದ ವ್ಯಕ್ತಿಕೇಂದ್ರಿತ ನೆಲೆಯನ್ನು ತಿರಸ್ಕರಿಸಿ, ಸಮುದಾಯಿಕ ನೆಲೆಯ ಕಡೆಗೆ ಚಲಿಸಿದ್ದು ಸಿದ್ಧಲಿಂಗಯ್ಯನವರ ಆಂತರಿಕ ತುಡಿತದಿಂದ ಎಂದ್ದು ಹೇಳಬಹುದು. ದಲಿತರ ರೈತರ ಕಾರ್ಮಿಕರ ಹೋರಾಟದ ತೀವ್ರತೆಯನ್ನು ಕಟ್ಟಿಕೊಡುವ ಇವರ ಕವಿತೆಗಳು ಒಮ್ಮೆಲೆ ಶೋಷಿತರನ್ನು, ಶೋಷಕವ್ಯವಸ್ಥೆಯ ವಿರುದ್ಧ ಪ್ರತಿಭಟಿಸುವ ಅಥವಾ ತಿರುಗಿ ಬೀಳುವಲ್ಲಿ ಅಣಿಗೊಳಿಸುವಷ್ಟು ಸತ್ವಭರಿತವಾಗಿವೆ. ಇದನ್ನು ನಾವು ಅವರ ಕವನಗಳಲ್ಲಿ ನೋಡಬಹುದು.

'ನನ್ನ ಜನಗಳು' ಕವಿತೆಯ 'ಹೊಲೆಮಾದಿಗರಹಾಡು' ಸಂಕಲನದಲ್ಲಿ ಪ್ರಮುಖವಾಗಿದ್ದು ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾಜದ ಪ್ರಗತಿಗೆ ಕಾರಣರಾದ ಶ್ರಮಿಕವರ್ಗಕ್ಕೆ ಯಾವುದೇ ಮನ್ನಣೆ ಇಲ್ಲದಿರುವುದನ್ನು ಸೂಚಿಸುತ್ತದೆ.

" ಹಸಿವಿನಿಂದ ಸತ್ತೋರು ಸೈಜುಗಲ್ಲು ಹೊತ್ತೋರು
ವದೆಸಿಕೊಂಡು ವರಗಿದೋರು ನನ್ನ ಜನಗಳು
ಕಾಲುಕಯ್ಯಿ ಹಿಡಿಯೋರು ಕೈಮಡಗಿಸಿಕೊಳ್ಳೋರು
ಭಕ್ತರಪ್ಪೊ ಭಕ್ತರು ನನ್ನ ಜನಗಳು "-೨

ಸಮಾಜದ ಮೂಲ ತಳಹದಿಯೇ ಶ್ರಮಿಕ ವರ್ಗವಾಗಿದ್ದು ಇವರ ದುಮೆಯೇ ಪ್ರತಿಫಲವನ್ನು ಕಲವೇ ಮಂದಿ ಅನಿಭವಿಸುತ್ತಿರುವುದು ಸಾಮಾಜಿಕ ಶೋಷಣೆಯ ವೈಪರೀತ್ಯವನ್ನು ಎತ್ತಿತೋರಿಸುತ್ತದೆ. ಕವನದ ಮೊದಲನೆ ಸಾಲಿನಲ್ಲಿ ಪ್ರಸ್ತಾಪವಾಗಿರುವ 'ಹಸಿವು', ಶ್ರಮಿಕ ಬಡವ ಮತ್ತು ದಲಿತರನ್ನು ಶತಮಾನಗಳಿಂದ ಕಾಡುತ್ತಿರುವ ಸಮಸ್ಯೆಯಾಗಿದ್ದು, ಹಸಿವಿನಿಂದ ವದೆಯುವವರನ್ನು ಮರುಪ್ರಶ್ನಿಸಲಾರದಷ್ಟು ನಿಸ್ತೇಜರಾಗಿದ್ದಾರೆ. ಮಾರ್ಕ್ಸ್‌ವಾದಿ ಚಿಂತನೆ ಹಿನ್ನೆಲೆಯಲ್ಲಿ ರಚಿತವಾಗಿರುವ ಈ ಕವನ ವರ್ಗ ವ್ಯವಸ್ಥೆಯ ಭೀಕರತೆಯನ್ನು ಪ್ರಶ್ನಿಸುತ್ತದೆ.

ಸಿದ್ಧಲಿಂಗಯ್ಯನವರ ಕಾವ್ಯಗಳಲ್ಲಿ ಸಾಮಾಜಿಕ ಸ್ಥಿತಿಗತಿ:-

ಸಿದ್ಧಲಿಂಗಯ್ಯನವರ ಕಾವ್ಯದ ಮತ್ತೊಂದು ಪ್ರಮುಖ ಪರಿಕಲ್ಪನೆ ಸಾಮಾಜಿಕ ಸ್ಥಿತಿಗತಿ. ಕವಿಯ ಸಮಕಾಲೀನ ಸಾಮಾಜಿಕ ವ್ಯವಸ್ಥೆಯು ಆತನ ಸೃಜನಶೀಲ ಸಾಹಿತ್ಯದ ಮೂಲ ಸೆಲೆಯಾಗಿರುತ್ತದೆ. ಸಮಾಜದೊಟ್ಟಿಗಿನ ಕವಿಯ ಪರಸ್ಪರ ಸಂಬಂಧವನ್ನು ಆತನ ಒಟ್ಟು ಸಾಹಿತ್ಯ ಪ್ರತಿಬಿಂಬಿಸುತ್ತದೆ. ಜನಪರಸಾಹಿತಿ ಸಾಮಾಜಿಕ ಬದುಕಿನ ವೈಚಿತ್ರ್ಯಗಳನ್ನು ಅರಗಿಸಿಕೊಳ್ಳುತ್ತಲೇ ಸಹಜವಾಗಿ ಅದಕ್ಕೆ ಪ್ರತಿಸ್ಪಂದಿಸುತ್ತಾ ಪ್ರತಿಕ್ರಿಯಿಸುತ್ತಾ ಇರುತ್ತದೆಂಬುದು ಇಲ್ಲಿ ತಿಳಿದು ಬರುತ್ತದೆ. ಸಾಮಾಜಿಕ ಪ್ರಜ್ಞೆಯ ಒತ್ತಡದ ಹಿನ್ನೆಲೆಯಲ್ಲಿ ರೂಪುಗೊಳ್ಳದ ಸಾಹಿತ್ಯ ಯಾವುದೇ ಸಂದರ್ಭದಲ್ಲಿ ಸಮಾಜಮುಖಿಯಾಗಿ, ಜನಪರವಾಗಿ, ಗಟ್ಟಿಯಾಗಿ ನೆಲೆನಿಲ್ಲಲು ಸಾಧ್ಯವಿಲ್ಲ. ಸಾಮಾಜಿಕ ಪ್ರಜ್ಞೆ

ಎಂಬುದು ಪ್ರತಿಗಾಮಿ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆಯನ್ನು ಕುರಿತು ಚಿಂತಿಸುವಂತಹುದು. ಸಾಮಾಜಿಕ ಪ್ರಜ್ಞೆಯುಳ್ಳ ಕವಿ, ತನ್ನ ಸಮಾಜದೊಟ್ಟಿಗೆ ಬೆರೆತು, ಅಲ್ಲಿನ ಸಮಸ್ಯೆಗಳನ್ನು ಆಳವಾಗಿ ಅರಿತುಕೊಂಡು ಪ್ರಾಮಾಣಿಕವಾಗಿ ಜನಪರವಾದ ಅಭಿವ್ಯಕ್ತಿಯನ್ನು ಸಮರ್ಥವಾಗಿ ಕೊಡಬಲ್ಲವನಾಗಿರುತ್ತಾನೆ. ಆ ನಿಟ್ಟಿನಲ್ಲಿ ಸಿದ್ಧಲಿಂಗಯ್ಯನವರ ಒಟ್ಟು ಕಾವ್ಯಗಳಲ್ಲಿ ಹೆಚ್ಚಿನವು ಸಾಮಾಜಿಕ ಪ್ರಜ್ಞೆಯ ದೃಷ್ಟಿಕೋನದಲ್ಲಿ ಒಡಮೂಡಿದಂತವು. ಸಮಾಜದಲ್ಲಿ ಇವರು ಕಂಡುಂಡ ಬಡತನ, ಹಸಿವು, ಅಸ್ಪೃಶ್ಯತೆ, ಶೋಷಣೆ, ಅಪಮಾನ ನಿಂದನೆಗಳು ಇವರ ಕಾವ್ಯವನ್ನು ರೂಪಿಸಿವೆ. ಹಾಗಾಗಿ ಸಿದ್ಧಲಿಂಗಯ್ಯನವರ ಕವಿತೆಗಳು ದೀನದಲಿತರ, ಬಡವರ, ದುರ್ಬಲರ, ಶ್ರಮಿಕರ ಮುಖವಾಣಿಯಾಗಿರುವುದನ್ನು ಕಾಣಬಹುದು. ಜನಪರ ಸಾಹಿತಿಯಾದವ ತನ್ನ ಸೃಜನಶೀಲ ನೆಲೆಯಲ್ಲಿ ಸದಾ ಸಾಮಾಜಿಕ ಜವಾಬ್ದಾರಿಯ ಜನಪರ ಸಾಹಿತಿಯಾದವ ತನ್ನ ಸೃಜನಶೀಲ ನೆಲೆಯಲ್ಲಿ ಸದಾ ಸಾಮಾಜಿಕ ಜವಾಬ್ದಾರಿಯ ಹೊಣೆಗಾರಿಕೆಯನ್ನು ಅರಿತವನಾಗಿರುತ್ತಾನೆ. ಸಾಮಾಜಮುಖಿ ಆಲೋಚನೆಗಳು ಚಿಂತನೆಗಳು ಆತನನ್ನು ಸದಾ ಪ್ರಜ್ಞಾವಸ್ಥೆಯಲ್ಲಿಟ್ಟಿರುತ್ತವೆ. ಆತ ಸಮಾಜವನ್ನು ಒಳಹೊಕ್ಕು ನೋಡಿದಂತೆಲ್ಲ ಅಲಕ್ಷಿತ ಸತ್ಯಗಳು ಗೋಚರಿಸಲಾರಂಭಿಸುತ್ತವೆ.

ಸಿದ್ಧಲಿಂಗಯ್ಯನವರ ಕಾವ್ಯಗಳಲ್ಲಿ ಬಡತನ ಮತ್ತು ಹಸಿವು:-

ಹಸಿವು-ಬಡತನ ಸಿದ್ಧಲಿಂಗಯ್ಯನವರ ಕಾವ್ಯಗಳಲ್ಲಿ ಹೆಚ್ಚು ಪ್ರತಿಧ್ವನಿಸಿರುವ ವಸ್ತುವಾಗಿದೆ. ಶೋಷಿತ ಜನಸಮುದಾಯದಲ್ಲಿ ಹುಟ್ಟಿ ಬೆಳೆದ ಇವರು, ಅವರ ದುಃಖ ದುಮ್ಮಾನಗಳನ್ನು ಕಣ್ಣಾರೆ ಕಂಡವರು. ಹಸಿವು ಸಿದ್ಧಲಿಂಗಯ್ಯನವರನ್ನು ಕಾಡದಿದ್ದರೂ ಬಡತನದ ಸ್ಪರ್ಶವಂತೂ ಇದ್ದೇ ಇದೆ. ಹಸಿವು ಬಡತನದ ಸಂಘರ್ಷಾತ್ಮಕ ಬದುಕಿನೊಟ್ಟಿಗೆ ತಮ್ಮ ಅಸ್ತಿತ್ವವನ್ನು ಕಂಡು ಕೊಳ್ಳಲು ಹಪಹಪಿಸುತ್ತಿದ್ದಾರೆ. ನೊಂದವರ ಒಡಲಾಳದ ಜೀವದನಿಯಾಗಿರುವ 'ನನ್ನ ಜನಗಳು' ಕವಿತೆ ಹಸಿವು ಮತ್ತು ಬಡತನವನ್ನು ಪ್ರತಿನಿಧಿಸುತ್ತದೆ. ದಲಿತ ಸಮುದಾಯದಿಂದ ಬಂದ ಕವಿಗೆ, ದಲಿತರ ಸಮಸ್ಯೆಗಳು ಕಾಡಿರುವ ಹಾಗೆಯೇ ರೈತರ, ಕೂಲಿಕಾರ್ಮಿಕರ, ಗಾರೆ ಕೆಲಸಗಾರರ, ಗಣಿಗಳಲ್ಲಿ, ಹೋಟೆಲ್‌ಗಳಲ್ಲಿ, ಫ್ಯಾಕ್ಟರಿಗಳಲ್ಲಿ ಹೀನಾಯವಾಗಿ ದುಡಿಯುವವರ ಬದುಕಿನ ಸಂಕಷ್ಟಗಳು ಸಹ ತೀವ್ರವಾಗಿ ಕಾಡಿವೆ.

ಮಾರ್ಕ್ಸ್‌ವಾದಿ ಚಿಂತನೆಯ ಹಿನ್ನಲೆಯಲ್ಲಿ ರಚಿತವಾಗಿರುವ 'ನನ್ನ ಜನಗಳು' ಕವಿತೆಯು ವರ್ಗವ್ಯವಸ್ಥೆಯ ಭೀಕರತೆಯನ್ನು ಚಿಂತಿಸುತ್ತದೆ. ಜಮೀನ್ದಾರಿ ವ್ಯವಸ್ಥೆಯ ಕರಾಳ ಛಾಯೆಯಲ್ಲಿ ಕರಗಿ ಹೋಗಿರುವ ಕೃಷಿ ಕೂಲಿ ಕಾರ್ಮಿಕರ ಬದುಕಿನ ಚಿಂತಾಜನಕ ಸ್ಥಿತಿಯ ಬಗೆಗೆ ಕವಿತೆಯಲ್ಲಿ ಕನಿಕರ ವ್ಯಕ್ತಪಡಿಸಿದ್ದಾರೆ.

"ಹೊಲವನುತ್ತು ಬಿತ್ತೋರು ಬೆಳೆಯಕೂಯ್ದು ಬೆವರೋರು

ಬಿಸಿಲಿನಲ್ಲಿ ಬೇಯೋರು ನನ್ನ ಜನಗಳು
ಬರಿಗೈಲಿ ಬಂದೋರು ಉಸ್ಸೆಂದು ಕೂತೋರು
ಹೊಟ್ಟೆ ಬಟ್ಟೆಕಟ್ಟೆದೋರು ನನ್ನ ಜನಗಳು"[೨೧]

ಎಲ್ಲಿಯವರೆಗೆ ಶ್ರಮಿಕವರ್ಗದವರಿಗೆ, ಶೋಷಕರನ್ನು ಪ್ರಶ್ನಿಸುವ ಪ್ರತಿಫಲವನ್ನು ಕೇಳಿ ಪಡೆಯುವ ಎದೆಗಾರಿಕೆ ಬರುವುದಿಲ್ಲವೋ ಅಲ್ಲಿಯವರೆಗೆ ಈ ಬಡತನ ಹಸಿವು ಮೌಢ್ಯಗಳು ಶ್ರಮಿಕರನ್ನು ಆಳುತ್ತಿರುತ್ತವೆ. 'ಹೊಲೆಮಾದಿಗರಹಾಡು' ಕವನ ಸಂಕಲನದಲ್ಲಿ ಬರುವ 'ಬೀಳು' ಕವಿತೆ ಕೂಡ ದಲಿತ ಸಮುದಾಯದ ಕೂಲಿ ಹೆಣ್ಣಿನ ದುಸ್ಥಿತಿಯನ್ನು ನಿಷ್ಠುರವಾಗಿಯೂ, ಬಡತನದ ತೀವ್ರತೆಯನ್ನು ಅನುಕಂಪದಿಂದಲೂ ಅಭಿವ್ಯಕ್ತಿಸುತ್ತದೆ.

"ಎಣ್ಣೆ ಕಾಣದ ತಲೆಯ ಕೂದಲುಗಳೆದ್ದೆದ್ದು ನರ್ತನವ
ಗೈಯುತ್ತಾರೆ ಮೋದದಿಂದ
ಬರಿಹೊಟ್ಟೆ ಕೊರಗಿತ್ತು ಕೊಳೆಬಟ್ಟೆಹರಿದಿತ್ತು
ಪ್ರೇತಕಳೆ ಚಿಮ್ಮಿತ್ತು ವದನದಿಂದ"[೨೨]

ಬಿಸಿಲಿನಲ್ಲಿ ದುಡಿಯುವ ತಲೆಕೂದಲಿಗೆ ಎಣ್ಣೆ ಇಲ್ಲ. ಹಸಿವನ್ನು ಹಿಂಗಿಸಿಕೊಳ್ಳುವುದು ದುಸ್ತರವೆನಿಸಿದೆ. ಬಡತನದಿಂದಾಗಿ ಉಡಲು ಬಟ್ಟೆಇಲ್ಲದೆ. ಹರಿದ ಬಟ್ಟೆಗಳಿಂದ ಮಾನಮುಚ್ಚಿಕೊಳ್ಳುವುದು ಅಸಾಧ್ಯವೆನಿಸಿದೆ. ಈ ಬಗೆಯ ವಸ್ತುವನ್ನು ಕಾವ್ಯವನ್ನಾಗಿಸುವ ಸಿದ್ಧಲಿಂಗಯ್ಯನವರ ಪ್ರತಿಭೆ ಆಧುನಿಕ ಕನ್ನಡ ಕಾವ್ಯಕ್ಕೆ ಅಪರೂಪನಿಸುತ್ತದೆ. ಬಡತನದ ಕ್ರೂರತೆಯು ಕೂಲಿ ಹೆಣ್ಣಿನ ಒಡಲಾಳದ ಮನುಷ್ಯ ಸಹಜ ಆಸೆ ಆಕಾಂಕ್ಷೆಗಳನ್ನು ನುಚ್ಚು ನೂರಾಗಿಸಿದೆ. ಕವಿಯ ಈ ಕವನದಲ್ಲಿನ ವಿವರಣೆಯು ಪ್ರಸ್ತುತ ಕೂಲಿ ಹೆಣ್ಣುಮಕ್ಕಳ ದುಸ್ಥಿತಿಗಿಂತ ಭಿನ್ನವಾದದೇನಲ್ಲ. ಇದು ಬಡತನದ ಬದುಕಿನ ವಾಸ್ತವ ಭೀಕರತೆಯ ಚಿತ್ರಣವಾಗಿದೆ. ಪ್ರತಿಮೆಯ ಮೂಲಕ ಹೇಳಬೇಕಾದ ವಿಷಯಕ್ಕೆ ಮತ್ತಷ್ಟು ಮೆರುಗು ತುಂಬುವ ಸಿದ್ಧಲಿಂಗಯ್ಯನವರು ಬಡ ಹೆಣ್ಣುಮಗಳ ಸೀರೆಯನ್ನು 'ಬಡತನದ ಬಾವುಟ' ಕ್ಕೆ ಹೋಲಿಸಿದ್ದಾರೆ.

ಶೋಷಣೆ, ಚಳುವಳಿ ಮತ್ತು ಪ್ರತಿಭಟನೆಯ ನೆಲೆಗಳು

ಸಿದ್ಧಲಿಂಗಯ್ಯನವರ ಕಾವ್ಯಗಳಲ್ಲಿ ಶೋಷಣೆ ಹಾಗೂ ಪ್ರತಿಭಟನೆ ಒಟ್ಟೊಟ್ಟಿಗೆ ಮೈದಾಳಿರುವುದನ್ನು ಪ್ರಾಧಾನವಾಗಿ ಗುರುತಿಸಬಹುದು. ಶತಮಾನಗಳಿಂದಲೂ ದಲಿತರು ಭಾರತೀಯ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯೊಳಗೆ ಅಸ್ಪೃಶ್ಯತೆಯ ಕಾರಣಕ್ಕಾಗಿ ಅನುಭವಿಸಿದ ಶೋಷಣೆಯ ನೋವು, ಅಪಮಾನವನ್ನು ಕಟುವಾಗಿ ಟೀಕಿಸುವ ಪ್ರತಿಭಟನೆಯ ದನಿಯೂ ಇವರ ಕಾವ್ಯದಲ್ಲಿದೆ. ಕವಿ ಬಾಲ್ಯದಲ್ಲಿ ಕಂಡ ದಲಿತಸಮುದಾಯದ ಶೋಷಣೆಯ ಸ್ಥಿತಿಗತಿಗಳನ್ನು ಇಲ್ಲಿ

ಕಾವ್ಯವಾಗಿಸಿದ್ದಾರೆ. ಈ ಹಿಂದೆ ಚರ್ಚಿಸಲಾದ 'ನನ್ನ ಜನಗಳು' ಕವಿತೆ ಶೋಷಣೆಯ ಚಿತ್ರಣವನ್ನು ಮುಂದಿಡುತ್ತದೆ. 'ಗಳ್ಳಗಳು' ಕವಿತೆಯ ಜೀತಗಾರಿಕೆಯ ಸಾಲದ ಶೋಷಣೆಯ ನೋವುಂಡು ನಲುಗಿ ಹೋಗಿರುವ ದಲಿತನೊಬ್ಬನ ಆರ್ತಧ್ವನಿಯಾಗಿದೆ. ನಗರಗಳಲ್ಲಿನ ಕೊಳಚೆ ಪ್ರದೇಶದ ಶ್ರಮಿಕ ಜನರ ಬದುಕಿನ ಸ್ಥಿತಿಗತಿಯನ್ನು ಸಹ ಈ ಕವಿತೆ ತಿಳಿಸುತ್ತದೆ. 'ಚೋಮನ ಮಕ್ಕಳ ಹಾಡು' ದಲಿತರ ಎದೆಯಂತರಾಳದ ನೋವುಸಂಕಟಗಳನ್ನು ಹೇಳುತ್ತಲೇ ಇಡೀ ದಲಿತರ ಬದುಕಿನ ಬವಣೆಯನ್ನು ತೆರೆದು ತೋರಿಸುತ್ತದೆ.

"ಕಾಳ ನೀಲ ಬೆಳ್ಳಿ ಗುರುವ ಚೆನಿಯ
ಚೋಮನ ಮಕ್ಕಳು ನಾವುಗಳು
ಕಣ್ಣಿನ ಒಳಗೆ ನೋವಿರುವವರು
ಮಣ್ಣಿನ ಒಳಗೆ ವಿಟ್ಟವರಸ್ಥ"-22

ಎಂಬಲ್ಲಿ ಮಣ್ಣಿನ ಮಕ್ಕಳ ಶೋಷಣೆ ಇದೆ. 'ಕಪ್ಪುಕಾಡಿನಹಾಡು' ಕವಿಯ ಆತ್ಮಕಥಾನಕ ಕವಿತೆಯಾಗಿದೆ. ಬಾಲ್ಯದ ದಿನಗಳಲ್ಲಿ ಮಾಗಡಿಯ ಹೊಸಪೇಟೆಯಲ್ಲಿ ಕಂಡುಂಡ ಸಾಮಾಜಿಕ ಬದುಕಿನ ಅನುಭವಗಳನ್ನು ಹಿಡಿದಿಟ್ಟಿದ್ದಾರೆ. ಚಳುವಳಿ ಸಾಹಿತ್ಯವನ್ನು ರೂಪಿಸಿದ ಹಾಗೆಯೇ ಸಾಹಿತ್ಯದಲ್ಲಿ ಕೂಡ ಚಳುವಳಿಯ ಪ್ರತಿಭಟನಾ ಸ್ವರೂಪವನ್ನು ಉದ್ದೀಪನಗೊಳಿಸಿದೆ. ಆ ನಿಟ್ಟಿನಲ್ಲಿ ಕಾವ್ಯದ ಪಾತ್ರ ಅಭೂತ ಪೂರ್ವವಾದದ್ದು. ಎಪ್ಪತ್ತರ ದಶಕದ ಆರಂಭದಲ್ಲಿ ದಲಿತ ಕವಿಗಳು ರಚಿಸಿದ ಕವಿತೆಗಳು ಸಮೂಹದನಿಯ ಹಾಡುಗಳಾಗಿ ಪ್ರತಿಭಟನಾ ಮೆರವಣಿಗೆಗಳಲ್ಲಿ ಮೊಳಗಿದವು. ಬಹುತೇಕ ಕವಿಗಳು ಚಳುವಳಿಯನ್ನೇ ಉದ್ದೇಶವಾಗಿಟ್ಟುಕೊಂಡು ಬರೆದಂತಹ ಕವಿತೆಗಳು. ಅವುಗಳ ಸಾಲಿನಲ್ಲಿ ಪ್ರಧಾನವಾಗಿ ಸಿದ್ಧಲಿಂಗಯ್ಯನವರ ಕವಿತೆಗಳು ಹೋರಾಟದ ದನಿಯಾಗಿವೆ. ದಲಿತ, ರೈತ, ಕಾರ್ಮಿಕರ ಹೋರಾಟದ ತೀವ್ರತೆಯನ್ನು ಕಟ್ಟಿಕೊಡುವ ಇವರ ಕವಿತೆಗಳು ಅದರೊಟ್ಟಿಗೆ ಶೋಷಿತರನ್ನು ಶೋಷಕವ್ಯವಸ್ಥೆಯ ವಿರುದ್ಧ ಪ್ರತಿಭಟನೆಗೆ ಅಣಿಗೊಳಿಸುವ ಸತ್ವವುಳ್ಳವು.

'ಗುಡಿಸಲುಗಳು ಗುಡುಗುತಿವೆ ಬಂಗಲೆಗಳು ನಡುಗುತ್ತಿವೆ
ಎಲ್ಲೆಲ್ಲಿಯೂ ಮೊಳಗುತ್ತಿದೆ ನವಕ್ರಾಂತಿಯ ಗಾನ'-24

ಮೇಲಿನ ಸಾಲುಗಳಲ್ಲಿ ಶತಮಾನಗಳಿಂದ ಮೇಲ್ವರ್ಗದವರ ದಬ್ಬಾಳಿಕೆಯನ್ನು ಮೂಕವಿಸ್ಮಿತರಾಗಿ ಅನುಭವಿಸುತ್ತಿದ್ದ ಶೋಷಿತ ಸಮುದಾಯ ಮೊದಲ ಬಾರಿಗೆ ಶೋಷಣೆಯ ವಿರುದ್ಧ ಪ್ರತಿಭಟನೆಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡು ಎಚ್ಚರಗೊಳ್ಳುತ್ತಿರುವುದರ ಸಂಕೇತವಾಗಿದೆ. 'ಗುಡಿಸಲು' ಶೋಷಿತರ, ಬಡತನದ ಸಂಕೇತವಾದರೆ, 'ಬಂಗಲೆ' ಶೋಷಕರ ದಬ್ಬಾಳಿಕೆಯ ಸಂಕೆತವಾಗಿದೆ. ಈಗ ಎಚ್ಚೆತ್ತ ಗುಡಿಸಲುಗಳ ಆರ್ಭಟಕ್ಕೆ ಬಂಗಲೆಗಳು ಕುಸಿಯತೊಡಗಿವೆ. ವರ್ಗವ್ಯವಸ್ಥೆಯ ದೌರ್ಜನ್ಯ

ತಾರಕಕ್ಕೇರಿದಾಗ ವರ್ಗಸಂಘರ್ಷದ ಅನಿವಾರ್ಯತೆಯ ಸತ್ಯವನ್ನು ಕವಿ ಮೇಲಿನ ಕವಿತೆಯಲ್ಲಿ ಹೇಳಿದ್ದಾರೆ.

ವರ್ಗವ್ಯವಸ್ಥೆಯೊಳಗೆ ತೀವ್ರ ಶೋಷಣೆಗೆ ಒಳಗಾದ ಬಡಕೂಲಿಕಾರ್ಮಿಕರು ಶ್ರೀಮಂತವರ್ಗದ ವಿರುದ್ಧ ಪ್ರತಿಭಟನೆಯ ಸವಾಲುಗಳಾಗಿ ಹೊರಹೊಮ್ಮುತ್ತಿರುವುದನ್ನು 'ಕ್ರಾಂತಿಪದ' ಕವಿತೆ ಬಿಂಬಿಸುತ್ತದೆ. ಗುಡಿಸಲುಗಳಲ್ಲಿ ಬಡವರ ನಿಟ್ಟುಸಿರು ಹೋರಾಟದ ದನಿಯಾದಾಗ 'ಬಂಗಲೆ'ಯೊಳಗಿನ ಶ್ರೀಮಂತರು ತತ್ತರಿಸಿ ಹೋಗುತ್ತಾರೆ ಎಂಬುದು ಈ ಕವಿತೆಯ ನಿಲುವು. ಈ ಕವಿತೆಯೊಳಗಿನ ಬಡವರ ಹೋರಾಟ ಸಮಾನತೆಯನ್ನು ಸ್ಥಾಪಿಸುವ, ಶ್ರೀಮಂತರು ಹಾಗೂ ಬಡವರ ನಡುವೆ ಉಂಟಾಗಿರುವ ಅಗಾಧ ಕಂದರವನ್ನು ಇಲ್ಲವಾಗಿಸುವ ಮೂಲ ಧೈರ್ಯವುಳ್ಳದ್ದಾಗಿದೆ. ಸಮಬಾಳು-ಸಮಪಾಲು ಎಂಬ ಕುವೆಂಪು ಅವರ ಪರಿಕಲ್ಪನೆಯ ಹಿನ್ನಲೆಯಲ್ಲಿ ಹುಟ್ಟಿಕೊಂಡ ಬಡವರ ಹೋರಾಟ ಪ್ರಗತಿಪರ ಮೌಲ್ಯವುಳ್ಳದ್ದು ಎಂಬುದನ್ನು ಮೇಲಿನ ಕವಿತೆ ಧ್ವನಿಸುತ್ತದೆ. ಕೂಲಿಕಾರ್ಮಿಕರ ಒಂದೊಂದು ಬೆವರಹನಿಯಲ್ಲಿ ಬೆಂಕಿಯಂತಹ ಸ್ಫೋಟಕಗುಣವಿದೆ. 'ಒಂದುಮೊಳೆಯಹಾಡು' ಕವಿತೆ ಕೂಡ ಪ್ರತಿಭಟನಾ ಸ್ವರೂಪವನ್ನು ಒಳಗೊಂಡಿದೆ.

"ಕ್ವರುಗ್ತಿನಿ ಕ್ವನಿಗೊಂದ್ಸಲ ಕೂಗ್ತಿನಿ
ಸೌದೆ ಸಿಗದಂಗ್ ಸಿಗಿತಿನಿ ಕುಟ್ತಿನಿ ಗುಟ್ಟಮೊಳೆಕೊಬ್ಬ
ಕುಡಿತಿನಿಗಟಗಟನೆ ಹ್ಯಂಡ ಕುಡ್ದಂಗೆ [illegible]

ಸಾವ್ಕಾರಿ ರಕ್ತನ [illegible]" ಎಂಬಲ್ಲಿ ಅಮಾನವೀಯವಾದ ಹಿಂಸೆಯನ್ನು ಅನಿಭವಿಸಿರುವ ಶೋಷಿತನು, ಶೋಷಕ ವ್ಯವಸ್ಥೆಯ ಅಸ್ತಿತ್ವವನ್ನು ವಿಧ್ವಂಸಗೊಳಿಸುವ ಪ್ರಖರವಾದ ಪ್ರತಿಭಟನಾವೇಶ ವ್ಯಕ್ತವಾಗಿದೆ. ಇದು "…. ಸಾಮಾನ್ಯ ಮನುಷ್ಯನ ಬದುಕಿನಿಂದ ಬಂದಿರುವ ಪ್ರತಿಭಟನೆಯ ಕವಿತೆ. ಶತಮಾನಗಳಿಂದ ಆರ್ಥಿಕ, ಸಾಮಾಜಿಕ, ದಬ್ಬಾಳಿಕೆ ಗುರಿಯಾಗಿದ್ದ ಜನಾಂಗದ ಮೊಟ್ಟ ಮೊದಲ ದನಿ ಇದು. ಅದುಮಿಟ್ಟಿದ್ದ ತನ್ನೆಲ್ಲ ರೋಷ, ವಿಷಾದ ಈ ಕಾವ್ಯದ ಸಾಲುಗಳಲ್ಲಿ ವಿದ್ಯುತ್ತಿನಂತೆ ಹರಿಯುತ್ತದೆ. [illegible]" ಎಂಬ ಡಿ. ಆರ್. ನಾಗರಾಜ್ ಅವರ ಅಭಿಪ್ರಾಯ ಕವಿತೆಯ ಹುಟ್ಟಿನ ಉದ್ದೇಶವನ್ನು ವಿವರಿಸುತ್ತದೆ.

'ಒಂದುಮೂಳೆಯಹಾಡು', 'ಒಂದು ಪದ' ಕವಿತೆಗಳಲ್ಲಿನ ಸಿಟ್ಟು ಕವಿಯ ವೈಯಕ್ತಿಕ ಆಕ್ರೋಶವಲ್ಲ ಸಾವಿರಾರು ವರ್ಷಗಳಿಂದ ಅಸಮಾನತೆಯ ಕೂಪದಲ್ಲಿ ಬೆಂದು ಹೋಗಿರುವ ಸಮುದಾಯವೊಂದರ ಪ್ರತಿಕ್ರಿಯೆಯಾಗಿದೆ. ಈ ನಿಟ್ಟಿನ ಮೂಲನೆಲೆಯನ್ನು ಹುಡುಕುತ್ತಾ ಹೋದರೆ ಶೋಷಿತರ ಬದುಕು ಪದರಪದರವಾಗಿ ತೆರೆದುಕೊಳ್ಳುತ್ತಾ ಹೋಗುತ್ತದೆ. ಈ ಕವಿತೆಗಳ ಸಿಟ್ಟಿನ

ಆಳದಲ್ಲಿ ನೋವಿದೆ. ಹಾಗಾಗಿ ಈ ಕವಿತೆಗಳಲ್ಲಿ ಪ್ರಕಟಗೊಂಡಿರುವ ಸಿಟ್ಟು ಸಾರ್ವತ್ರಿಕ ಸ್ವರೂಪವನ್ನು ಪಡೆದುಕೊಂಡಿದ್ದು ಈ ಸಿಟ್ಟಿಗೂ ಶೋಷಿತ ಸಮಾಜಕ್ಕೂ ಅವಿನಾಭಾವ ಸಂಬಂಧವಿದೆ. ಸಿದ್ಧಲಿಂಗಯ್ಯನವರ ಕಾವ್ಯದಲ್ಲಿ ಕೇವಲ ರೋಚ್ಚು ಆಕ್ರೋಶವೇ ವ್ಯಕ್ತಗೊಂಡಿದ್ದು ಕಲೆಯಲ್ಲಿ ಸೋತಿದೆ ಎಂಬ ಮಾತುಗಳು ಕೇಳಿಬಂದಿದ್ದು ನಿಜ. ಆದರೆ ಇದು ಹುರುಳಿಲ್ಲದ ಆಪಾದನೆಯಾಗಿದೆ. ಸಿದ್ಧಲಿಂಗಯ್ಯನವರು ತಮ್ಮ ಆರಂಭದ ಕವನಗಳಲ್ಲಿ ಮೊದಲಿಗೆ ಶೋಷಿತರ ಸ್ಥಿತಿಗತಿ, ಅಪಮಾನಗಳನ್ನು ಹೇಳಿ ಅನಂತರ ಆ ಹೀನಸ್ಥಿತಿಗೆ ಕಾರಣರಾದವರ ಬಗೆಗೆ ಸಿಟ್ಟನಿಂದ 'ಇಕ್ರಲಾ ವದ್ರಿಲಾ.....' ಎಂದು ಹೇಳುತ್ತಾರೆಯೇ ವಿನಃ ಪ್ರಾರಂಭಕ್ಕೆ ಸಿಡಿಮಿಡಿಗೊಳ್ಳುವುದಿಲ್ಲ. ಇದು ಸಿಟ್ಟಿಗೆ ಕಾರಣವನ್ನು ಹೇಳುತ್ತಲೆ ಆಸಿಟ್ಟಿನ ಹಕ್ಕನ್ನು ಸಮರ್ಥಿಸಿಕೊಳ್ಳುವ ಸಿದ್ಧಲಿಂಗಯ್ಯನವರ ದಲಿತ ಪ್ರಜ್ಞೆಯ ಎಚ್ಚರವಾಗಿದೆ.

ಚಳುವಳಿಯ ಒಡನಾಟದಲ್ಲಿ ಬೆಳೆದ ಸಿದ್ಧಲಿಂಗಯ್ಯನವರು ಹೋರಾಟದಿಂದ ಮಾತ್ರ ಶೋಷಿತ ಸಮುದಾಯದಲ್ಲಿನ ಮೂಲಭೂತ ಸಮಸ್ಯೆಗಳ ಬದಲಾವಣೆ ಸಾಧ್ಯ ಎಂಬುದನ್ನು ಗಾಢವಾಗಿ ನಂಬಿದ್ದರು. ಹೋರಾಟದ ಮೂಲಕ ಕ್ರಾಂತಿಯನ್ನು ಮಾಡಬೇಕೆಂದಿದ್ದ ಕವಿ 'ನನ್ನವಳಿಗೆ' ಎಂಬ ಕವಿತೆಯಲ್ಲಿ 'ಕ್ರಾಂತಿ'ಯನ್ನು ಒಂದು ಸುಂದರ ಹೆಣ್ಣಾಗಿ ತನ್ನ ಪ್ರೇಯಸಿಯಂತೆ ಕಲ್ಪಿಸಿ ಕೊಂಡಿದ್ದಾರೆ.

"ಕ್ರಾಂತಿ ಕನ್ಯೆ ಮೋಹ ಜನ್ಯೆ
ನಿನ್ನ ಮದುವೆ ಆಗುವೆ
ಕ್ರಾಂತಿ ಕಿಡಿಯ ಸಿಡಿಸುವಾಗ"[32]

ನಾನು ನಿನ್ನ ತಬ್ಬುವೆ' – ಈ ಕವಿತೆಯಲ್ಲಿ ಪ್ರೀತಿ ಮತ್ತು ಪ್ರತಿಭಟನೆಯನ್ನು ಒಟ್ಟೊಟ್ಟಿಗೆ ಬೆಸೆಯುವಲ್ಲಿ ಯಶಸ್ವಿಯಾಗಿದ್ದಾರೆ. ಪ್ರತಿಭಟನೆಯನ್ನು ವ್ಯಕ್ತಪಡಿಸುವ ಇಂತಹ ಹಲವಾರು ಕವಿತೆಗಳಲ್ಲಿ 'ಸಾವಿರಾರುನದಿಗಳು' ಕವಿತೆಯ ಪ್ರತಿಭಟನಾಧ್ವನಿಯಾಗುವ ಜೀವಂತಿಕೆಯ ಸಂಕೇತವಾಗಿದೆ. ಶೋಷಿತರ ಬಂಡಾಯ ಇಲ್ಲಿ ಪರಿಣಾಮಕಾರಿಯಾದ ಕಾವ್ಯರೂಪವನ್ನು ಪಡೆದುಕೊಂಡಿದೆ. ಕ್ರಾಂತಿಕವಿ ಸಿದ್ಧಲಿಂಗಯ್ಯನವರು ಚಳುವಳಿಯ ತೀವ್ರತೆಯನ್ನು ಕಾವ್ಯ ಬಂಧದ ಮೂಲಕ ಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಹೋರಾಟದೊಟ್ಟಿಗಿನ ಕವಿಯ ತಾದ್ಯಾತ್ಮಕತೆಯನ್ನು ಈ ಕವಿತೆ ಸಶಕ್ತವಾಗಿ ನನಗೆ ಇಷ್ಟವಾದ ಕವಿತೆಯಾಗಿದೆ. ಆ ಬೆಟ್ಟಗುಡ್ಡಗಳ ನಡುವೆ, ಕಾಫಿ ತೋಟದ ಕೆಲಸಗಾರರು ನಡೆಸಿದ ಹೋರಾಟವನ್ನು ಕುರಿತದ್ದು ಈ ಕವಿತೆ. ಅಂದು ಆ ಜನ ನಡೆಸಿದ ಪ್ರತಿಭಟನಾ ಮೆರವಣಿಗೆಯಲ್ಲಿ ನಾನೂ ಭಾಗವಹಿಸಿದ್ದೆ. ಈ ಕವಿತೆಯ ನೆನಪಾದಾಗಲೆಲ್ಲ ಅಲ್ಲಿನ ಬೆಟ್ಟಗುಡ್ಡ, ಕಾಡು, ಬಿಸಿಲು, ದಿಟ್ಟತನದಿಂದ ಮೆರವಣಿಗೆಯಲ್ಲಿ ಬಂದ ಜನ ಎಲ್ಲಾ ಕಣ್ಮುಂದೆ ನಿಲ್ಲುವುದರಿಂದ ಈ ಕವಿತೆ ನನ್ನ ಮೆಚ್ಚಿನ ಕವಿತೆಯಾಗಿದೆ ಎಂದು ಹೇಳಿದ್ದಾರೆ.

'ನೆನ್ನೆ ದಿನ ನನ್ನ ಜನ ಬೆಟ್ಟದಂತೆ ಬಂದರು ಕಪ್ಪು ಮುಖ ಬೆಳ್ಳಿಗಡ್ಡಗಳ ....' ಹೀಗೆ ಸಾಗುವ ಈ ಕವಿತೆಯಲ್ಲಿ ಪ್ರತಿಭಟನಾಕಾರರ ಸಮೂಹವನ್ನು ಬೆಟ್ಟಕ್ಕೆ ಹೋಲಿಸಿದ್ದಾರೆ.

ದಲಿತ ಚಳುವಳಿಯ ತೀಕ್ಷ್ಣತೆಯ ಚಿತ್ರಣ 'ದಲಿತರು ಬರುವರು' ಕವಿತೆಯಲ್ಲಿ ಮೈದಾಳಿದೆ. ಚಳುವಳಿಯ ಆರಂಭದ ದಿನಗಳಲ್ಲಿ ದಲಿತರ ಹೋರಾಟದ ಬಗೆಗೆ ಕವಿಗೆ ಇದ್ದ ಮಹತ್ವಾಕಾಂಕ್ಷೆಯನ್ನು ಈ ಕವಿತೆಯಲ್ಲಿ ಕಾಣಬಹುದು.

'ದಲಿತರು ಬರುವರು ದಾರಿ ಬಿಡಿ

ದಲಿತರ ಕೈಗೆ ರಾಜ್ಯ ಕೊಡಿ'

ಎಂಬ ಸಾಲುಗಳಲ್ಲಿ 'ನಾನು ಸಾಯುವುದರೊಳಗೆ ನನ್ನ ಜನ ಈ ದೇಶವನ್ನು ಆಳುವುದ ಕಣ್ಣಾರ ಕಾಣಬೇಕು' ಎಂಬ ಅಂಬೇಡ್ಕರ್ ಅವರ ಆಶಯಕ್ಕೆ ಅನುಗುಣವಾಗಿದೆ. ಈ ಸಾಲುಗಳು ದಲಿತ ಚಳುವಳಿಯ ಒಂದು ಶ್ಲೋಕದಂತೆ ಎಲ್ಲರ ಬಾಯಲ್ಲೂ ನಲಿಯಲಾರಂಬಿಸುತ್ತ. ಸಿದ್ಧಲಿಂಗಯ್ಯನವರು ತಮ್ಮ ಕಾವ್ಯದ ಮೂಲಕ ದಲಿತರ ಬದುಕು ಮತ್ತು ಹೋರಾಟವನ್ನು ಹಾಡಾಗಿಸಿದವರು. ಇವರ ಒಂದೊಂದು ಹಾಡಿಗೂ ತಮ್ಮ ದನಿಗೂಡಿಸಿ ಜನಾರ್ಧನ್, ಅಪ್ಪಗೆರೆ ತಿಮ್ಮರಾಜು ಮೊದಲಾದವರು ನೊಂದ ಜನರ ನಡುವೆ ಪ್ರತಿಧ್ವನಿಸಿದ್ದಾರೆ. ಇವರ ಹೋರಾಟದ ಹಾಡುಗಳು ಕಾರ್ಮಿಕರ ಚಳುವಳಿಯ ಪ್ರತಿಭಟನಾಕಾರರಲ್ಲಿ ಬಂಡಾಯದ ಮನೋಭಾವವನ್ನು ಹುಟ್ಟುಹಾಕುವಲ್ಲಿ ಮತ್ತು ಕರ್ನಾಟಕದ ದಲಿತರಲ್ಲಿ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿವೆ.

ದಲಿತ ಚಳುವಳಿಯೊಟ್ಟಿಗೆ ಬೆರೆತು ಬೆಳೆದ ಸಿದ್ಧಲಿಂಗಯ್ಯನವರು ಚಳುವಳಿಯ ಆರಂಭದ ಯಶಸ್ಸಿನದಿನಗಳು ನಂತರದ ಕ್ರಿಯಾತ್ಮಕ ಬೆಳವಣಿಗೆ, ಆನಂತರದ ಸ್ಥಗಿತತೆಯನ್ನು ಕಣ್ಣಾರೆ ಕಂಡವರು. ಚಳುವಳಿಯ ಹುಟ್ಟು, ಬೆಳವಣಿಗೆ, ಆಶಯ ಧೋರಣೆ ಮತ್ತು ಕ್ರಾಂತಿಯ ತೀವ್ರತೆಯನ್ನು ಕಾವ್ಯವಾಗಿಸಿರುವ ಇವರು ಕೊನೆಗೆ ಅದರ ಮಿತಿ ಮತ್ತು ಅವನತಿಯನ್ನು 'ಮೆರವಣಿಗೆ' ಕವಿತೆಯ ಮೂಲಕ ಬಿಂಬಿಸಿದ್ದಾರೆ. ಹೋರಾಟದ ದನಿಯಾಗಿರುವ ಇವರ ಕ್ರಾಂತಿಕಾವ್ಯದಲ್ಲಿ ಮೂರು ಬಗೆಯ ಅಂಶಗಳನ್ನು ಹಿಡಿದಿಡಬಹುದು. ಮೊದಲನೆಯದಾಗಿ ಶೋಷಿತ ಸಮುದಾಯವನ್ನು ಬೂರ್ಜ್ವ ವ್ಯವಸ್ಥೆಯ ವಿರುದ್ಧ ಸಂಘಟನಾತ್ಮಕ ಹೋರಾಟಕ್ಕೆ ಸಜ್ಜುಗೊಳಿಸುವುದು, ಎರಡನೆಯದು ಶೋಷಿತರ ಕ್ರಾಂತಿಯ ಪ್ರಾಬಲ್ಯ ಮತ್ತು ಪರಿಣಾಮವನ್ನು ಕಟ್ಟಿಕೊಡುವುದು. ಮೂರನೆಯದು ಕ್ರಾಂತಿಯ ಸಫಲತೆ ಹಾಗೂ ವಿಫಲತೆಯನ್ನು ಅನಾವರಣಗೊಳಿಸುವುದು. ಒಟ್ಟಾರೆ ಇವರ ಹೋರಾಟದ ಹಾಡುಗಳು ದಲಿತ ಚಳುವಳಿಯನ್ನು ಕಟ್ಟುವಲ್ಲಿ ಹಾಗೂ ಅವರ ಪರಿಣಾಮವನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿವೆ.

ರಾಜಕೀಯದ ವಾಸ್ತವತೆಯ ಚಿತ್ರಣ:-

ಸಿದ್ಧಲಿಂಗಯ್ಯನವರು ತಮ್ಮ ಕಾವ್ಯಗಳಲ್ಲಿ ಅಂದಿನ ಕಾಜಕೀಯದ ಸ್ಥಿತ್ಯಂತರಗಳನ್ನು ಅದರ ಆಷಾಢಭೂತಿತನವನ್ನು ಚಿತ್ರಿಸಿದ್ದಾರೆ. ಒಂದು ಜನಾಂಗವನ್ನು ಎರಡು ರೀತಿಗಳಲ್ಲಿ ಕಟ್ಟಲು ಸಾಧ್ಯ. ಆಧುನಿಕ ಸನ್ನಿವೇಶದಲ್ಲಿ ಎಲ್ಲ ಬಗೆಯ ಸಮಷ್ಟಿ ವ್ಯಕ್ತಿತ್ವಗಳು ರಾಜಕೀಯದ ಸ್ಪರ್ಶತೆಯನ್ನು ಪಡದೇ ಇರುತ್ತದೆ. ಒಂದು ರಾಜಕೀಯದ ಸಂಕಲ್ಪದ ಮೂಲಕ, ಎರಡನೆಯದು ಸಾಹಿತ್ಯದ ಪ್ರತಿಭಾ ಸಂಕಲ್ಪದ ಮೂಲಕ. ಇವೆರಡೂ ಒಂದರೊಳಗೊಂದು ಹರಿಯುತ್ತವೆ ಎನ್ನುವುದು ಸತ್ಯ. ರಾಜಕೀಯ ಸಂಕಲ್ಪದ ಮೂಲಕ ನಿರ್ಮಾಣವಾದ ಜನಾಂಗ ತನಗೆ ಅಗತ್ಯವಿರುವ ಸಾಂಸ್ಕೃತಿಕ ರೂಪಗಳನ್ನು ಸೃಷ್ಟಿಸಿಕೊಳ್ಳುತ್ತವೆ ಹಾಗೆ ಸಾಹಿತ್ಯ ಸಂಕಲ್ಪಕೂಡ ತನಗೆ ಸಾಧ್ಯವಿರುವ ರಾಜಕೀಯ ಕ್ರಿಯೆಯ ಮಾದರಿಗಳನ್ನು ಸೃಷ್ಟಿಸಿಕೊಳ್ಳುತ್ತವೆ. ಈ ತತ್ವದ ಹಿನ್ನೆಲೆಯಲ್ಲಿ ಸಿದ್ಧಲಿಂಗಯ್ಯನವರ ಕಾವ್ಯದ ರೂಪುರೇಷೆಗಳು ಇನ್ನಷ್ಟು ಉಜ್ವಲವಾಗುತ್ತವೆ. ಆಧುನಿಕ ಭಾರತದ ದಲಿತಾನುಭವಕ್ಕೂ ಭಿನ್ನವಾದ ಸಾಮಾಜಿಕ ಹಾಗೂ ರಾಜಕೀಯ ವಾತಾವರಣವು ಏರ್ಪಟ್ಟ ಮೇಲೆ, ವಸಾಹತುಶಾಹಿ ಜಗತ್ತಿನ ಅನುಭವ ಸೇರಿಕೊಂಡ ನಂತರ ದಲಿತ ಸಂವೇದನೆಗೆ ವಿಶೇಷವಾದ ವೈಚಾರಿಕವಾದ ಭಾಷಿಕ ವಿನ್ಯಾಸ ಸಾಧ್ಯವಾದದ್ದು ಚಾರಿತ್ರಿಕವಾದದ್ದು ಲೌಕಿಕವಾದದ್ದು ಭಾಷಿಕ ಸ್ವಾತಂತ್ರ್ಯ, ಆಕಸ್ಮಿಕವಾಗಿ ಎಂಬಂತೆ ದಲಿತರಿಗೆ ಸಾಧ್ಯವಾದದ್ದು ಒಂದು ದೊಡ್ಡ ವಿಜಯ. ಹಾಗಾಗಿ ದಲಿತ ಲೇಖಕರ ಭಾಷಾ ಮೊನಚಿಗೆ ಸದಾ ದಂಗೆಯ ದಾಹ ವೈಚಾರಿಕ ಜಾಗೃತಿಗೆ ಅದರ ಮೂಲಕ ತೆರೆದುಕೋಳ್ಳುವ ರಾಜಕೀಯ ಮತ್ತು ಆರ್ಥಿಕ ಪಲ್ಲಟಗಳಿಗೆ ಮುಖಾಮುಖಿಯಾಗುವ ಕಾವ್ಯ ಸಮಕಾಲೀನ ಸಂಕಲನವನ್ನು ಒಂದು ಕೈ ಹೆಚ್ಚಾಗಿ ಧ್ವನಿಸುವುದು ಸ್ವಾಭಾವಿಕ. ಆ ಬಗೆಯ ಸಂಕಟ, ಅಪಮಾನ, ಅನ್ಯಾಯದ ಪರಮ ಪರಾಕ್ರಮದ ವಿಚಾರವನ್ನೆಲ್ಲ ಸದ್ಯದ ಎಚ್ಚರಲ್ಲಿ ನಿರೂಪಿಸುವುದು ಇನ್ನೂ ದ್ವಿಗುಣವಾದ ಜವಾಬ್ದಾರಿ.

ಎಪ್ಪತ್ತರದಶಕದ ರಾಜಕಾರಣ ಮತ್ತು ಸಾಹಿತ್ಯದ ನಡುವಿನ ಪರಸ್ಪರ ಸಂಬಂಧ ಹೆಚ್ಚು ವಿಶಿಷ್ಟವಾದದು. ಸಮಕಾಲೀನ ರಾಜಕೀಯ ವ್ಯವಸ್ಥೆಯೊಳಗಿನ ವಾಸ್ತವತೆಯನ್ನು ಕೂಡ ಈ ಮೇಲಿನ ಕವಿತೆ ಬಿಂಬಿಸುತ್ತದೆ. ಸಾಹಿತಿಗಳು ಸಾಮಾಜಿಕ ಪರಿಸರದಲ್ಲಿನ ಮುಖ್ಯ ವಿರೋಧಿ ಮೌಲ್ಯಗಳನ್ನು ಸೃಜನಶೀಲ ಬರಹದ [ಸಾಹಿತ್ಯ] ಮೂಲಕ ದಾಖಲಿಸಿ ಅದನ್ನು ಪ್ರತಿಭಟಿಸುವ ಹಾಗೆಯೇ ರಾಜಕೀಯ ಸಂದರ್ಭದಲ್ಲಿನ ಪ್ರತಿಗಾಮಿತನವನ್ನು ಹೊರಹಾಕುವ ಮತ್ತು ವಿರೋಧಿಸುವ ಪ್ರವೃತ್ತಿಯನ್ನು ಆರಂಭಿಸಿದರು. ಒಂದು ಜನಾಂಗ ಸಾಮಾಜಿಕ ಅಂತರದಲ್ಲಿ ಸಿಲುಕಿದಾಗ ರಾಜಕಾರಣಿಗಳು ಅದರಲ್ಲಿ ನಿರ್ವಹಿಸುವ ಪಾತ್ರವನ್ನು ಈ ಕವಿತೆ ವಿವರಿಸುತ್ತದೆ.

ಕವಿ ಸಿದ್ಧಲಿಂಗಯ್ಯನವರು ತಮ್ಮ ಕಾವ್ಯದ ಮುಖೇನ ಎಪ್ಪತ್ತರ ದಶಕದ ರಾಜಕೀಯ ಅವ್ಯವಸ್ಥೆಯನ್ನು ವಿಡಂಬನಾತ್ಮಕವಾಗಿ ಚರ್ಚೆಗೊಳಪಡಿಸಿದ್ದಾರೆ. ಜೊತೆಗೆ ರಾಜಕಾರಣಿಗಳ ಮುಖವಾಡತನದ ವ್ಯಕ್ತಿತ್ವವನ್ನು ಬಯಲುಗೊಳಿಸಿದ್ದಾರೆ. ದಲಿತರು, ಬಡವರು ಮತ್ತು

ಶೋಷಿತರನ್ನು ದಮನಗೊಳಿಸುತ್ತಲೆ ಬರುತ್ತಿರುವ ಸ್ವಾರ್ಥ ಕುರಿತು 'ಇಕ್ರಲಾ ವದೀರ್ಲಾ .....' ಎಂಬುದಾಗಿ ಬಡವರ ಪರವಾದ ರಾಜಕಾರಣಿಗಳ ತೋರಿಕೆಯ ನಡವಳಿಕೆಯನ್ನು ಕುರಿತು ಹೇಳುತ್ತಲೆ ಅವರ ಆಷಾಡಭೂತಿತನದ ವಿರುದ್ಧ ಕಿಡಿಕಾರುತ್ತಾರೆ. ರಾಜಕಾರಣವು ಜಾತಿಯ ನೆಲೆಯಲ್ಲಿ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿರುವ ಈ ದಿನಗಳಲ್ಲಿ ಎಚ್ಚರಿಕೆಯ ಮಾತುಗಳಾಗಿ ಈ ಕವಿತೆಯ ಸಾಲುಗಳು ಮೂಡಿಬಂದಿವೆ. ದಲಿತರ, ಅಸಹಾಯಕರ ಏಳಿಗೆ, ಅಭಿವೃದ್ಧಿ ಇತ್ಯಾದಿ ಹೆಸರಿನಲ್ಲಿ ಆಷಾಢಭೂತಿತನ ಅಥವಾ ಪೊಳ್ಳು ಭರವಸೆಯನ್ನು ನೀಡುವುದರ ಬಗೆಗಿನೆ ಸಾತ್ವಿಕ ಸಿಟ್ಟು ಇಲ್ಲಿ ವ್ಯಕ್ತವಾಗಿದೆ. ಇಬ್ಬಂದಿತನದ ರಾಜಕಾರಣಿಗಳನ್ನು ಜನಸಾಮಾನ್ಯರ ಸಮ್ಮುಖದಲ್ಲಿ, ಸಾರ್ವಜನಿಕವಾಗಿ ವಿಚಾರಣೆಗೆ ಒಳಪಡಿಸಿದರೆ ಅಥವಾ ಅವರ ನಿಜವಾದ ವ್ಯಕ್ತಿತ್ವವನ್ನು ಬಯಲುಗೊಳಿಸಿದರೆ ಅವರ ಗೋಮುಖ ವ್ಯಾಘ್ರತನ ಬಯಲಾಗುತ್ತದೆ ಎಂಬುದು ಈ ಕವಿತೆಯ ನಿಲುವು. ದಲಿತ ಸಾಹಿತ್ಯ ಚಳುವಳಿಯ ಒಟ್ಟು ಆಶಯ ಮತ್ತು ಧೋರಣೆಗಳಲ್ಲಿ ಜನವಿರೋಧಿ ರಾಜಕಾರಣದ ವಿರುದ್ಧ ಪ್ರತಿಭಟನೆಯ ಅಸ್ತ್ರವನ್ನು ಝುಳಪಿಸುವುದು ಒಂದು ಉದ್ದೇಶವಾಗಿದೆ. ಆಮೂಲಕ ದಲಿತರು ಹೋರಾಟದ ತರಂಗವನ್ನು ಸೃಷ್ಟಿಸಲು ಸಾಧ್ಯವಾಯಿತು, ಮೂಲ ಪ್ರೇರಣೆಯಾಯಿತು. ದಲಿತರ ಪರಿಚಯ ಭಾಷೆಯಲ್ಲೆ ಶಬ್ದಗಳು ಕಿವಿಗೆ ರಾಚುವಂತೆ ಈ ಕವಿತೆ ಮೂಡಿಬಂದಿದೆ. 'ಒಂದು ಮೂಳೆಯ ಹಾಡು', 'ಒಂದು ಪದ' ಕವಿತೆಗಳಲ್ಲಿ ಕಂಡುಬರುವ ಸಿಟ್ಟು ಸಿದ್ಧಲಿಂಗಯ್ಯನವರಿಗಿರುವ ವೈಯಕ್ತಿಕ ಆಕ್ರೋಶವಲ್ಲ. ಅಂದರೆ ವ್ಯಷ್ಟಿ ಸಮಸ್ಯೆಯ ಬಗ್ಗೆ ಈ ಶತಮಾನದಲ್ಲಿ ಚಿಂತನೆ ನಡೆದಿದ್ದು ಕಡಿಮೆ. ಬದಲಾಗಿ ಸಮಷ್ಟಿಯ ಬಗ್ಗೆ ಸಾವಿರಾರು ವರ್ಷ ಅಸಮಾನತೆಯ ಕೂಪದಲ್ಲೆ ಮುಳುಗಿರುವ ಸಮುದಾಯದ ಪ್ರಕ್ರಿಯೆಯಾಗಿ ಮೂಡಿಬಂದರೆ ಕಾವ್ಯದೊಳಗಿನ ಆಕ್ರೋಶ ಪ್ರವೇಶಿದಂತೆಲ್ಲಾ ನೋವು ಮಡುಗಟ್ಟಿ ನಿಂತಿರುವುದು ಗೋಚರಿಸುತ್ತದೆ. ಸಿದ್ಧಲಿಂಗಯ್ಯನವರ ಸಂವೇದನೆಯಲ್ಲಿ ಕೇವಲ ರೊಚ್ಚು ಆವೇಶಗಳೇ ಅಲ್ಲದೆ ಅದಕ್ಕೆ ಕಾರಣವಾದ ಸ್ಥಿತಿಯ ಸ್ವರೂಪವೂ ಅಡಗಿದೆ. ಇದರಿಂದಾಗಿ ಆಂತರಿಕ ಸಂವೇದನೆಗೆ ಹೆಚ್ಚು ಒತ್ತುಕೊಟ್ಟಿದ್ದಾರೆ. ಮೊದಲಿಗೆ ಶೋಷಿತರ ಅಪಮಾನ ನೋವು, ಅವರ ಹೀನಸ್ಥಿತಿಗಳ ಬಗ್ಗೆ ಹೇಳಿ ಅನಂತರ ಈ ಸ್ಥಿತಿಗೆ ಕಾರಣರಾದವರ ಬಗ್ಗೆ ಸಿಟ್ಟಿನಿಂದ ಅಬ್ಬರದ ಧ್ವನಿಯಿಂದ 'ಇಕ್ರಲಾ ವದಿರ್ಲಾ' ಎಂದು ಹೇಳುತ್ತಾರೆಯೆ ವಿನಃ ಪ್ರಾರಂಭಕ್ಕೆ ಸಿಡಿಮಿಡಿಗೊಂಡು ಆಕ್ರೋಶವ್ಯಕ್ತಪಡಿಸಿಲ್ಲ. ಸಿಟ್ಟಿಗೆ ಕಾರಣವನ್ನು ಹೇಳುತ್ತಾ ಆಸಿಟ್ಟಿನ ಹಕ್ಕನ್ನು ಸಮರ್ಥಿಸಿಕೊಳ್ಳುವಲ್ಲಿ ಸಿದ್ಧಲಿಂಗಯ್ಯನವರಿಗೆ ದಲಿತ ಪ್ರಜ್ಞೆ ಮತ್ತು ಭಾಷೆ ಎರಡೂ ಕೂಡ ಸಂವೇದನಾ ರೂಪದಲ್ಲಿ ಮೇಳೈಸಿವೆ.

ಅಂದಿನ ಪ್ರಧಾನಿಯಾಗಿದ್ದ ದಿವಂಗತ ಇಂದಿರಾಗಾಂಧಿಯವರನ್ನು ಕವಿ 'ಅಡುಗೊಲಜ್ಜಿ' ಗೆ ಸಮೀಕರಿಸಿ ಚಿತ್ರಿಸಿದ್ದಾರೆ. ದಲಿತಸಾಹಿತ್ಯ ಚಳುವಳಿಯ ಒಟ್ಟು ಆಶಯ ಮತ್ತು ಧೋರಣೆಗಳಲ್ಲಿ ಜನವಿರೋಧಿ ರಾಜಕಾರಣದ ವಿರುದ್ಧ ಪ್ರತಿಭಟನೆಯ ಅಸ್ತ್ರವನ್ನು ಝುಳಪಿಸುವುದೂ ಒಂದಾಗಿದೆ.

ಇದರಿಂದಾಗಿ ರಾಜಕಾರಣದ ವಲಯದಲ್ಲಿ ಒಂದು ಬಗೆಯ ಆತಂಕಕಾರಿ ವಾತಾವರಣ ಸೃಷ್ಟಿಯಾದದ್ದು ವಾಸ್ತವಸಂಗತಿ ಅಂದಿನ ಸರ್ವಾಧಿಕಾರಿ ಕಾಂಗ್ರೆಸ್ ಸರ್ಕಾರದ ಆಡಳಿತ ವ್ಯವಸ್ಥೆಯೊಳಗಿದ್ದ ರಾಜಕಾರಣಿಗಳ ಜೀತಗಾರಿಕೆಯನ್ನು, ಪ್ರಜಾವಿರೋಧಿ ಸರ್ಕಾರದ ಎಲ್ಲ ಅವಿವೇಕಿಗಳಿಗೆ ಬೆಂಗಾವಲಾಗಿ ನಿಂತಿದ್ದು ಅವರ ನಡವಳಿಕೆಯನ್ನು 'ಅಡುಗೊಲಜ್ಜಿ' ಕವಿತೆಯ ಮೂಲಕ ವ್ಯಕ್ತಪಡಿಸಿದ್ದಾರೆ. ಎಪ್ಪತ್ತರ ದಶಕದ ಆಡಳಿತ ಸರ್ಕಾರದ ರಾಜಕಾರಣದ ವ್ಯಂಗ್ಯ ವಿಡಂಬನೆಯನ್ನು ಈ ಕವಿತೆ ತಿಳಿಸುತ್ತದೆ.

"ಅಪರೂಪದ ಕಾರೋಂದು ಹಿಮಾಲಯದಿಂದ
ದಬಕ್ಕನೆ ಕೈಳೀಕ್ ಬಿದ್ದು ಇತ್ ಕಡೀಕ್ ಬತ್ತಾ ಅದೆ
ಅದರ್ವಳಗೆ ಅಡುಗೊಲಜ್ಜಿ ಕುಂತವ್ಳೆ ಅರೀದ್ದುಡುಗ ಅದನ್ನೋಡಸ್ತದೆ
ಕಚ್ಚೆಬೊಜ್ಜು ಟೋಪಿಯೋರು ಅದರಿಂದ ಜೈಕಾರಕಾಕ ಹಾಕ್ಕಂಡ್....."[೨೮]

ಹೀಗೆ ಕವಿತೆ ಸಾಗುತ್ತದೆ. ಭಾರತದಂತಹ ಶೇಕಡ ಎಪ್ಪತ್ತರಷ್ಟು ರೈತರು, ಬಡವರು ತುಂಬಿರುವಂತಹ ದೇಶದಲ್ಲಿ ಜನಸಾಮಾನ್ಯರ ನೋವಿಗೆ, ಬದುಕಿನ ಸಮಸ್ಯೆಗಳಿಗೆ ನೇರವಾಗಿ ಸ್ಪಂದಿಸುವ ರಾಜಕಾರಣ ದುರ್ಲಭವೆ ಸರಿ. ಇಲ್ಲಿನ ರಾಜಕಾರಣಿಗಳಿಗೆ ಸಾಮಾಜಿಕ ಸಮಸ್ಯೆಗಳಿಗೆ ಬದಲಾಗಿ, ಅವರ ಅಧಿಕಾರದ ಗದ್ದುಗೆಯನ್ನು ಭದ್ರಪಡಿಸಿಕೊಳ್ಳುವುದು ಅತಿ ಮುಖ್ಯವಾಗಿದೆ. ಅಧಿಕಾರದ ದುರಾಸೆಯಿಂದ ಒಬ್ಬರನೊಬ್ಬರು ತುಳಿಯುವ ಕುತಂತ್ರದ ರಾಜಕಾರಣ ಇಲ್ಲಿಯದು. ರಾಜಕಾರಣಿಗಳ ಡೋಂಗಿತನ, ವಿತಂಡವಾದ ಮತ್ತು ಸ್ವಾರ್ಥಸಾಧನೆಗಾಗಿ ವ್ಯಕ್ತಿತ್ವವನ್ನೆ ಮರೆತು ಬಿಡುವ ಸಣ್ಣತನವನ್ನು ಈ ಕವಿತೆ ಬಿಂಬಿಸುತ್ತದೆ. ಬಡವರನ್ನು ಉದ್ಧಾರ ಮಾಡುತ್ತೇವೆಂದು ಹೇಳುತ್ತಲೇ ಬಡವರ ಓಟಿನ ಫಲದಿಂದ ಅಧಿಕಾರಕ್ಕೆ ಬಂದ ರಾಜಕಾರಣಿಗಳು ಬಡವರನ್ನೇ ಶೋಷಿಸುತ್ತಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ವಿಪರ್ಯಾಸವಾಗಿದೆ. ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಎಂಬ ಪ್ರಜಾಪ್ರಭುತ್ವದ ಜನಪರ ಮೌಲ್ಯ ಪ್ರಸ್ತುತ ಮಣ್ಣು ಪಾಲಾಗಿ ಕೆಲವರಿಂದ, ಕೆಲವರಿಗಾಗಿ, ಕೆಲವರಿಗೋಸ್ಕರ ಎಂಬ ಸೀಮಿತ ಅರ್ಥಪಂಕ್ತಿಕೆಯನ್ನು ಪಡೆದುಕೊಂಡಿದೆ. ಬಹುಸಂಖ್ಯಾತರ ಬಡವರ ಬದುಕನ್ನು ರಾಜಕೀಯ ವ್ಯಸಪ್ಥೆ ಹೇಗೆ ಕಬಳಿಸುತ್ತದೆ ಎಂಬುದು ಇಲ್ಲಿ ತಿಳಿಯುತ್ತದೆ.

ಬ್ರಿಟಿಷರ ವಸಾಹತುಶಾಯಿ ವ್ಯವಸ್ಥೆಯ ವಿರುದ್ಧ ಹೋರಾಡಿ ಪಡೆದ ಸ್ವಾತಂತ್ರ್ಯ ಹೇಗೆ ತನ್ನೆಲ್ಲ ಧ್ಯೇಯೋದ್ದೇಶವನ್ನು ಕಳೆದುಕೊಂಡು ಸ್ವಾತಂತ್ರ್ಯ ಎಂಬ ಪದಕ್ಕೆ ಕಳಂಕ ಬರುವ ಹಾಗೆ ಇದೆ ಎಂಬುದನ್ನು 'ನಲವತ್ತೇಳರ ಸ್ವಾತಂತ್ರ್ಯ' ಎಂಬ ಕವಿತೆಯು ಮಾರ್ಮಿಕವಾಗಿ ಚಿತ್ರಿಸುತ್ತದೆ. ಭಾರತೀಯ ಸಂದರ್ಭದಲ್ಲಿ ಸ್ವಾತಂತ್ರ್ಯವೆಂಬುದು ಕೆಲವೇ ಮಂದಿ ಉಳ್ಳವರ ಸ್ವತ್ತಾಗಿ

ಪರಿಣಮಿಸಿರುವುದನ್ನೂ ಬ್ರಿಟಿಷರಿಂದ ಪಡೆದ ಸ್ವಾತಂತ್ರ್ಯ ಏನೆಲ್ಲ ಕರಾಳತೆಯನ್ನು ಪಡೆದುಕೊಂಡಿದೆ. ಎಂಬುದನ್ನು ಮಾರ್ಕ್ಸ್‌ವಾದಿ ಹಿನ್ನಲೆಯಲ್ಲಿ ವಿಮರ್ಶಾತ್ಮಕವಾಗಿ ಚಿತ್ರಿಸಿದೆ.

"ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ
ಟಾಟಾ ಬಿರ್ಲ ಜೋಬಿಗೆ ಬಂತು
ಜನಗಳ ತಿನ್ನುವ ಬಾಯಿಗೆ ಬಂತು

ಪೋಲೀಸರ ಬೂಟಿಗೆ ಬಂತು
ಮಾಲೀಕರ ಚಾಟಿಗೆ ಬಂತು
ಬಂದೂಕದ ಗುಂಡಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ"೨೯

ಹಲವರ ಪರಿಶ್ರಮದ ಫಲವನ್ನು ಕೆಲವರು ಉಂಡು ಬದುಕುತ್ತಿದ್ದಾರೆ ಎಂಬುದು ಭಾರತದ ಸಂದರ್ಭದಲ್ಲಿ ಚಾರಿತ್ರಿಕ ಸತ್ಯ. ಜನಸಾಮಾನ್ಯರು ಪ್ರಾಣತೆತ್ತು ಹೋರಾಡಿ ಗಳಿಸಿ ಕೊಟ್ಟ ಸ್ವಾತಂತ್ರ್ಯ ಇವತ್ತು ಅವರ ಸಮಸ್ಯೆಗಳಿಗೆ ಸ್ಪಂದಿಸದೆ ಇರುವುದರ ಬಗ್ಗೆ ಕವಿಗೆ ನೋವಿದೆ. ಸ್ವಾತಂತ್ರ್ಯದ ನಂತರ ಅಧಿಕಾರದ ಚುಕ್ಕಾಣಿ ಹಿಡಿದ ಯಾರೊಬ್ಬರು ಕೂಡ ಬಡವರ ನಿಟ್ಟುಸಿರನ್ನು ಶಮನಗೊಳಿಸಿಲ್ಲ. ಬದಲಾಗಿ ಅವರನ್ನು ಮತ್ತಷ್ಟು ಶೋಷಿಸುತ್ತಲೇ ಬರುತ್ತಿದ್ದಾರೆ. ೧೯೪೭ ರ ಸ್ವಾತಂತ್ರ್ಯ ಯಾರಿಗೆ ಬಂದಿದೆ ಎಂಬುದನ್ನು ಮೇಲಿನ ಕವಿತೆ ತನಗೆ ತಾನೆ ಪ್ರಶ್ನಿಸಿಕೊಳ್ಳುತ್ತಲೇ ಅದಕ್ಕೆ ಉತ್ತರವನ್ನು ವಸ್ತುನಿಷ್ಠವಾಗಿ ಕಂಡುಕೊಂಡಿದೆ. ಬಡವರ ಪಾಲಿಗೆ ಸ್ವಾತಂತ್ರ್ಯವೆನ್ನುವುದು ಪರೀಚಿಕೆಯಾಗಿದ್ದು ಅವರ ಬದುಕಿನಲ್ಲಿ ಆಶಾಕಿರಣವನ್ನು ಮೂಡಿಸಿಲ್ಲ ಎಂಬುದನ್ನು ಕವಿತೆ ವಿವರಿಸುತ್ತದೆ. ದಲಿತ ಚಳುವಳಿಯ ಸಂದರ್ಭದಲ್ಲಿ ಯುವಕರ, ಸಂಘಟಕರ ಬಾಯಿಯಲ್ಲಿ ಈ ಕವಿತೆ ನಲಿದಾಡಿದ್ದು ಚಳುವಳಿಯನ್ನು ಮತ್ತಷ್ಟು ತೀವ್ರಗೊಳಿಸುವಲ್ಲಿ ಯಶಸ್ವಿಯಾಗಿದೆ.

ಈ ದೇಶವನ್ನು ರಾಜಕಾರಣಿಗಳು ಅಧಿಕಾರಿಗಳೆಂಬ ವಿಷಸರ್ಪಗಳು ಕುಕ್ಕಿ ತಿನ್ನುತ್ತಿವೆ. ಬಡಜನರನ್ನು ಕೊಂದವರೆ ಅಧಿಕಾರದ ಗದ್ದುಗೆಯೇರಿ ಮೆರೆಯುತ್ತಿದ್ದಾರೆ. ಜನಸಮಾನ್ಯರೆ ಮೇಲಿನ ಕೊಲೆಸುಲಿಗೆಗಳು ಸಾಮಾನ್ಯ ಸಂಗತಿಗಳಾಗಿವೆ, ಶೋಷಕರ ಕಬಂಧಬಾಹುಗಳಿಗೆ ಸಿಲುಕಿ ನಲುಗಿ ಹೋಗಿರುವ ಇಡೀ ದೇಶದ ವಾಸ್ತವ ಭೀಕರತೆಯನ್ನು ಹಲವು ಕವಿತೆಗಳಲ್ಲಿ ಹೇಳಿದ್ದಾರೆ. ರಾಜಕೀಯ ವ್ಯವಸ್ಥೆ ಉಂಟುಮಾಡಿರುವ ಸಂದಿಗ್ದವಾತಾವರಣದಿಂದಾಗಿ ಇಡೀ ಸಾಮಾಜಿಕ ಬದುಕು ತನ್ನೆಲ್ಲ

ಸಹಜತೆ ಕಳೆದುಕೊಂಡಿರುವುದನ್ನು 'ಸಂಪಿಗೆಯ ಮರದಲ್ಲಿ', 'ಶಬ್ಧ' ಕವಿತೆಗಳು ಧ್ವನಿಪೂರ್ಣವಾಗಿ ಪ್ರತೀಮಿಕರಿಸುತ್ತದೆ. ಮನುಷ್ಯ ಜೀವನದ ಎಲ್ಲಾ ಸ್ತರಗಳನ್ನು ಆವರಿಸಿರುವ ದ್ವಂದ್ವ ತಾಕಲಾಟದ ನೈಜ ಚಿತ್ರಣವನ್ನು ಈ ಕವಿತೆಗಳು ಕಟ್ಟಿಕೊಡುತ್ತವೆ. ಪ್ರಸ್ತುತ ನಾಗರೀಕ ವಲಯದಲ್ಲಿ ಮಾನವೀಯ ಮೌಲ್ಯಗಳು ಮರೆಯಾಗುತ್ತಿರುವುದರ ಬಗ್ಗೆ ಕವಿತೆಗಳು ವ್ಯಂಗ್ಯವನ್ನು ಮಾಡುವಂತೆ ಬಾಸವಾಗಿತ್ತದೆ. ಸಿದ್ಧಲಿಂಗಯ್ಯನವರು ರಾಜಕಾರಣದ ಒಳಹೊರಗುಗಳನ್ನು ಸೂಕ್ಷ್ಮವಾಗಿಯೇ ಅಧ್ಯೆಸಿಕೊಂಡವರು. ರಾಜಕೀಯ ಪ್ರಜ್ಞೆಯ ಹಿನ್ನಲೆಯಲ್ಲಿ ವ್ಯಕ್ತಗೊಂಡಿರುವ ಕವಿತೆಗಳು ಸಿದ್ಧಲಿಂಗಯ್ಯನವರು ವಿಧಾನಪರಷತ್ ಸದಸ್ಯರಾಗಿದ್ದಾಗ ತಾವು ಕಂಡಂತಹ ರಾಜಕಾರಣಿಗಳ ತೆರೆಮರೆಯ ವ್ಯಕ್ತಿತ್ವವನ್ನು ಬಣ್ಣಿಸುತ್ತವೆ. 'ದಶಾವತಾರ' ಎಂಬ ಕವಿತೆ ರಾಜಕಾರಣಗಳ ಅವತಾರಗಳನ್ನು ಬಯಲು ಮಾಡುವಂತಹ ಕವಿತೆಯಾಗಿದೆ.

ಸಿದ್ಧಲಿಂಗಯ್ಯನವರ ಕವಿತೆಗಳಲ್ಲಿ ಪ್ರಕೃತಿ ಮತ್ತು ಪ್ರೇಮ:-

ಮೊದಲೆರಡು ಕವನಸಂಕಲನಗಳಲ್ಲಿ ಕ್ರಾಂತಿಯ ಆರ್ಭಟವೇ ಎದ್ದು ಕಾಣುವಂತದ್ದು 'ಕಪ್ಪುಕಾಡಿನಹಾಡು', 'ಮೆರವಣಿಗೆ' ಕವಸಂಕಲನಗಳಲ್ಲಿ ಪ್ರೀತಿ, ಪ್ರೇಮದ ಮೂಲಕ ಕ್ರಾಂತಿಯನ್ನು ಉರಿದುಂಬಿಸುವಂತಹ ಕವಿತೆಗಳನ್ನು ರಚಿಸಿದ್ದಾರೆ. ಶೋಷಣೆ, ಅಪಮಾನ, ಹಸಿವು, ಬಡತನ, ಅಸ್ಪೃಶ್ಯತೆ ಹಾಗೂ ಹೋರಾಟಗಳು ಕವಿ ಸಿದ್ದಲಿಂಗಯ್ಯನವರನ್ನು ಎಷ್ಟರಮಟ್ಟಿಗೆ ಕಾಡಿವೆಯೋ ಹಾಗೆಯೇ ಸುತ್ತಲಿನ ಪ್ರಾಕೃತಿಕ ಸೌಂದರ್ಯ, ಪ್ರೀತಿ ಪ್ರೇಮಗಳಲ್ಲಿನ ಜೀವನ ಮೌಲ್ಯಗಳೂ ಇವರನ್ನು ಆಳವಾಗಿ ಆಕರ್ಷಿಸಿವೆ. ಶೊಷಣೆಯ ನೋವುಂಡು ನೆಲಕಚ್ಚಿ ಹೋಗಿರುವ ದಲಿತನೊಬ್ಬನ ಎದೆಹಾಳದಲ್ಲಿ ಬತ್ತಲಾರದ ಜೀವನ ಪ್ರೀತಿ, ಸೌಂದರ್ಯ ಪ್ರಜ್ಞೆ ಹುದುಗಿರುತ್ತವೆ ಎಂಬುದಕ್ಕೆ ಪ್ರಕೃತಿ, ಪ್ರೀತಿ, ಪ್ರೇಮವನ್ನು ಕುರಿತ ಇವರ ಕವಿತೆಗಳು ಉದಾಹರಣೆಗಳಾಗಬಲ್ಲವು. ವಾಸ್ತವ ಬದುಕಿನ ನೆಲೆಯಲ್ಲಿಯೇ ನಿಂತು ಪ್ರಕೃತಿ ಪ್ರೇಮವನ್ನು ವ್ಯಾಖ್ಯಾನಿಸುವ, ಅವುಗಳೊಟ್ಟಿಗೆ ಬದುಕಿನ ಸಾಮರಸ್ಯವನ್ನು ಕಂಡುಕೊಳ್ಳುವ ಹಂಬಲವು ಇವರ ಕವಿತೆಗಳಲ್ಲಿದೆ. ತುಳಿಯುವ ಸಮಾಜದ ವಿರುದ್ಧ ಆಕ್ರೋಶದಿಂದ ಸಿಡಿಯುವ ಕವಿ, ಅದೇ ಸಂದರ್ಭದಲ್ಲಿ ಮಾನವೀಯ ಸಂವೇದಗಳಿಗಾಗಿ ಹಪಹಪಿಸುತ್ತಾರೆ.

ಜೀವನದಿದ್ದಕ್ಕೂ ಹತಾಶೆಯ ನೆರಳಲ್ಲಿ ಬದುಕುತ್ತಿರುವ ಶೋಷಿತನಿಗೆ ಸೂರ್ಯೋದಯ ಮತ್ತು ಸೂರ್ಯಾಸ್ತಗಳು ಗೋಚರಿಸುವ ಬಗೆ ವಿಶಿಷ್ಟವಾಗಿದೆ. 'ಸೂರ್ಯ' ಅಥವಾ 'ಬೆಳಗು' ಒಬ್ಬೊಬ್ಬ ಕವಿಗೆ ಒಂದೊಂದು ರೀತಿಯಲ್ಲಿ ಗೋಚರಿಸಿರುವುದು ಸಾಹಿತ್ಯ ಸೃಷ್ಟಿಯಲ್ಲಿ ಹೊಸದೇನಲ್ಲ. ಬೇಂದ್ರೆಯವರ 'ಬೆಳಗು' ಕವಿತೆಯಲ್ಲಿನ ಸೂರ್ಯೋದಯ ಪ್ರಕೃತಿಯ ಸೌಂದರ್ಯ ಸೊಬಗನ್ನು ಕಟ್ಟಿಕೊಟ್ಟರೆ, ಸಿದ್ದಲಿಂಗಯ್ಯನವರ 'ಪ್ರಕೃತಿ' ಕವಿತೆಯಲ್ಲಿನ ಸೂರ್ಯೋದಯ ದಲಿತರ ಬದುಕಿನ

ಭೀಕರತೆಯನ್ನು ಬಿಂಬಿಸುತ್ತದೆ. ನವೋದಯ, ನವ್ಯ ಕವಿಗಳಿಗೆ ಬೆಳಗು ಹೇಗೆ ಕಂಡಿದೆಯೋ ಅದಕ್ಕಿಂತ ಕವಿ ಸಿದ್ದಲಿಂಗಯ್ಯನವರು ದಲಿತ ಬದುಕಿನ ನೆಲೆಯಲ್ಲಿ ಸೂರ್ಯೋದಯವನ್ನು ನೋಡಿರುವ ಪರಿ ಭಿನ್ನವಾಗಿದೆ.

'ಸಂಕಷ್ಟಗಳ ಸೂರ್ಯ ದಿನದಿನವು ಮೂಡುವನು
ಮುಳುಗುವನು ವೇದನೆಯ ಹಬ್ಬದಲ್ಲಿ
ಕುದಿವ ನೀಲಿಯ ಕಡಲು ಏಳೆಡೆರಿಗ ಕಾಳಿಂಗ
ಹೆಪ್ಪುಗಟ್ಟಿದ ನೋವು ಮುಗಿಲಿನಲ್ಲಿ'[20]

ಶೋಷಿತರ ನೋವಿನ ನಿರಂತರತೆಯನ್ನು ಈ ಸಾಲುಗಳು ಕಟ್ಟಿಕೊಡುತ್ತವೆ. ಬೆಳಕು ನೀಡುವ ಸೂರ್ಯ ಕಷ್ಟಪರಂಪರೆಯ ಜೊತೆಯಲ್ಲೆ ತನ್ನ ಮೂಡು-ಮುಳುಗುಗಳನ್ನು ನಡೆಸುತ್ತಿದ್ದಾನೆ . ಬಾಲ್ಯದಿಂದಲೂ ಪ್ರಕೃತಿಯ ಸೊಬಗನ್ನು ಆಸ್ವಾದಿಸುತ್ತಲೇ ಬೆಳೆದಂತಹ ಕವಿಗೆ ಬೆಟ್ಟ, ಕಾಡು, ನದಿ, ಹಳ್ಳ-ಕೊಳ್ಳಗಳೆಂದರೆ ಎಲ್ಲಿಲ್ಲದ ಉತ್ಸಾಹ ಪ್ರಕೃತಿಯ ವೈಶಿಷ್ಟ್ಯಗಳನ್ನು ಅರ್ಥೈಸಿಕೊಳ್ಳುವಲ್ಲಿ ಕವಿಯ ಉತ್ಕಟನೆ ಕೆಲಸ ಮಾಡಿದೆ.

ಕೆಲವೊಮ್ಮೆ ಕಾವ್ಯ ಪರಂಪರೆಯೊಳಗಿನ ಕೆಲವು ಕೇಂದ್ರ ಪ್ರತೀಕಗಳು ಒಂದು ಐತಿಹಾಸಿಕ ಪಲ್ಲಟಗಳನ್ನು ತುಂಬ ಸೂಕ್ಷ್ಮವಾಗಿ ವಿವರಿಸುತ್ತವೆ. ಸಂಪ್ರದಾಯದ ಬಗ್ಗೆ ಸರಳ ಆದರೆ ತುಂಬ ತೀವ್ರವಾದ ಸಿಟ್ಟು ಇರುವಾತನಿಗೆ ಇರುವ ಸಮಸ್ಯೆಗಳನ್ನು ಸಿದ್ದಲಿಂಗಯ್ಯನವರ ಒಂದು ಪ್ರಮುಖ ಕವಿತೆಯಾದ 'ಸಾವಿರಾರುನದಿಗಳು' ವಿನಲ್ಲಿ ಬರುವ ನೀರಿನ ಪ್ರತಿಮೆಯಿಟ್ಟುಕೊಂಡು ಚರ್ಚಿಸಬಹುದು. ಈ ಕವಿತೆಯಲ್ಲಿನ ನೀರು ಸಾಮಾನ್ಯವಾದದ್ದಲ್ಲ ಅದು ಬೇಂದ್ರೆ ಮತ್ತು ಅಡಿಗರ ಕಾವ್ಯಪಾತ್ರದ ಮೂಲಕ ಹರಿದುಬಂದದ್ದು. ಬೇಂದ್ರೆಯವರ 'ಗಂಗಾವತರಣ', ಅಡಿಗರ 'ಭೂತ' ಮತ್ತು ಸಿದ್ಧಲಿಂಗಯ್ಯನವರ 'ಸಾವಿರಾರುನದಿಗಳು' ಕವಿತೆಗಳು ಪರಂಪರೆಯನ್ನು ಭಿನ್ನ ಭಿನ್ನ ನೆಲೆಯಲ್ಲಿ ವ್ಯಾಖ್ಯಾನ ಮಾಡುವ ಪ್ರಯತ್ನಗಳು. ಬೇಂದ್ರೆಯಲ್ಲಿ ಗಂಗೆ ಸಂಪ್ರದಾಯಶುದ್ಧ ಸತ್ಯದ ಪ್ರತೀಕ. ಗಂಗೆ ಎಂಬ ಪದ ಪರಂಪರೆಗೆ ಶುದ್ದೀಕರಣದ ಶಕ್ತಿ ಇದೆ ಎಂಬ ಗಾಢನಂಬಿಕೆ ಕವನದಲ್ಲಿನ ಲಯದ ಉತ್ಸಾಹಕ್ಕೂ ಕಾರಣವಗಿದೆ. ಪರಂಪರೆಯ ನೀರು ಎಷ್ಟೇ ಕೊಳೆತಿದ್ದರೂ ಹೊಸ ಚೈತನ್ಯ ಅದರೊಳಗಿನಿಂದಲೇ ಹುಟ್ಟಬಹುದು ಎಂಬ ನಂಬಿಕತೆಯೇ ಅಡಿಗರನ್ನು ಸಂಪ್ರದಯವಾದಿಯನ್ನಾಗಿ ಮಾಡಿದೆ. ಆದರೆ ಸಿದ್ದಲಿಂಗಯ್ಯನವರ ನದಿಗೆ ನೆನಪಿನ ಹಂಗಿಲ್ಲ. ನೀರಿಗೆ ನೆನಪಿನ ಹಂಗೇ ಇಲ್ಲ. ಅದು ಭವಿಷ್ಯದ ನದಿ. ಜನರ ಕ್ರಾಂತಿ ಚೈತನ್ಯ ಸಾವಿರಾರು ನದಿಗಳಾಗಿ ಭೋರ್ಗರೆದು ಮೊರೆಯುತ್ತದೆ ಎಂಬ ಶ್ರದ್ಧೆ ಇಲ್ಲೂ ಕೂಡ ಕವಿತೆಯ ಲಯಕ್ಕೆ ಉತ್ಸಾಹ ನೀಡಿದೆ. ಸಂಪ್ರದಾಯದ ಜತೆಗೆ ಸಂಕೀರ್ಣ ಸಂಬಂಧ ಇರುವಾತ ಅಲ್ಲಿಂದಲೇ ತನ್ನ ಪ್ರತಿಮೆಗಳನ್ನು ಪಡೆಯುತ್ತಾನೆ.

ತಮ್ಮ ಸುತ್ತಲ ಪ್ರಕೃತಿಯನ್ನು ದೈವಿಕ ನೆಲೆಯಲ್ಲಿ ಇಟ್ಟು ಗೌರವಿಸುವ ಹಾಗೂ ಅದನ್ನು ಜೋಪಾನ ಮಾಡುವ ಜನಪದರ ಮನಸ್ಥಿತಿಯ ಬಗೆಗೆ ಕವಿಯಲ್ಲಿ ಅಭಿಮಾನವಿದೆ. ನಾಗರಿಕ ಸಮಾಜ ಪ್ರಕೃತಿಯ ಮೇಲೆ ಎಸಗುತ್ತಿರುವ ಅದ್ಯಾಹತ ದೌರ್ಜನ್ಯವನ್ನು ಜೊತೆಜೊತೆಗೆ ಹೇಳುತ್ತಾ, ಪ್ರಕೃತಿಯ ಬಗೆಗೆ ರೂಢಿಸಿಕೊಂಡಿರುವ ದೈವಿಕ ಸ್ವರೂಪದ ಪ್ರಜ್ಞೆಯನ್ನು ನಿಸರ್ಗ ವಿರೋಧಿಗಳು ಮೈಗೂಡಿಸಿಕೊಳ್ಳಬೇಕೆಂಬುದನ್ನು ಹೇಳಿದ್ದಾರೆ.

ಒಟ್ಟಾರೆ ಇವರ ಕಾವ್ಯಗಳಲ್ಲಿ ಸೂರ್ಯ, ಚಂದ್ರ, ಭೂಮಿ, ನದಿ, ಕಡಲು, ಬೆಟ್ಟ, ಕಾಡು, ಬಂಡೆ, ಮರಗಿಡಬಳ್ಳಿ, ಹೂ, ಹಸಿರು, ಬಿಸಿಲು, ಬೆಳದಂಗಳು, ಕತ್ತಲು ಕಾರ್ಮೋಡ, ನಕ್ಷತ್ರ, ತಂಗಾಳಿ– ಇವೆಲ್ಲವು ಪ್ರಕೃತಿಯ ಸೊಬಗಿನೊಟ್ಟಿಗೆ ಮೇಳೈಸಿವೆ.

ಪ್ರೇಮದ ಬಗ್ಗೆ ಸಿದ್ದಲಿಂಗಯ್ಯನವರ ಕವಿತೆಗಳು ಭಿನ್ನವಾಗಿ ಮೂಡಿವೆ. ಪ್ರೇಮಾನುಹಾಗದ ಕವಿತೆಗಳ ವೇಳೆಯಲ್ಲಿ ಸಿದ್ದಲಿಂಗಯ್ಯನವರು ಬೇಂದ್ರೆಯವರ ಪ್ರೇಮಕವಿತೆಗಳಿಗಿಂತಲೂ ಭಾವುಕರಾಗಿ ದಲಿತಲೋಕದ ಭಾವುಕತೆಯನ್ನು, ಕೊಂಚ ಆಲಾಪನೆಯನ್ನು ವಿಸ್ತರಿಸಿಕೊಂಡು ಹೋಗುತ್ತಾರೆ. ಈ ಆಲಾಪದಲ್ಲಿ ತನ್ನ ಜನತೆಯನ್ನು ಸೇರಿಸಿಕೊಳ್ಳುತ್ತರೆ. ವ್ಯಕ್ತಿನಿಷ್ಠ ಪ್ರೇಮದ ಭಾವನೆಯನ್ನು ತನ್ನವರ ನೋವಿನ ದನಿಯಲ್ಲೇ ಬೆರೆಸಿಕೊಂಡು ಅದನ್ನು ಸಮಷ್ಟಿಯಾಗಿಸುವ ಗುಣವನ್ನು ಸಿದ್ದಲಿಂಗಯ್ಯನವರ ಕವಿತೆಗಳು ಹೊಂದಿವೆ. 'ಸುಟ್ಟಾವು ಬೆಳ್ಳಿಕಿರಣ', 'ರಾಣಿಯ ಪ್ರೇಮ', 'ದೋಣಿಯ ಹಾಡು', 'ನಿನ್ನ ಕಣ್ಣಿನ ಹಾಡು', 'ಕೋರಿಕೆ', 'ಕಪ್ಪುಕಾಡಿನಹಾಡು' ಮೊದಲಾದ ಹಾಡುಗಳು ಬೇಂದ್ರೆಯವರ ಹಾಡುಗಳಿಗಿಂತ ಭಿನ್ನವಾಗಿ ನಿಲ್ಲುತ್ತವೆ. ಪ್ರೇಮದ ಕಗ್ಗೊಲೆ, ಒಲವಿನ ಹಗೆ, ಪ್ರೀತಿಯ ಕ್ಷಾಮಗಳನ್ನು ಸಮುದಯದ ಸಾಕ್ಷಿ ಪ್ರಜ್ಞೆಯಲ್ಲಿ ಆಲಾಪಿಸುವ ಸಿದ್ದಲಿಂಗಯ್ಯನವರ ಕವಿತೆಗಳು ಸರಳ ಪದಗಳಂತೆ ಕಂಡರೂ ಅದಕ್ಕಿರುವ ಸಂವೇದನೆಯ ದುರಂತ ಪ್ರಜ್ಞೆ ಬೇಂದ್ರೆಯ ಪ್ರೇಮ ಕವಿತೆಗಳಿಗಿಲ್ಲ.

'ಪ್ರೀತಿಯ ಗಂಗೆ ಹರಿಯುತಿರಲಿ
ಅಂತರಂಗದ ಕಣಿವೆಯಲಿ
ಮೈತ್ರಿಯ ಮಲ್ಲಿಗೆ ಪರಿಮಳ ಬೀರಲಿ
ಎದೆಯಾಳದ ಹೂದೋಟದಲಿ"[೭೧]

ಇದು 'ಕಪ್ಪು ದೇವತೆಯ ಕಣ್ಗಾವಲು' ಕವಿತೆಯ ಮೂಲಕ ಪ್ರೀತಿ ಎಂಬುದು ಅಂತರ್ಗತವಾಗಿರಬೇಕೆಂಬುದನ್ನು ಸೂಚಿಸುತ್ತದೆ. 'ಸುಟ್ಟಾವು ಬೆಳ್ಳಿ ಕಿರಣ' ಕವಿತೆಯಲ್ಲಿ ಪ್ರಿಯತಮ ತನ್ನ ಪ್ರೇಯಸಿ ಬಗೆಗೆ ಇರಿಸಿಕೊಂಡಿರುವ ಪ್ರೀತಿ ಹಾಗೂ ಆಕೆಯನ್ನು ಜೋಪಾನವಾಗಿ ಕಾಯ್ದುಕೊಳ್ಳುವ ಕಳಕಳಿಮೂಡಿದೆ.

"ಆ ಬೆಟ್ಟದಲ್ಲಿ ಬೆಳದಿಂಗಳಲ್ಲಿ

ಸುಳಿದಾಡಬೇಡ ಗೆಳತಿ

ಚಲುವಾದ ನಿನ್ನ ಮಲ್ಲಿಗೆಯ ಮಯ್ಯ

ಸುಟ್ಟಾವು ಬೆಳ್ಳಿ ಕಿರಣ

ಇಳಿಜಾರಿನಲ್ಲಿ ಆ ಕಣಿವೆಯಲ್ಲಿ

ನೀ ಇಳಿಯಬೇಡ ಗೆಳತಿ

ತತ್ತರಿಸುವಂತೆ ಕಾಲಲ್ಲಿ ಕಮಲ

ಮುತ್ತುವವು ಮೊಲದ ಹಿಂಡು"[20]

ಪ್ರಿಯತಮ ತನ್ನ ಪ್ರೇಯಸಿಯ ಸೌಂದರ್ಯವನ್ನು ಬಣ್ಣಿಸುತ್ತಲೆ ಆಕೆಯನ್ನು ಕುರಿತು ಬೆಳದಿಂಗಳ ಬೆಳಕಿನಲ್ಲಿಯೂ ಸುಳಿದಾಡಬೇಡ, ಏಕೆಂದರೆ ಮಲ್ಲಿಗೆಯಂತ ನಿನ್ನ ಮೈಯನ್ನು ಬೆಳ್ಳಿ ಕಿರಣಗಳು ಸುಡಬಹುದು. ಕಮಲದಂತ ನಿನ್ನ ಪಾದಗಳನ್ನು ಮೊಲದ ಹಿಂಡು ಮುತ್ತಬಹುದು ಎಂಬ ಭಯ ಪ್ರಿಯಕರನಿಗೆ ಕಾಡಿದೆ.

ಸಿದ್ಧಲಿಂಗಯ್ಯನವರ ಪ್ರೇಮ ಕವಿತೆಗಳಲ್ಲಿ 'ನನ್ನವಳಿಗೆ' ಮತ್ತು 'ಮಸಣದ ಚಲುವಿಗೆ' ವಿಶಿಷ್ಟ ಮಾದರಿಯ ಕವಿತೆಗಳಾಗಿವೆ ಇವುಗಳ ಪರಿಕಲ್ಪನೆ ಹಾಗೂ ಆಶಯಗಳಲ್ಲಿ ಹೊಸತನವಿದ್ದು ಕವಿ, ಕ್ರಾಂತಿ ಮತ್ತು ಸ್ಮಶಾನವನ್ನು ಸುಂದರ ಹೆಣ್ಣಾಗಿ, ಪ್ರೇಯಸಿಯರನ್ನಾಗಿ ಪ್ರತಿಮಿಕರಿಸಿಕೊಂಡು ಚಿತ್ರಿಸಿದ್ದಾರೆ. ಕವಿ ತನ್ನ ಪ್ರೇಯಸಿಯಾದ ಕ್ರಾಂತಿ ಕನ್ಯೆಹೇಗೆಲ್ಲ ಅಲಂಕರಿಸಿ ರಮಿಸಲ್ಪಡುವನೆಂಬುದು ಈ ಕವಿತೆಗಳಲ್ಲಿ ಸ್ಪಷ್ಟವಾಗುತ್ತದೆ.

"ಕ್ರಾಂತಿ ಕನ್ಯೆ ಮೋಹಜನ್ಯೆ

ನಿನ್ನ ಮದುವೆ ಆಗುವೆ

ಕ್ರಾಂತಿ ಕಿಡಿಯ ಸಿಡಿಸುವಾಗ

ನಾನು ನಿನ್ನ ತಬ್ಬುವೆ"[22]

ಎಂಬುದಾಗಿ ಕವಿ, ಕ್ರಾಂತಿಕನ್ಯೆಯ ಬಗೆಗೆ ಇಟ್ಟುಕೊಂಡಿರುವ ವ್ಯಾಮೋಹವನ್ನು ಹಾಗೂ ಸಮಾಜ ಮುಖಿ ಆಶಯವುಳ್ಳ ಪ್ರೇಮದ ಮಹತ್ವಾಕಾಂಕ್ಷೆಯನ್ನು ಭಿನ್ನವಿಸಿದ್ದಾರೆ. ಈ ಕವಿತೆಯಲ್ಲಿ ಪ್ರೀತಿ, ಕ್ರಾಂತಿ ಹಾಗೂ ಸಮಾಜ ಬದಲಾವಣೆಯ ತೀರ್ವತೆಯನ್ನು ಕಾಣಬಹುದು. ಕವಿ ತನ್ನ ಪ್ರೇಯಸಿ ಕ್ರಾಂತಿ ಕನ್ಯೆಗೆ 'ಧರ್ಮಗುರುವ ಚರ್ಮಸುಲಿದು ಸೀರೆಕುಬಸ ಹೋಲಿಸುತ್ತೇನೆ; ಮೋಸಗಾರ ಕೊರಳ ಕಡಿದು ತಲೆಯ ಹಾರ ಹಾಕುತ್ತೇನೆ; ಶೋಷಕರ ರಕ್ತದಿಂದ ನಿನಗೆ ಸ್ನಾನ ಮಾಡಿಸಿ, ಹೆಪ್ಪುಗಟ್ಟಿದ ರಕ್ತದಿಂದ ನಿನ್ನ ಹಣೆಗೆ ಬೊಟ್ಟನಿಕ್ಕುತ್ತೇನೆ; ಕೊಬ್ಬಿದವರ ಕರುಳನು ಕಿತ್ತು ನಿನ್ನ

ಲತೆಗೆ ಹೂ ಮುಡಿಸುತ್ತೇನೆ ಎಂಬುದಾಗಿ ಭಾಷೆ ಕೊಡುತ್ತಾನೆ. ಇವರ ಬಂಡಾಯದಲ್ಲಿ ಪ್ರೇಮವೂ : ಪ್ರೇಮದಲ್ಲಿ ಬಂಡಾಯವೂ ಪರಸ್ಪರ ಮೇಳೈಸಿರುವುದನ್ನು ಈ ಕವಿತೆ ಸ್ಪಷ್ಟಪಡಿಸುತ್ತದೆ".

ಸ್ಮಶಾನದ ಮೌನ ವಾತಾವರಣದಲ್ಲಿ ತಮ್ಮ ಬಾಲ್ಯದ ದಿನಗಳನ್ನು ಕಳೆದ ಕವಿ ಸಿದ್ಧಲಿಂಗಯ್ಯನವರು ಅಲ್ಲಿನ ಪರಿಸರದಿಂದ ಆಕರ್ಷಿತರಾಗಿದ್ದಾರೆ. ಸ್ಮಶಾನವನ್ನು ಒಂದು ಸುಂದರ ಹೆಣ್ಣಾಗಿ ಕಲ್ಪಿಸಿಕೊಂಡ ಕವಿ ಆಕೆಯೊಟ್ಟಿಗೆ ಪ್ರಿಯತಮನಾಗಿ ಸಂವಾದಿಸುವ ಪರಿಯ ಹಿನ್ನೆಲೆಯಲ್ಲಿ ಪ್ರೀತಿಯ ಸೆಳೆತವಿದೆ. ಜೊತೆಗೆ ಆಕೆಯೊಟ್ಟಿಗಿನಪ್ರೇಮ ಕವಿಯೊಳಗಿನ ಕವಿತ್ವವನ್ನು ಮತ್ತಷ್ಟು ಉಜ್ವಲಗೊಳಿಸಿದೆ. ಎಂಬುದನ್ನು 'ಮಸಣದ ಚೆಲುವೆಗೆ' ಎಂಬ ಕವಿತೆ ವಿವರಿಸುತ್ತದೆ. 'ಕವನಗಳನ್ನು ನಾನು ಬರೆಯಲು ಆಶ್ರಯಿಸಿದೆ ನಿನ್ನ, ನಗೆ ಚಿಮ್ಮಿಸಿ ಬಾರೆನ್ನುತ ನೀನಪ್ಪಿದೆ ನನ್ನ' ಎಂದು ಪರಸ್ಪರ ಇಬ್ಬರು ಒಬ್ಬರನ್ನೊಬ್ಬರು ಆಶ್ರಯಿಸಿರುವ ಬಗೆಯನ್ನ ಬಣ್ಣಿಸಿದ್ದಾರೆ 'ಕೋರಿಕೆ' ಕವಿತೆ ವಿರಹಿಯೊಬ್ಬನ ನೋವನ್ನು ಚಿತ್ರಿಸುತ್ತದೆ.

ಹೀಗೆ ಪ್ರಕೃತಿ ಮತ್ತು ಪ್ರೇಮ ಸಿದ್ಧಲಿಂಗಯ್ಯನವರ ಜೀವನ ಮತ್ತು ಸಾಹಿತ್ಯದ ಅಸ್ತಿತ್ವಕ್ಕೆ ಕಾರಣವಾಗಿವೆ ಮತ್ತು ಪ್ರೇರಕ ಕೂಡ ಆಗಿವೆ. 'ಕಪ್ಪುಕಾಡಿನಹಾಡು' ಕವನಸಂಕಲನದಲ್ಲಿ

"ಗುಡಿಸಲಿನಲ್ಲಿ ಅರಳುವ ಗುಲಾಬಿ
ನಕ್ಷತ್ರ ನನ್ನ ಕವನ
ಕತ್ತಲೆಯಲ್ಲಿ ಕಾಣುವ ಬೆಳಕು
ಬಂಡಾಯದ ಈ ಕವನ
ಬದುಕು ಪ್ರೀತಿಸುವ ಬಡವರ ಮಗಳು
ನಿರಾಭರಣೆ ಕವನ
ಜನಗಳು ತಿನ್ನುವ ಅನ್ನದ ಅಗುಳು
ಜೀವನನ್ನ ಕವನ "[24]

'ಕಪ್ಪುಕಾಡಿನಹಾಡು' ಕವಿಯ ಆತ್ಮಕಥಾನಕ ಕವಿತೆಯಾಗಿದೆ. ಬಾಲ್ಯದ ದಿನಗಳಲ್ಲಿ ಕವಿ ಮಾಗಡಿಯ ಹೊಸಪೇಟೆಯಲ್ಲಿ ಕಂಡುಂಡ ಸಾಮಾಜಿಕ ಬದುಕಿನ ಅನುಭವಗಳನ್ನು ಇಲ್ಲಿ ಚಿತ್ರಿಸಿದ್ದಾರೆ ದೆವ್ವದ ಬಗೆಗೆ ಹಬ್ಬಿಸಿದ ಭಯ ಆಗಾಗ ದೇವರುಗಳ ಹೆಸರೆಳೆ ಕೇರಿಗೆ ಬಂದುಕಾಣಿಕೆ ಪಡೆದು ಕಾಣೆಯಾಗುತ್ತಿದ್ದ ಜುಂಜಪ್ಪ, ಕುರ್‌ಮಾಮಗಳು ಮಕ್ಕಳನ್ನು ಬಿಟ್ಟು ತಂದೆತಾಯಿ ಕೂಲಿಗೆ ಹೋದಾಗ ಮಕ್ಕಳು ಪಡುತ್ತಿದ್ದ ಕಷ್ಟ, ಕೂಲಿ ಆಳುಗಳ ಮೇಲೆ ಭೂಮಾಲಿಕರ ಆರ್ಭಟ ದಲಿತರನ್ನು ಮುಟ್ಟದೆ ಆಶೀರ್ವದಿಸುತ್ತಿದ್ದ ಧರ್ಮಗುರು, ಮಳೆಗಾಲದ ಚಿತ್ರಣ ಮೊದಲಾದವುಗಳು ಈ ಸಂಕಲನದ ವಸ್ತುವಾಗಿವೆ.

"ಸಂಚಕಾರಕಾಯಿತು ಸಂಚಕಾರ
ತೆರೆದರೂ ಮುಚ್ಚಿರುವ ಗುಡಿಹೋಟೆಲು
ಇದ್ದರೂ ಸಿಗಲಿಲ್ಲ ಕೊಳದ ನೀರು
ಅ ಒಡನಾಟದಲ್ಲಿ
ಧಣಿಯ ಕೊಟ್ಟಿಗೆಯಲ್ಲಿ ಹಬ್ಬದೂಟ

---------------ಸುಟ್ಟು ಹೋದವು ಎದೆಯ ಹೂವು"[25]

ಮೇಲಿನ ಕವಿತೆಯಲ್ಲಿ ಜಾತಿಯ ಪೀಡನೆಯಿಂದಾಗಿ ಇರುವ ಎಲ್ಲಾ ಸೌಲಭ್ಯಗಳು ಇಲ್ಲದಂತಾಗಿವೆ ದಲಿತರ ಪಾಲಿಗೆ. ದಲಿತ ಕವಿಗೆ ತನ್ನ ಜೀವನವೇ ಮೂಲದ್ರವ್ಯ, ಅದನ್ನು ಆಯ್ದುಕೊಂಡು ಅಭಿವ್ಯಕ್ತಿಸುವ ಹಕ್ಕು ಕವಿಗಿದೆ. ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ದಲಿತರನ್ನು ಅಸ್ಪೃಶ್ಯತೆಯ ಕಾರಣಕ್ಕಾಗಿ ಹೀನಾಯವಾಗಿ ನಡೆಸಿಕೊಳ್ಳುತ್ತಿರುವ ವಾಸ್ತವತೆಯನ್ನು ಮೇಲಿನ ಕವಿತೆ ಚಿತ್ರಿಸುತ್ತದೆ.

ಪ್ರೇಮಾನುರಾಗದ ಕವಿತೆಗಳ ವೇಳೆಯಲ್ಲಿ ಸಿದ್ಧಲಿಂಗಯ್ಯನವರು ಬೇಂದ್ರೆಯವರ ಪ್ರೇಮಕವಿತೆಗಳಿಗಿಂತಲೂ ಭಾವುಕರೇ!. ಆದರೆ ದಲಿತಲೋಕದ ಭಾವುಕತೆಯು ಕೊಂಚ ಆಲಾಪನೆಯನ್ನು ವಿಸ್ತರಿಸಿಕೊಂಡು ಹಾಡುತ್ತದೆ. ಈ ಆಲಾಪದಲ್ಲಿ ತನ್ನ ಜನತೆಯನ್ನು ಸೇರಿಸಿಕೊಳ್ಳುತ್ತದೆ. ವ್ಯಕ್ತಿನಿಷ್ಟ ಪ್ರೇಮದ ಭಾವನೆಯನ್ನು ತನ್ನವರ ನೋವಿನ ದನಿಯಲ್ಲೇ ಬೆರೆಸಿಕೊಂಡು ಅದನ್ನು ಸಮಷ್ಟಿಯಾಗಿಸುವ ಗುಣವನ್ನು ಸಿದ್ಧಲಿಂಗಯ್ಯನವರ ಕವಿತೆಗಳು ಹೊಂದಿವೆ. 'ಸುಟ್ಟಾವು ಬೆಳ್ಳಿಕಿರಣ'

ಕಾವ್ಯ ಸೃಷ್ಟಿಯಲ್ಲಿ ವ್ಯಕ್ತಿ ಪ್ರೇರಣೆ:-

ಸಿದ್ಧಲಿಂಗಯ್ಯನವರು ಒಬ್ಬ ಸಾಹಿತಿಯಾಗಿ, ಚಳುವಳಿಗಾರನಾಗಿ ಬೆಳೆಯುವಲ್ಲಿ ಕೆಲವು ವ್ಯಕ್ತಿಗಳ ವ್ಯಕ್ತಿತ್ವ ಪ್ರಭಾವ ಬೀರಿದೆ. ಆ ಹಿನ್ನೆಲೆಯಿಂದಾಗಿ ಸಿದ್ಧಲಿಂಗಯ್ಯನವರು ವ್ಯಕ್ತಿ ಪ್ರಭಾವದ ಹಿನ್ನೆಲೆಯಲ್ಲಿ ತಮ್ಮ ಆಲೋಚನೆ, ಚಿಂತನೆ, ಆದರ್ಶ, ವ್ಯಕ್ತಿತ್ವವನ್ನು ರೂಪಿಸಿಕೊಂಡವರು. ಈ ಎಲ್ಲ ತತ್ವಗಳಿಗೆ ಪೂರಕವೆಂಬಂತೆ ಅಂಬೇಡ್ಕರ್, ಗಾಂಧಿ, ಕಾರ್ಲ್‌ಮಾರ್ಕ್ಸ್, ಬೆಂಜಮಿನ್ ಮೊಲಾಯಿಸ್, ರಾಮಚಂದ್ರಶರ್ಮ, ಶೂದ್ರ ಶ್ರೀನಿವಾಸ್ ಅವರನ್ನು ಕುರಿತು ಹಲವಾರು ಕವಿತೆಯನ್ನು ರಚಿಸಿದ್ದಾರೆ. ವ್ಯಕ್ತಿ ಕುರಿತು ಕಾವ್ಯ ರಚನೆಯ ಮೂಲ ಪ್ರೇರಣೆಯ ಬಗೆಗೆ "ವ್ಯಕ್ತಿಗಳ ಬಗ್ಗೆ ಇದ್ದ ಗೌರವ ಮತ್ತು ವ್ಯಕ್ತಿಗಳು ಬದುಕಿದ್ದ ಸಂದರ್ಭ ನನಗೆ ವ್ಯಕ್ತಿಗಳನ್ನು ಕುರಿತು ಕಾವ್ಯ ರಚಿಸಲು ಸ್ಫೂರ್ತಿಯಾಯಿತು" ಎಂದು ಸಿದ್ಧಲಿಂಗಯ್ಯನವರೇ ಹೇಳಿದ್ದಾರೆ.

ಅಂಬೇಡ್ಕರ್ ಅವರ ಒಟ್ಟು ವ್ಯಕ್ತಿತ್ವದ ಬಗೆಗೆ ಹೇಳುತ್ತಾ ಅವರು ಈ ದೇಶದ ದಲಿತರ ಉದ್ಧಾರಕ್ಕಾಗಿ ಜನಿಸಿದ ಮಹಾತ್ಮ ಎಂದೂ, ಅವರದು ವಟವೃಕ್ಷ [ಆಲದಮರ] ದಂತೆ ವಿಶಾಲ ದೃಷ್ಟಿಕೋನವುಳ್ಳ ವ್ಯಕ್ತಿತ್ವ ಎಂದು ಬಣ್ಣಿಸುತ್ತಾರೆ.

"ನಾಡನಡುವಿನಿಂದ ಸಿಡಿದ
ನೋವಿನ ಕೂಗೇ
ಆಕಾಶದ ಅಗಲಕ್ಕೂ
ನಿಂತ ಆಲವೆ."[12]

ಅಂಬೇಡ್ಕರ್ ಅವರ ವ್ಯಕ್ತಿತ್ವ, ಚಿಂತನೆ, ಆಲೋಚನೆ, ತಾತ್ವಿಕ ಸಿದ್ಧಾಂತಗಳು ಆಲದ ಮರದ ಹಾಗೆ ದೀರ್ಘಾಯುಷ್ಯವುಳ್ಳವು ಎಂಬುದು ಮೇಲಿನ ಕವಿತೆಯ ನಿಲುವು. ನೊಂದವರ ದನಿಯಾಗಿ ಒಡಮೂಡಿದ ಅಂಬೇಡ್ಕರ್ ಅವರು ಶ್ರೇಣೀಕೃತ ಭಾರತದ ವ್ಯವಸ್ಥೆಯೊಳಗಿನ ಅನ್ಯಾಯವನ್ನು ಬಹಿರಂಗ ಪಡಿಸುತ್ತಲೇ ಜಾತಿವ್ಯವಸ್ಥೆಯ ವಿರುದ್ಧದ ಹೋರಾಟಕ್ಕೆ ಶೋಷಿತ ಸಮುದಾಯಗಳನ್ನೆಲ್ಲ ಜಾಗೃತಗೊಳಿಸಿದವರು. ಮೇಲಿನ ಕವಿತೆಯನ್ನು ಮಾರ್ಕ್ಸ್‌ವಾದಿ ಹಿನ್ನಲೆಯಲ್ಲಿ ರಚಿಸಿದ್ದಾರೆ. ವ್ಯಕ್ತಿ ಕುರಿತ ಕವಿತೆಗಳಲ್ಲಿ ಸಿದ್ದಲಿಂಗಯ್ಯನವರು ವಿಮರ್ಶಾತ್ಮಕ ದೃಷ್ಟಿಕೋನದ ಚರ್ಚೆಗೆ ಬದಲಾಗಿ, ಆ ವ್ಯಕ್ತಿಗಳ ವ್ಯಕ್ತಿತ್ವವನ್ನು, ಹೋರಟ ಹಾಗೂ ಸಾಧನೆಗಳನ್ನ ಮೆಚ್ಚಿ ಅವುಗಳನ್ನು ದಾಖಲಿಸುತ್ತಾ ಹೋಗುತ್ತಾರೆ. ಮಹಾತ್ಮಗಾಂಧೀಜಿಯವರ ಚೈತನ್ಯ ಪೂರ್ಣ ವ್ಯಕ್ತಿತ್ವ, ಸರಳ ಬದುಕಿನ ಆದರ್ಶ ನೊಂದವರ ಬಗೆಗೆ ಅವರಿಗಿದ್ದ ಕಳಕಳಿಯನ್ನು ಕುರಿತು ವಿಶ್ಲೇಷಿಸಿದ್ದಾರೆ.

ಗಾಂಧೀಜಿಯವರು ಕರಿಯನೆಂಬ ಕಾರಣಕ್ಕಾಗಿ ದಕ್ಷಿಣ ಆಫ್ರಿಕಾದಲ್ಲಿ ರೈಲ್ವೆ ಬೋಗಿಯಿಂದ ಹೊರದೂಡಲ್ಪಟ್ಟು ಅನುಭವಿಸಿದ ಅಪಮಾನ, ಬ್ರಿಟಿಷರನ್ನು ಭಾರತಬಿಟ್ಟು ತೊಲಗಿಸಲು ನಡೆಸಿದ ಪ್ರಯತ್ನ; ಜಾತ್ಯಾತೀತ ನವಭಾರತ ನಿರ್ಮಾಣಕ್ಕಾಗಿ ಪಟ್ಟಶ್ರಮ ಮೊದಲಾದವುಗಳನ್ನು ತಮ್ಮ ಕವಿತೆಯಲ್ಲಿ ಚಿತ್ರಿಸಿದ್ದಾರೆ.

ಕಾರ್ಲ್‌ಮಾರ್ಕ್ಸ್‌ನ ಹೋರಾಟ, ಸಿದ್ದಾಂತ, ಚಿಂತನೆಗಳಿಂದ ಹೆಚ್ಚು ಪ್ರಭಾವಕ್ಕೊಳಗಾದ ಸಿದ್ದಲಿಂಗಯ್ಯನವರ ಬಹುಮಟ್ಟಿನ ಕವಿತೆಗಳಲ್ಲಿ ಮಾರ್ಕ್ಸವಾದದ ದಟ್ಟ ನೆರಳಿದೆ. ಕಾರ್ಲ್‌ಮಾರ್ಕ್ಸ್ ಕವಿತೆಯಲ್ಲಿ ಕವಿ, ಮಾರ್ಕ್ಸ ವರ್ಗಹೋರಾಟಕ್ಕೆ ತನ್ನನ್ನು ತಾನು ಅರ್ಪಿಸಿಕೊಂಡ ಬಗೆ ಎದುರಿಸಿದ ಸವಾಲುಗಳನ್ನು ಕುರಿತು ವಿವರಿಸಿದ್ದಾರೆ. ಮಾರ್ಕ್ಸಗಿದ್ದ ಶ್ರಮಶೋಷಣೆ ಯುಕ್ತ ಸಮಾಜದ ಪರಿಕಲ್ಪನೆಯನ್ನು ಈ ದಿನಗಳಲ್ಲಿರುವ ಶೋಷಣೆಯನ್ನು ಅವರ ಹೋರಾಟದ ಹಿನ್ನಲೆಯಲ್ಲಿ ಚಿತ್ರಿಸಿರುವುದು ಇಲ್ಲಿನ ವಿಶೇಷವಾಗಿದೆ.

ಅಂಬೇಡ್ಕರ್ ಪ್ರಣೀತ ದಲಿತ ಮುಕ್ತಿಯ ದಾರಿ ಕಾವ್ಯ ಮತ್ತು ಚಳುವಳಿಗಳು ಆಳವಾಗಿಯೆ ಪ್ರಭಾವಿಸಿದ್ದವು ಎನ್ನುವುದು ಸತ್ಯದ ಮಾತು. ಹಾಗೆ ಕವಿಯನ್ನು ಪರಿಣಾಮಕಾರಿಯಾಗಿ ಪ್ರಭಾವಿಸಿದ ದಕ್ಷಿಣ ಆಫ್ರಿಕಾದ ಕವಿಗಳಲ್ಲಿ ಕ್ರಾಂತಿ ಕವಿ ಬೆಂಜಮಿನ್ ಮೊಲಾಯಿಸ್ ಕೂಡ ಒಬ್ಬರು. ಬೆಂಜಮಿನ್ ಮೊಲಾಯಿಸ್ ಬಿಳಿಯರ ವರ್ಣಭೇದ ನೀತಿಯ ವಿರುದ್ಧ ಕ್ರಾಂತಿಯ ದುಂದುಭಿ ಮೊಳಗಿಸಿದ ಕಾರಣದಿಂದಾಗಿ, ಸರ್ಕಾರದ ಗಲ್ಲುಶಿಕ್ಷೆಯನ್ನು ದಿಟ್ಟತನದಿಂದ ಸ್ವೀಕರಿಸಿದ ಕವಿ. ಮೊಲಾಯಿಸ್ ಅವರ ಸಾವು ಸಿದ್ಧಲಿಂಗಯ್ಯನವರನ್ನು ಬಹುವಾಗಿ ಕಾಡಿರುವುದು ಕವಿತೆಯ ಮೂಲಕ ವ್ಯಕ್ತವಾಗಿದೆ.

ಕುತೂಹಲದ ಸಂಗತಿಯೆಂದರೆ ಕವಿ ಸಿದ್ದಲಿಂಗಯ್ಯನವರ ಮೊದಲ ಅಂಬೇಡ್ಕರ್ ಮಾರ್ಕ್ಸವಾದಿ ಘಟ್ಟದ ಕವಿತೆಗಳಲ್ಲಿ ಕಾಣುವ ಭಾವನೆಗಳ ಖಾಚಿತ್ಯ ಎರಡನೆಯ ಘಟ್ಟದಲ್ಲಿಲ್ಲ. ಹಾಗೆ ನೋಡಿದರೆ, ಎರಡನೆಯ ದೇವದೇವಿಯರ ಘಟ್ಟದ ಕವಿತೆಗಳು ಅಷ್ಟು ಸ್ಪಷ್ಟವಾಗಿ ನಿಲುವು ತಳೆಯಲು ಹಿಂಜರಿಯುತ್ತವೆ. ಕವಿಗೆ ಪಥ್ಯ ಎನ್ನುವುದು ಆಂತರ್ಯಕ್ಕಿಂತ ಹೆಚ್ಚಾಗಿ ಜನರ ಜನತೆಗೆ ಮುಖಾಮುಖಿಯಾಗಿ ರೂಪುಗೊಳ್ಳುತ್ತವೆ ಎಂಬ ಮಾತಿಗೆ ಇದು ಸಾಕ್ಷಿ, ಮೊದಲ ಘಟ್ಟದ ಕವಿತೆಯ ಆತ್ಮವಿಶ್ವಾಸಕ್ಕೆ ಕಾರಣ ತನ್ನ ಕಮ್ಮಟದ ಲಯಕ್ಕೆ ತಕ್ಕ ಹಾಗೆ ಓದುಗರೂ ರೂಪುಗೊಂಡಿರುತ್ತಾರೆ ಎಂಬ ನಂಬಿಕೆ. ಆದರೆ, ಒಡಮಾಡುತ್ತಿರುವ ಈ ಹೊಸನಿಲುವು ಜನಮನ್ನಣೆ ಪಡೆಯಲಾರದು ಎಂಬ ಸಂಶಯ ಕವಿತೆಯನ್ನು ನಿಯಂತ್ರಿಸಿದೆ. ಇಲ್ಲಿ ತನ್ನ ಕವಿತೆಯ ಒಡಲೊಳಗೆ ಕೂಡಿರುವ ಸಮಷ್ಟಿಯನ್ನು ಧಿಕ್ಕರಿಸಿವಲ್ಲಿ ಕಾವ್ಯ ಬರೆಯುತ್ತೇವೆ ಎಂದಾಗ ಸಾರ್ವಜನಿಕ ಕಾವ್ಯ ಅಸಾದ್ಯವಾಗುತ್ತದೆ.

'ಕಾರ್ಲ್‌ಮಾರ್ಕ್ಸ್' ಕವಿತೆಯಲ್ಲಿ ಕವಿ ಮಾರ್ಕ್ಸ್‌ನ ವರ್ಗ ಹೋರಾಟಕ್ಕೆ ತಮ್ಮನ್ನು ಅರ್ಪಿಸಿಕೊಂಡ ಬಗೆ ಹಾಗೂ ಎದುರಿಸಿದ ಸಾಲುಗಳನ್ನು ಕುರಿತು ವಿವರಿಸಿದ್ದಾರೆ. ಸಿದ್ದಲಿಂಗಯ್ಯನವರು ಕಾರ್ಲ್‌ಮಾರ್ಕ್ಸ್‌ನ ಹೋರಾಟ, ಸಿದ್ಧಾಂತ, ಚಿಂತನೆಗಳಿಂದ ಹೆಚ್ಚು ಪ್ರಭಾವಿತರಾಗಿರುವುದರಿಂದ ಬಹುತೇಕ ಅವರ ಎಲ್ಲಾ ಕವಿತೆಗಳಲ್ಲೂ ಮಾರ್ಕ್ಸ್‌ವಾದದ ದಟ್ಟ ನೆರಳಿರುವುದಕ್ಕೆ ಸಾಕ್ಷಿಯಾಗಿದೆ.'

"ಗಿರಣಿಯಂತ್ರದ ಕೆಳಗೆ ಕೈ ಜಜ್ಜಿ ಹೋದವನು,
ಮೈ ಮಾರಿಕೊಳುತಿರುವ ಬಡವೆ ಹೆಣ್ಣು,
ಭಾವಣಿಯೆ ಕುಸಿದವನು, ಹಸಿದು ಕಂಗೆಟ್ಟವನು
ಇವರೊಳಗೆ ನಿನ್ನನ್ನು ಕಂಡುಕೊಂಡೆ
ತೊಟ್ಟ ಚಿಂದಿಯ ಕಂಡು ತೇಪೆಹಾಕುವ ಬದಲು
ಹೊಸ ಬಟ್ಟೆಯನ್ನು ತರುವ ಕನಸಕಂಡೆ
ನೊಂದ ಎದೆಯಲಿ ನಗೆಯ ಹೂವ ಅರಳಿಸಲೆಂದು

ಕಾರ್ಮಿಕರ, ಶ್ರಮಿಕರ, ವೇಶ್ಯೆಯರ, ಬಡವರ, ನಿರ್ಗತಿಕರ ಒಟ್ಟು ಬದುಕಿನ ಮೂಲಭೂತ ಸಮಸ್ಯೆಗಳ ವಿರುದ್ಧ ಹೋರಾಡುತ್ತಲೇ, ವರ್ಗತಾರತಮ್ಯದ ಸಮಾಜ ಸುಧಾರಣೆಯ ಬದಲಾಗಿ, ಒಟ್ಟು ಸಮಾಜದ ಬದಲಾವಣೆಯ ಬಗೆಗಿನ ಕಾರ್ಲ್‌ಮಾರ್ಕ್ಸ್‌ನ ಹೋರಾಟದ ಆಶಯವನ್ನು ಮೇಲಿನ ಸಾಲುಗಳು ಹಿಡಿದಿಟ್ಟಿವೆ. ಮಾರ್ಕ್ಸ್‌ಗಿದ್ದ ಸಮಸಮಾಜದ ನಿರ್ಮಾಣದ ಪರಿಕಲ್ಪನೆಯನ್ನು ಈ ಕವಿತೆ ಬಿಂಬಿಸುತ್ತದೆ. ಶ್ರಮಿಕ ವರ್ಗದ ಬದುಕನ್ನು ಮಾನವೀಯರ ದೃಷ್ಟಿಯಲ್ಲಿ ವಿಶಾಲಗೊಳಿಸುವ ತುಡಿತವಿದೆ. 'ನ್ಯಾಯ ಕೇಳಲು ಹೊರಟ ಜನರ ಮೆರವಣಿಗೆಯಲಿ, ಬಂದು ಮುನ್ನಡೆಸುವುದು ನಿನ್ನ ನೆನಪು' ಎಂಬುದಾಗಿ ಕವಿ ಎಪ್ಪತ್ತರ ದಶಕದ ದಲಿತ ಬಂಡಾಯ, ರೈತ ಚಳುವಳಿಗೆ ಮಾರ್ಕ್ಸ್‌ವಾದದ ಚಿಂತನೆಗಳು ಸ್ಫೂರ್ತಿಸೆಲೆಯಾಗಿದೆ.

ಬಿಳಿಯರ ವರ್ಣಬೇಧ ನೀತಿಯ ವಿರುದ್ಧ ದಕ್ಷಿಣ ಆಫ್ರಿಕಾದಲ್ಲಿ ಕ್ರಾಂತಿಕಾರಿ ಗೀತೆಗಳನ್ನು ರಚಿಸಿ ಕ್ರಾಂತಿಯ ದುಂದುಭಿ ಮೊಳಗಿಸಿದ ಕ್ರಾಂತಿಕವಿ ಬೆಂಜಮಿನ್ ಮೋಲಾಯಿಸ್ ಸರ್ಕಾರದ ಗಲ್ಲು ಶಿಕ್ಷೆಯನ್ನು ದಿಟ್ಟತನದಿಂದ ಸ್ವೀಕರಿಸಿ, ಕಪ್ಪುಜನರ ಪರವಾಗಿ ಬಿಳಿಯರ ವಿರುದ್ಧ ಹೋರಾಡಿದ ನೆಲ್ಸನ್ ಮಂಡೇಲಾ ಹಾಗೂ ಬೆಂಜಮಿನ್‌ಮೋಲಾಯಿಸರನ್ನು ಕವಿ ಮಿನುಗುವ ಹಣತೆಯನ್ನು ಪ್ರತಿಮೆಯಾಗಿ ಬಳಸಿಕೊಂಡು ಚಿತ್ರಿಸಿದ್ದಾರೆ.

ಕಾವ್ಯಗಳಲ್ಲಿ ಭಾಷೆ:-

ಕವಿ ಸಿದ್ದಲಿಂಗಯ್ಯನವರು ತಾವು ಬೆಳೆದ ಪರಿಸರ ಹಾಗೂ ಸಮಕಾಲೀನ ಸಮಾಜದೊಟ್ಟಿಗೆ ಸೃಜನಾತ್ಮಕವಾದ ಸಂವೇದನಾಶೀಲ ಸಂಬಂಧವನ್ನು ಉಳಿಸಿಕೊಂಡವರು. ಸುತ್ತಲ ಸಮಾಜದ ಒತ್ತಡಗಳ ಪ್ರಭಾವಕ್ಕೆ ಒಳಗಾಗುತ್ತಲೇ, ಅವುಗಳಿಗೆ ಪ್ರಾಮಾಣಿಕವಾಗಿ ಪ್ರತಿಕ್ರಿಯಿಸಿದವರು. ಶ್ರೀರಾಮಪುರದ ಸ್ಲಮ್ಮಿನಿಂದ ಒಡಮೂಡಿದ ಇವರ ಸಾಹಿತ್ಯ ಅಲ್ಲಿಯ ಸೊಗಡನ್ನ ಒಳಗೊಂಡಿದೆ. ಸ್ಲಮ್ಮಿನ ಭಾಷೆಯಲ್ಲಿ ದಮನದ ಅನುಭವವೇ ಹೆಚ್ಚು ಅಂತರಂಗೀಕರಣಕ್ಕೆ ಒಳಗಾಗಿರುತ್ತದೆ. ಹೀಗಾಗಿ ಕ್ರಾಂತಿ ಚೈತನ್ಯ ಆ ಭಾಷೆಯಲ್ಲಿ ತುಂಬಾ ಕಡಿಮೆ ಇರುತ್ತದೆ ಎಂಬ ಸಮಸ್ಯೆ ಒಂದು ಕಡೆಯಿಟ್ಟದ್ದೆ. ಕವಿಯ ಗ್ರಾಮೀಣ ಮೂಲದ ಲಯ ಸ್ಮೃತಿಗಳೂ ಇವೆ ಎಂಬುದು ಇನ್ನೊಂದು ಬಗೆಯ ಉತ್ತರವಾಗುತ್ತದೆ. ಸೃಜನಶೀಲ ಭಾಷೆ ಇದ್ದರೂ ಕವಿಗೆ ಇರುವ ಕ್ರಾಂತಿಯ ಕಲ್ಪನೆಯಿಂದಾಗಿ ಅವೆಲ್ಲ ಕಾವ್ಯಕೃತಿಗೆ ಒದಗಿ ಬರಲು ಸಾಧ್ಯವಿಲ್ಲ. ಆದರೆ ಕನ್ನಡ ಕಾವ್ಯ ಆವರೆಗೆ ಕಂಡರಿಯದ ಹೊಸ ಭಾಷಾಭಿವ್ಯಕ್ತಿಯ ಸತ್ವವನ್ನು ಕವಿ ಸಿದ್ದಲಿಂಗಯ್ಯನವರು ತಮ್ಮ 'ಹೊಲೆಮಾದಿಗರಹಾಡು' ಕವನ ಸಂಕಲನದ ಮೂಲಕ ಪರಿಚಯಿಸಿದರು. ಬೆಂಗಳೂರು ಗ್ರಾಮಾಂತರ ಪ್ರದೇಶದ ಸುತ್ತಮುತ್ತಲ ಮಾಗಡಿ, ಮಂಚನಬೆಲೆಯ ಜನಪದರ ಆಡುನುಡಿಯ ಸೊಗಡನ್ನು ಸಮರ್ಥವಾಗಿ ತಮ್ಮ ಕಾವ್ಯಾಭಿ

ವ್ಯಕ್ತಿಯ ಮಾಧ್ಯಮವಾಗಿ ಬಳಸಿಕೊಂಡಿದ್ದಾರೆ. ದೇಸೀಯ ನೆಲೆಯ ಛಾಪನ್ನು ಮೈಗೂಡಿಸಿಕೊಂಡಿರುವ ಇವರ ಕಾವ್ಯಭಾಷೆ ಜೀವಂತಿಕೆಯ ಸಂಕೇತವಾಗಿದ್ದು, ದಲಿತ ಸಮುದಾಯದ ಬದುಕಿನಾಳದ ನೋವು, ಸಂಕಟ, ಹತಾಶೆ, ರೋಷ-ಆವೇಶಗಳ ಸಂವೇದನಾಶೀಲತೆಯು ಸತ್ವಪೂರ್ಣವಾಗಿ ಮೈದಾಳಿದ ಜೊತೆಗೆ ದಲಿತ ಸಾಂಸ್ಕೃತಿಕ ಜಗತ್ತಿನ ಹಲವು ಒಳನೋಟಗಳನ್ನು ತೆರೆದಿಡುತ್ತದೆ. ಒಂದು ಭಾಷೆ ಕೃತಿಯಲ್ಲಿ ದಾಖಲಾದಾಗ ಅಲ್ಲಿ ಕೇವಲ ಭಾಷೆ ಮಾತ್ರ ಮೂಡಿಬಂದಿರುವುದಿಲ್ಲ. ಬದಲಾಗಿ ಭಾಷೆಯೊಂದಿಗೆ ಆಯಾ ಜನಾಂಗದ ಸಂಸ್ಕೃತಿಯೂ ಮೂಡಿಬಂದಿರುತ್ತದೆ. ಪ್ರಥಮಬಾರಿಗೆ ದೇವನೂರ ಮಹಾದೇವ ಅವರು ತಮ್ಮ ಕಥೆ, ಕಾದಂಬರಿಗಳಲ್ಲಿ ದಲಿತ ಜನಾಂಗದ ಪ್ರಾದೇಶಿಕ ಭಾಷೆಯನ್ನು ಯಶಸ್ವಿಯಾಗಿ ಬಳಸಿಕೊಂಡಿರುವ ಹಾಗೆಯೇ, ಸಿದ್ದಲಿಂಗಯ್ಯನವರೂ ತಮ್ಮ ಆರಂಭದ ಕಾವ್ಯದಲ್ಲಿ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿದ್ದಾರೆ. ಇದಕ್ಕೆ 'ನನ್ನ ಜನಗಳು', 'ಗಳ್ಳಗಳು', 'ಒಂದು ಮೂಳೆಯ ಹಾಡು', 'ಅಲ್ಲೆಕುಂತವರೆ', 'ಹೆಂಡಕ್ಕೆ ಸಾವಿಲ್ಲವೊ' ಮುಂತದ ಕವಿತೆಗಳು ಸ್ಪಷ್ಟನಿದರ್ಶನಗಳಾಗಿವೆ.

ಕರ್ನಾಟಕ ದಲಿತ ಸಂಘರ್ಷ ಸಮಿತಿಯವರು ಜನಸಂಘಟನೆಯನ್ನು ಮಾಡಲು ಸೂಜಿಮೊನೆಯಂತೆ ಆಕರ್ಷಿಸುವ ಸಿದ್ದಲಿಂಗಯ್ಯನವರ ಹಾಡುಗಳು, ಜನದೊಡಲಿನ ಭಾಷೆಯಾಗಿದ್ದು ಬಹುಮುಖ್ಯಕಾರಣವಾಗಿದೆ. ಕರ್ನಾಟಕದ ಮೂಲೆ ಮೂಲೆಯಲ್ಲಿ ಇವರ ಹಾಡುಗಳು ಕೇಳಿ ಬರುತ್ತಿರುವುದು ಇವರ ಕಾವ್ಯಭಾಷೆಯ ಜನಪ್ರಿಯತೆಗೆ ಸಾಕ್ಷಿಯಾಗಿದೆ. ದಲಿತ ಸಾಹಿತ್ಯದ ಪರಿಭಾಷೆ, ಕನ್ನಡ ಸಾಂಸ್ಕೃತಿಕ ನೆಲೆಯಲ್ಲಿಯೆ ಸಿದ್ದಲಿಂಗಯ್ಯನವರ ಕಾವ್ಯಭಾಷೆಯನ್ನು ಗ್ರಹಿಸಕೊಳ್ಳಬೇಕಾಗಿದೆ. ಈ ದೃಷ್ಟಿಯಿಂದ ಇವರ ಕಾವ್ಯಭಾಷೆ ಕನ್ನಡ ಕಾವ್ಯಶೈಲಿಗೆ ಹೊಸ ಪರಿಭಾಷೆಯನ್ನು ಕೊಟ್ಟಿದ್ದು ತುಂಬಾ ಮಹತ್ವದ ಸಂಗತಿಯಾಗಿದೆ.

ಮುಂದಿನ ತಲೆಮಾರಿನ ದಲಿತ ಬಂಡಾಯ ಲೇಖಕರ ಗದ್ಯ ಬರವಣಿಗೆಯಲ್ಲಿ ಗ್ರಾಮೀಣ ಭಾಷಾ ಬಳಕೆಯ ಮೇಲೆ ದೇವನೂರು ಮಹಾದೇವ ಅವರು ಪ್ರಭಾವ ಬೀರಿದರೆ, ಸಿದ್ಧಲಿಂಗಯ್ಯನವರು ದಲಿತ ಬಂಡಾಯ ಕವಿಗಳ ಕಾವ್ಯರಚನೆಯಲ್ಲಿ ದೇಸೀ ನುಡಿಗಟ್ಟಿನ ಸಮರ್ಥ ಬಳಕೆಯ ಮೇಲೆ ತಮ್ಮ ಛಾಪನ್ನು ಮೂಡಿಸಿದ್ದಾರೆ. ಈ ಸಂದರ್ಭದಲ್ಲಿಯೇ ಶೋಷಿತ ಸಮುದಾಯದ ಆಡುಭಾಷೆ ಇಡೀ ಕನ್ನಡ ಸಾಹಿತ್ಯಕ್ಕೊಂದು ವಿಶಿಷ್ಟ ಭಾಷಾ ಜಗತ್ತನ್ನು ಆ ಮೂಲಕ ಒಂದು ಜನಾಂಗದ ಜೀವಂತ ಸಂಸ್ಕೃತಿಯನ್ನು ಪರಿಚಯಿಸಿತು. ಚಳುವಳಿಯ ಹಿನ್ನೆಲೆಯಲ್ಲಿ ಮೂಡಿಬಂದಿರುವ ಸಿದ್ಧಲಿಂಗಯ್ಯನವರ ಕವಿತೆಗಳಲ್ಲಿ ಗ್ರಾಮೀಣ ಭಾಷಾ ನುಡಿಗಟ್ಟುಗಳನ್ನು ಸಮರ್ಥವಾಗಿ ದುಡಿಸಿಕೊಳ್ಳಲು ಸಾಧ್ಯವಾಗಿರುವುದು ಅವರಿಗೆ ಭಾಷೆಯ ಬಗ್ಗೆ ಇರುವ ಸ್ಪಷ್ಟ ಅರಿವೇ ಕಾರಣವಾಗಿದೆ. ಚಳುವಳಿಯ ಸಂಧರ್ಭದಲ್ಲಿ ಆಡುಭಾಷೆಯ ಇವರ ಕಾವ್ಯಗಳನ್ನು ಕೇಳಿ ಇಡೀ ದಲಿತ ಸಮೂಹ ರೋಮಾಂಚನವಾದದ್ದು ಉಂಟು. ದಲಿತರ ನುಡಿಗಟ್ಟಿಗೆ ಶೋಷಕ

ವ್ಯವಸ್ಥೆಯನ್ನು ತಲ್ಲಣಗೊಳಿಸುವ ಹಾಗೂ ದಲಿತ ಜನಾಂಗವನ್ನು ಸಂಘಟಿಸುವ ಸಾಮರ್ಥ್ಯವಿದೆ ಎಂಬುದನ್ನು ಇವರ ಕಾವ್ಯ ತೋರಿಸಕೊಟ್ಟಿದೆ. ಒಟ್ಟಾರೆ ಸಿದ್ಧಲಿಂಗಯ್ಯನವರು ಶೋಷಿತರ ಆಡುನುಡಿಗೆ ಕಾವ್ಯ ಸ್ಪರ್ಶ ನೀಡಿದ ಕವಿ. "ಗೆಳೆಯ ಸಿದ್ಧಲಿಂಗಯ್ಯನ ಈ ಕವನಗಳ ಧಾಟಿ, ಧೋರಣೆ, ಶಬ್ದಕೋಶ..... ಇಡಿಯಾಗಿ ಕನ್ನಡಕ್ಕೆ ಹೊಸದು. ಈ ಶಬ್ದಗಳನ್ನು ಸ್ವಲ್ಪವೇ ಬದಿಗೆ ಸರಿಸಿದರೂ ಸಾಕು. ಒಳಗೆ ಸಿದ್ಧಲಿಂಗಯ್ಯ ತನ್ನೆಲ್ಲ ಪರಿಸರದೊಂದಿಗೆ ಸಿಕ್ಕಿಬಿಡುತ್ತಾನೆ. ಭಾಷೆ ಈ ರೀತಿ ಪಾರದರ್ಶಕವಾಗಬಹುದೆಂದು ತೋರಿಸಿಕೊಟ್ಟವನೇ ಅವನು "[೨೮] ಎಂಬ ಚಂದ್ರಶೇಖರ ಕಂಬಾರರ ಮಾತುಗಳು ಸಿದ್ಧಲಿಂಗಯ್ಯನವರ ಕಾವ್ಯ ಭಾಷೆಯ ದೃಷ್ಟಿಯಿಂದ ತುಂಬ ಮಹತ್ವದ್ದಾಗಿದೆ.

ಸಿದ್ಧಲಿಂಗಯ್ಯನವರು ತಮ್ಮ ಕಾವ್ಯದಲ್ಲಿ ಬಳಸಿರುವ ದಲಿತ ಸಮುದಾಯದ ನುಡಿಗಟ್ಟುಗಳು ಇಡೀ ಕವಿತೆಯ ಅರ್ಥವಂತಿಕೆಯನ್ನು ಹೊರಚೆಲ್ಲುವ ಸಾಮರ್ಥ್ಯವುಳ್ಳವಾಗಿವೆ. ಒಂದೊಂದು ಪದಸಮುಚ್ಚಯವು ತನ್ನ ಒಡಲಾಳದಿಂದ ಹುಟ್ಟಿದ ನೋವು ಹತಾಶೆ, ಸಿಟ್ಟು-ಸೆಡೆವು, ಶೋಷಣೆ-ಪ್ರತಿಭಟನೆ, ನಿಂದನೆಗಳು ಶೋಷಿತನೊಬ್ಬನ ಎದೆಯಾಳದ ತಳಮಳವನ್ನು ಹಸಿಹಸಿಯಾಗಿ ತೆರೆದು ತೋರಿಸುತ್ತದೆ. 'ನನ್ನ ಜನಗಳು' ಕವಿತೆಯಲ್ಲಿನ 'ಹಸಿವಿನಿಂದ ಸುತ್ತೋರು ಸೈಜುಗಲ್ಲು ಹೊತ್ತೋರು; ಕಾಲು ಕಯ್ಯ ಹಿಡಿಯೋರು ಕೈ ಮಡಗಿಸಿಕೊಳ್ಳೋರು; ಗಾಳಿಯಲ್ಲೆ ಬಾಳುತಾರೆ' - ಈ ಎಲ್ಲಾ ನುಡಿಗಟ್ಟುಗಳು ಯಾವುದೇ ಅರ್ಥವಿವರಣೆಯನ್ನು ಬಯಸದೆ ಓದಿದಾಕ್ಷಣ ನೇರವಾಗಿ ಶೋಷಿತನ ಮನದಾಳದ ಬೇನೆಯನ್ನು ಕಟ್ಟಿಕೊಡುತ್ತವೆ. 'ಒಂದು ಮೂಳೆಯ ಹಾಡು' ಕವಿತೆಯ ಶೀರ್ಷಿಕೆಯೇ ಧ್ವನಿಪೂರ್ಣವಾಗಿದ್ದು, ಕವಿ 'ಮೂಳೆಯನ್ನು' ಶೋಷಿತರ ಸಂಕೇತವಾಗಿ ಬಳಸಿರುವುದು ಸಮಂಜಸವಾಗಿದೆ. ಮೂಳೆ ನಿರ್ಜೀವದ ಪ್ರತಿಮೆಯಾಗಿದ್ದರೂ ಅದರಲ್ಲಿ ಮಾತಾಡುವ, ಪ್ರತಿಫಲಿಸುವ, ಮನುಷ್ಯನಾಗುವ ಜೀವ ಚೈತನ್ಯವಿದೆಯೆಂಬುದು ಈ ಕವಿತೆಯಲ್ಲಿ ಬಳಕೆಯಾಗಿರುವ 'ಕ್ವರಗ್ತಿನಿ', 'ತಾದೀಗ್ ಸಿಕ್ಕಿರೊ ಮೂಳೆ' ಎಂಬ ಮಾತುಗಳು ದಲಿತನೊಬ್ಬ ಅನುಭವಿಸುತ್ತಿರುವ ಶೋಷಣೆಯ ನೋವನ್ನು ಬಿಂಬಿಸುತ್ತವೆ. ಡಿ. ಆರ್. ನಾಗರಾಜ್‌ರವರು ಅಭಿಪ್ರಾಯ ಪಡುವ ಹಾಗೆ "[೨೯] ಈ ಭಾಷೆ ಕವಿಯ ಶ್ರೀರಾಂಪುರದ ಸ್ಲಮ್ ವಾಸ್ತವ್ಯದಿಂದ, ಅದಕ್ಕೂ ಹಿಂದೆ ಹೋಗಿ ಮಾಗಡಿ ತಾಲ್ಲೂಕಿನ ಹಳ್ಳಿಗಳಿಂದ ಬಂದದ್ದು ಅವೆರಡೂ ಬೆರೆತು ರೂಪುಗೊಂಡದ್ದು. ಹೀಗೆ ಎರಡು ಭಿನ್ನಶೈಲಿಗಳು ಕವಿಯ ಮೊದಲ ಕೃತಿಯಲ್ಲೇ ಇವೆ; ಆರಂಭದ ಇವರ ಕವಿತೆಗಳಲ್ಲಿ ಸತ್ವಪೂರ್ಣವಾಗಿ ಪ್ರಯೋಗಿಸಲ್ಪಟ್ಟು ಪ್ರಾದೇಶಿಕ ಭಾಷೆ ಅನಂತರದ ಇವರ ಕವಿತೆಗಳಲ್ಲಿ ಕಂಡುಬರುವುದಿಲ್ಲ. ವಿಭಿನ್ನ ಭಾಷಾ ಶೈಲಿಯ ಪ್ರಯೋಗಕ್ಕಿಂತ ಸಾಮಾಜಿಕ ಸಮಸ್ಯೆಗಳ ನೇರ ಅಭಿವ್ಯಕ್ತಿಯ ಕಡೆಗೆ ಕವಿ ಹೆಚ್ಚು ಒತ್ತು ಕೊಟ್ಟಿದ್ದಾರೆ."[126] ಇದು ಸಿದ್ಧಲಿಂಗಯ್ಯನವರ ಕಾವ್ಯಭಾಷೆಯ ವಿಶೇಷ ಎನಿಸುತ್ತದೆ. ಹಾಗಾಗಿ ಸರಳವಾದ, ನೇರವಾದ ಗ್ರಾಂಥಿಕಭಾಷೆಯ ಬಳಕೆಯ ಮೂಲಕ ವಸ್ತು - ವಿಷಯವನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುವ ಕಡೆ ಹೆಚ್ಚು ಗಮನ

ಹರಿಸತೊಡಗಿದ್ದಾರೆ. ಇವರ ಹೆಚ್ಚಿನ ಕವಿತೆಗಳ ಭಾಷೆಯಲ್ಲಿ ವಾಸ್ತವತೆ ಅಧಿಕವಾಗಿ ಕಂಡುಬಂದರೂ, ಪ್ರಭಾವದ ದೃಷ್ಟಿಯಿಂದ ಮಹತ್ವದ್ದಾಗಿದೆ.

ಕವಿ ಸಿದ್ಧಲಿಂಗಯ್ಯನವರು ತಮ್ಮ ಕಾವ್ಯಗಳಲ್ಲಿ ಶಕ್ತಿಶಾಲಿಯಾದ ಪ್ರತಿಮೆ, ಉಪಮೆ, ರೂಪಕಗಳನ್ನು ಮನೋಜ್ಞವಾಗಿ ದುಡಿಸಿಕೊಂಡಿದ್ದಾರೆ. ಇವರ ಕವಿತೆಗಳ ಒಂದು ವಿಶಿಷ್ಟತೆಯೆಂದರೆ, ಓದುಗನ ಕಲ್ಪನಾ ಪ್ರಜ್ಞೆಯಲ್ಲಿ ಘಟನಾವಳಿಗಳ ದೃಶ್ಯ ಜಗತ್ತನ್ನು ನಿರ್ಮಿಸುವುದು. ಹೆಚ್ಚು ಕವಿತೆಗಳಲ್ಲಿ ಕವಿಯೇ ನಿರೂಪಕನಾಗಿ ಕಥನಾತ್ಮಕ ಶೈಲಿಯಲ್ಲಿ ವಸ್ತು ವಿಷಯವನ್ನು ನಿರೂಪಿಸುತ್ತಾ ಹೋಗುತ್ತಾನೆ. ಶೋಷಿತ ಹಾಗೂ ಶೋಷಕ ಸಮುದಾಯದೊಟ್ಟಿಗೆ ಕವಿ ನಡೆಸುವ ಸಂವಾದದ ರೀತಿಯಲ್ಲಿ ಹಲವು ಕವಿತೆಗಳು ಸಾಗುತ್ತವೆ. ಸಂಭಾಷಣೆಯ ಮುಖೇನ ಸಾಮಾಜಿಕ ಸಮಸ್ಯೆಯನ್ನು ಚರ್ಚಿಸುವ ಇವರ ಕವಿತೆಗಳಲ್ಲಿ ಸಾಗುತ್ತವೆ. ಸಂಭಾಷಣೆಯ ಮುಖೇನ ಸಾಮಾಜಿಕ ಸಮಸ್ಯೆಯನ್ನು ಚರ್ಚಿಸುವಂತೆ ಇವರ ಕವಿತೆಗಳು ವಾಸ್ತವ ಪ್ರಜ್ಞೆ ಪ್ರಮುಖವಾಗುತ್ತದೆ.

ಉತ್ಪ್ರೇಕ್ಷಾಲಂಕಾರ ಎಡಪಂಥೀಯ ಕಾವ್ಯದ ಸಹಜಧರ್ಮ ಎನ್ನುವುದಾದರೆ, ಸಿದ್ಧಲಿಂಗಯ್ಯ ಆ ಧರ್ಮದ ಅಧಿದೇವತೆ. ಸಿದ್ಧಲಿಂಗಯ್ಯನವರು ತಮ್ಮ 'ಬೆಲ್ಜಿಯಹಾಡು' ಕವಿತೆಯಲ್ಲಿ ಇಂತಹ ಉತ್ಪ್ರೇಕ್ಷಾಲಂಕಾರವನ್ನು ಮೂಡಿಸಿದ್ದಾರೆ.

"ದೊಡ್ಡಗೌಡರ ಬಾಗಿಲಿಗೆ
ನಮ್ಮ ಮೂಳೆಯ ತ್ವಾರಣ
ನಮ್ಮ ಜನಗಳ ಕಾಲುಕಯ್ಯ
ಕಂಬ ಅವರ ಹಟ್ಟಿಗೆ
ಅವರ ತೋಟದ ತೆಂಗಿನಲ್ಲಿ
ನಮ್ಮ ರಕ್ತದ ಎಳನೀರು
ಅವರ ಅಮಲಿನ ಗುಂಗಿನಲ್ಲಿ
ಕೂಲಿ ಹೆಣ್ಣಿನ ಕಣ್ಣೀರು" ೨೦

ಈ ಬಗೆಯ ಸಾಲುಗಳಲ್ಲಿ ಸಿದ್ಧಲಿಂಗಯ್ಯನವರ ಯಶಸ್ಸು ಇದೆ. ಸೋಲು ಇದೆ. ಉತ್ಪ್ರೇಕ್ಷಾಲಂಕಾರ ತನ್ನ ತೀವ್ರತೆಯ ತುದಿಯಲ್ಲಿ ಅಸಾಮಾನ್ಯವಾದ ರೂಪಕಶಕ್ತಿಯನ್ನು ಸಾಧಿಸಬಹುದು. ಇಲ್ಲವೇ ಅದೊಂದು ಚಮತ್ಕಾರ ಅಥವಾ ಕವಿಸಮಯ ಆಗಿ ಪರಿವರ್ತನೆಯಾಗಬಹುದು. ಆಗ ಪ್ರತಿಮೆಗಳ ನಿರೀಕ್ಷಿತ ಹೊಂದಾಣಿಕೆ ಎದ್ದು ಕಾಣುತ್ತದೆ. ಸಿದ್ಧಲಿಂಗಯ್ಯನವರ ಮೂಲ ಪ್ರತಿಭೆಯಲ್ಲಿ ಇಂದಿಗೂ ಇರುವ ಮೂಲ ಗ್ರಹಿಕೆಯ ಗುಣಗಳಿವೆ.

ಪ್ರಾಸ, ಲಯ, ಗೇಯತೆ ಹಾಗೂ ದೇಸೀ ಛಂದಸ್ಸಾದ ತ್ರಿಪದಿಯು ಇವರ ಕಾವ್ಯದಲ್ಲಿ ಸಮರ್ಥವಾಗಿ ಬಳಕೆಯಾಗಿದೆ. ಅಭಿವ್ಯಕ್ತಿಯ ನೆಲೆಯಲ್ಲಿ ಪ್ರಾರಂಭದಲ್ಲಿ ಇವರ ಕಾವ್ಯದಲ್ಲಿ ಎರಡು ಮುಖಗಳನ್ನು ಅಥವಾ ಎರಡು ಬಗೆಯ ರೂಪಗಳನ್ನು ಕಾಣಬಹುದು. ಇದನ್ನು ಸ್ಥೂಲವಾಗಿ ಸ್ವಭಾವೋಕ್ತಿ ಮತ್ತು ವಕ್ರೋಕ್ತಿಗಳೆಂದು ಗುರುತಿಸಬಹುದು. ಸಿದ್ಧಲಿಂಗಯ್ಯನವರ ಕಾವ್ಯಗಳಲ್ಲಿ ವಾಚ್ಯತೆಯ ಜೊತೆಗೆ ವ್ಯಂಗ್ಯ, ವಿಡಂಬನೆಗಳು ಮೂಡಿಬಂದಿವೆ. ಕಾವ್ಯದ ಭಾಷಾ ಬಳಕೆಯಲ್ಲಿ ಪದಗಳ ವಿನ್ಯಾಸ ಹಾಗೂ ಅವುಗಳು ಹೊರಡಿಸುವ ಅರ್ಥ ಸಾಧ್ಯತೆಗಳನ್ನು ಗುರ್ತಿಸುವ ಸಂದರ್ಭದಲ್ಲಿ ಉಪಮೆಯನ್ನು ಕಾಣಬಹುದು. ಸಿದ್ಧಲಿಂಗಯ್ಯನವರು ತಮ್ಮ ಕವಿತೆಗಳಲ್ಲಿ ಪ್ರತಿಮೆ, ಉಪಮೆಗಳನ್ನು ಪ್ರಜ್ಞಾಪೂರ್ವಕವಾಗಿ ಬಳಸುವಲ್ಲಿ ಯಶಸ್ವಿಯಾಗಿದ್ದಾರೆ ಎಂಬುದಕ್ಕೆ 'ಸಾವಿರಾರುನದಿಗಳು' ಉತ್ತಮ ನಿದರ್ಶನವಾಗಿದೆ. ಭಾರತೀಯ ಕಾವ್ಯಮಿಮಾಂಶಕರು ಪ್ರತಿಪಾದಿಸಿರುವ 'ಪೂರ್ಣೋಪಮೆಯನ್ನು' ಈ ಕವಿತೆಯಲ್ಲಿ ತಂದಿರುವುದನ್ನು ಕಾಣಬಹುದು.

"ನೆನ್ನೆ ದಿನ
ನನ್ನ ಜನ
ಬೆಟ್ಟದಂತೆ ಬಂದರು" [೪೧]

ಎಂಬ ಈ ಕವಿತೆಯ ಸಾಲುಗಳಲ್ಲಿ 'ನನ್ನ ಜನ' ಉಪಮೇಯವಾಗಿದ್ದು 'ಬೆಟ್ಟ' ಉಪಮಾನವಾಗಿದೆ. ಹಾಗೆಯೇ ಅಂತೆ ಎಂಬುವುದು ಉಪಮಾ ವಾಚಕವಾಗಿದ್ದು 'ಬಂದರು' ಎಂಬುದು ಸಾಧಾರಣ ಧರ್ಮವಾಗಿದೆ. ಅಂದರೆ ಶೋಷಿತರ ಹೋರಾಟದ ಮೆರವಣಿಗೆಯ ಸಮೂಹವನ್ನು ಬೆಟ್ಟ, ನೀರು, ಹುಲಿ, ಸಿಂಹ, ನಾಗರಹಾವುಗಳಿಗೆ ಹೋಲಿಸಿದ್ದಾರೆ. 'ದಲಿತರು ಬರುವರು' ಎಂಬ ಕವಿತೆಯಲ್ಲಿ ದಲಿತರ ಪ್ರತಿಭಟನಾ ಮೆರವಣಿಗೆಯಲ್ಲಿ ರೂಪಕಾಲಂಕಾರದಲ್ಲಿ ಚಿತ್ರಿಸಿದ್ದಾರೆ.

"ಗುಡುಗು ಮಿಂಚಿನ ಘೋಷಣೆಯಲ್ಲಿ
ಭೂಕಂಪನ ಭಾಷೆಗಳಲ್ಲಿ
ಬಂತೊ ದಲಿತರ ಮೆರವಣಿಗೆ
ನೆಲಕೆ ಕಾಲುಗಳ ಬರವಣಿಗೆ
ಕ್ರಾಂತಿಯ ಕಿಡಿಗಳು ಕಣ್ಣುಗಳಲ್ಲಿ
ಸಿಡಿದರೂ ಕೆಂಡದ ಬಂಡೆಗಳು" [೪೨]

'ಕಂಡೆನನ್ನವಳ ಒಂದುದಿವಸ' ಕವಿತೆಯು, ಏಕ ಪ್ರತಿಮೆಯಲ್ಲೆ ಅನಂತ ಪ್ರತಿಮೆಯನ್ನು ಕಟ್ಟಿಕೊಡುವ ಕವಿತೆಯಾಗಿದೆ. ಈ ಕವಿತೆಯಲ್ಲಿ ಪ್ರತಿಮೆಯಾಗಿ ಬಳಕೆಯಾಗಿರುವ 'ನನ್ನವಳನ್ನು'

ನಿರೂಪಕನ ಪ್ರೇಯಸಿಯಾಗಿ ದಲಿತ ಮಹಿಳೆಯಾಗಿ ಭಾರತದ ಸ್ವಾತಂತ್ರ್ಯವನ್ನು ಹೆಣ್ಣಿನ ರೂಪವಾಗಿ ಭಿನ್ನರೀತಿಯಲ್ಲಿ ಅರ್ಥೈಸಿಕೊಳ್ಳಬಹುದಾಗಿದೆ. ಜೊತೆಗೆ ಒಂದು ಹೆಣ್ಣಿನ ಮೇಲೆ ನಡೆಯುವ ಅತ್ಯಾಚಾರವನ್ನು ಕವಿ ಪ್ರತಿಮಾತ್ಮಕವಾಗಿ ಹಿಡಿದಿಟ್ಟಿದ್ದಾರೆ. 'ಅಲ್ಲೆ ಕುಂತ್ತವರೆ' ಖಂಡ ಕಾವ್ಯದಲ್ಲಿ ಯುವಕನೊಬ್ಬನ ಮೇಲೆ ನಡೆಯುವ ಹತ್ಯಾಕಾಂಡವನ್ನು ಪ್ರತಿಮಾ ವಿಧಾನದ ಶೈಲಿಯಲ್ಲಿ ರಾಜಕೀಯ ವ್ಯವಸ್ಥೆ ಹೇಗೆ ಶೋಷಿತ ಸಮುದಾಯವನ್ನು ತುಳಿಯುತ್ತಿದೆ ಎಂಬುದನ್ನು ವಿವರಿಸಿದ್ದಾರೆ. 'ಸಂಪಿಗೆಯ ಮರದಲ್ಲಿ' ಕವಿತೆಯಲ್ಲಿ ಕವಿ ಇಡೀ ಭಾರತ ದೇಶವನ್ನು ಸಂಪಿಗೆ ಮರಕ್ಕೆ ಪ್ರತಿಮೀಕರಿಸಿ, ಇಲ್ಲಿನ ಸಾಮಾಜಿಕ, ರಾಜಕೀಯ ವಲಯದ ಭೀಕರತೆಯನ್ನು ವಿವರಿಸಿದ್ದಾರೆ. 'ಒಂದು ದನದ ಪದ' ಕವಿತೆಯಲ್ಲಿ ಕವಿ 'ದನ'ದ ಮೇಲೆ ನಡೆಯು ದೌರ್ಜನ್ಯವನ್ನು ಪ್ರತಿಮೆಯಾಗಿ ಬಳಸಿಕೊಂಡು ದಲಿತರ ಮೇಲೆ ನಡೆಯುತ್ತಿರುವ ಶೋಷಣೆಯನ್ನು ಧ್ವನಿಪೂರ್ಣವಾಗಿ ಚಿತ್ರಿಸಿದ್ದಾರೆ.

'ಬೆಲ್ಜಿಯಹಾಡು' ಕವಿತೆಯಲ್ಲಿ ಕವಿಯ ಅಸಹಜವಾದ ಉಪಮೆ, ರೂಪಕಾದಿಗಳನ್ನು ಕಟ್ಟಿಕೊಡುತ್ತಲೆ, ದಲಿತರ ಬದುಕಿನ ಶೋಷಣೆಯ ತೀವ್ರತೆ ಹಾಗೂ ಕ್ರೂರತೆಯನ್ನು ಉತ್ಪ್ರೇಕ್ಷಾಲಂಕಾರದಲ್ಲಿ ಹಿಡಿದಿಟ್ಟಿದ್ದಾರೆ. 'ಮಸಣದ ಚಲುವೆಗೆ' ಕವಿತೆಯಲ್ಲಿ ಕ್ರಾಂತಿ ಸ್ಮಶಾನವನ್ನು ಕವಿ ತನ್ನ ಪ್ರೇಯಸಿಯರನ್ನಾಗಿ ಪ್ರತಿಮೀಕರಿಸಿಕೊಂಡು ರಚಿಸಿದ್ದಾರೆ. 'ರಾಣಿಯ ಪ್ರೇಮ' ಕವಿತೆಯಲ್ಲಿ ಮೇಲ್ವರ್ಗದವರೊಟ್ಟಿಗೆ ಕೆಳವರ್ಗದವರ ಸಂಬಂಧ ಎಷ್ಟು ಅಪಾಯಕಾರಿಯಾದದ್ದು ಎಂಬುದನ್ನು ಕೊಕ್ಕರೆ, ಮೀನು, ಅರಮನೆ – ಗುಡಿಸಲಿನ ಉಪಮೇಯ ಮೂಲಕ ಚಿತ್ರಿಸಿದ್ದಾರೆ. ಸಿದ್ಧಲಿಂಗಯ್ಯನವರ ಕಾವ್ಯವನ್ನು ಒಟ್ಟಾರೆ ಪರಿಗಣಿಸಿದಾಗ ನಾವು ನಿರೀಕ್ಷಿಸುವಂತೆಯೇ ಅನೇಕ ಪ್ರತಿಮೆ – ಸಂಕೇತಗಳು ಅವರ ಕಾವ್ಯದಲ್ಲಿ ಪುನರಾವರ್ತನೆಗೊಳ್ಳುತ್ತವೆ. ಇವರ ಹೆಚ್ಚಿನ ಕವಿತೆಗಳಲ್ಲಿ ಲಯಗಾರಿಕೆ ಹಾಗೂ ಗೇಯತೆ ಅಂಶಗಳು ಒಟ್ಟಿಗೆ ಮೈದಾಳಿವೆ. ಗೇಯತೆಯ ಗುಣಗಳಿಂದಾಗಿ ಅನೇಕ ಕವಿತೆಗಳು ಹಾಡುಗಳಾಗಿ ಪರಿಣಮಿಸಿವೆ.

ಉದಾಹರಣೆಗೆ ಹೇಳುವುದಾದರೆ ಗೇಯತೆಯ ಮೂಲಕ ಚಲನಚಿತ್ರಗೀತೆಯಾಗಿಯೂ ಇವರ ಕವಿತೆಗಳು ಪ್ರಸಿದ್ಧಿಯಾಗಿವೆ. 'ಸುಟ್ಟಾವು ಬೆಳ್ಳಿ ಕಿರಣ ಎಂಬ ಕವಿತೆಯ

"ಆ ಬೆಟ್ಟದಲ್ಲಿ ಬೆಳದಿಂಗಳಲ್ಲಿ
ಸುಳಿದಾಡಬೇಡ ಗೆಳತಿ
ಚಲುವಾದ ನಿನ್ನ ಮಲ್ಲಿಗೆಯ ಮೈಯ
ಸುಟ್ಟಾವು ಬೆಳ್ಳಿ ಕಿರಣ"[೪೨]

ಈ ಸಾಲುಗಳಲ್ಲಿ ಗೇಯತೆ ಮತ್ತು ಅರ್ಥ ಎರಡೂ ಕೂಡ ಧ್ವನಿಸಿವೆ. ಸಿದ್ಧಲಿಂಗಯ್ಯನವರು ನವ್ಯ ಸಂಧರ್ಭದಲ್ಲಿ ಜನಸಾಮಾನ್ಯರಿಂದ ದೂರವಿದ್ದ ಕಾವ್ಯವನ್ನು ಜನಸಾಮಾನ್ಯರ ಹತ್ತಿರ ಕೊಂಡೊಯ್ದು

ಕಾವ್ಯವನ್ನು ಹಾಡಾಗಿಸುವಲ್ಲಿ ಶೋಷಿತ-ಶೋಷಕರ ಮನದಾಳದಲ್ಲಿ ಪರಿವರ್ತನೆಯ ಹೊಸಬೆಳಕನ್ನು ನೀಡುವಲ್ಲಿ ಯಶಸ್ವಿಯಾಗಿದ್ದಾರೆ.

ಸಿದ್ಧಲಿಂಗಯ್ಯನವರ ಕಾವ್ಯಗಳಲ್ಲಿ ಒಂದು ರೀತಿಯ ಮಿಂಚಿನಪ್ರಭೆ ಕಂಡು ಬರುತ್ತದೆ. ಅದಕ್ಕೆ ಕಾರಣ ಅವರು ಬಳಸಿರುವ ಭಾಷೆ ಮತ್ತು ಸಂವೇದನಾಶೀಲ ಅಭಿವ್ಯಕ್ತಿಯ ಕ್ರಮ. ಸಿದ್ಧಲಿಂಗಯ್ಯನವರು ತಾವು ಬೆಳೆದ ಪರಿಸರ ಹಾಗೂ ಸಮಕಾಲೀನ ಸಮಾಜದೊಟ್ಟಿಗೆ ಸೃಜನಾತ್ಮಕವಾದ ಸಂವೇದನಾಶೀಲ ಸಂಬಂಧವನ್ನು ಉಳಿಸಿಕೊಂಡವರು. ಒಟ್ಟು ಕಾವ್ಯಗಳಲ್ಲಿ ಇವರ ವ್ಯಯಕ್ತಿಕ ಬದುಕಿನ ಅನುಭವ ಹಾಗೂ ಸಾಮಾಜಿಕ ಬದುಕಿನ ಬಹುಸ್ತರಿಯ ನೆಲೆಗಳು ವಸ್ತುಗಳಾಗಿ ಅಭಿವ್ಯಕ್ತವಾಗಿವೆ. ಕಾವ್ಯ ಪರಂಪರೆಯಲ್ಲಿ ಕನ್ನಡ ಸಾಹಿತ್ಯ ಅದುವರೆಗೆ ಕಂಡರಿಯದ ಹೊಸ ಭಾಷಾಭಿವ್ಯಕ್ತಿಯ ಸತ್ವವನ್ನು ಇವರು ತಮ್ಮ 'ಹೊಲೆಮಾದಿಗರಹಾಡು' ಸಂಕಲನದ ಮೂಲಕ ಪರಿಚಯಿಸಿದರು. ನಿಜವಾದ ವಾಸ್ತವ ಬದುಕಿನ ನೆಲೆಗಳನ್ನು ಬೆಂಗಳೂರು ಗ್ರಾಮಾಂತರ ಪ್ರದೇಶದ ಸುತ್ತಮುತ್ತಲ ಮಾಗಡಿ, ಮಂಚಿನಬೆಲೆ ಜನಪದರ ಹಾಡುನುಡಿಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ದೇಶೀಯ ನೆಲೆಯ ಚಾಪನ್ನು ಮೈಗೂಡಿಸಿಕೊಂಡ ಇವರ ಕಾವ್ಯ ಭಾಷೆ ದಲಿತ ಸಮುದಾಯದ ಬದುಕಿನಾಳದ ನೋವು, ಸಂಕಟ, ಹತಾಶೆ, ರೋಷ, ಕೆಚ್ಚುಗಳನ್ನು ತೆರೆದಿಡುತ್ತದೆ.

ಕರ್ನಾಟಕದ ಮೂಲೆ ಮೂಲೆಯಲ್ಲೂ ಇವರ ಹಾಡುಗಳು ಜನಪ್ರಿಯವಾದದ್ದು ಇವರ ಕಾವ್ಯ ಭಾಷೆಗೆ ಸಾಕ್ಷಿಯಾಗಿದೆ. ದಲಿತ ಸಾಹಿತ್ಯದ ಪರಿಭಾಷೆ ದಲಿತ ಜನಾಂಗದ ಸಾಂಸ್ಕೃತಿಕ ಜನಜೀವನವನ್ನು ಪರಿಣಾಮಕಾರಿಯಾಗಿ ಬಿಂಬಿಸುತ್ತದೆ. ಈ ದೃಷ್ಟಿಯಿಂದ ಸಾಮಾಜಿಕ ಸಾಂಸ್ಕೃತಿಕ ನೆಲೆಯಲ್ಲಿಯೇ ಸಿದ್ಧಲಿಂಗಯ್ಯನವರ ಕಾವ್ಯಭಾಷೆಯನ್ನು ಗ್ರಹಿಸಿಕೊಳ್ಳಬೇಕಾಗಿದೆ. ಸಿದ್ಧಲಿಂಗಯ್ಯನವರು ತಮ್ಮ ಕಾವ್ಯದಲ್ಲಿ ಬಳಸಿರುವ ದಲಿತ ಸಮುದಾಯದ ನುಡಿಗಟ್ಟುಗಳು ಇಡೀ ಕವಿತೆಯ ಅರ್ಥವಂತಿಕೆಯನ್ನು ಹೊರಚಲ್ಲುವ ಸಾಮರ್ಥ್ಯವುಳ್ಳವಾಗಿವೆ. ಒಂದೊಂದು ಪದಸಮುಚ್ಚಯವು ತನ್ನ ಒಡಲಾಳದಿಂದ ಹುಟ್ಟಿದ ನೋವು, ಹತಾಸೆ, ಸಿಟ್ಟು ಸೆಡವು, ಶೋಷಣೆ ; ಪ್ರತಿಭಟನೆ, ನಿಂದನೆಗಳು ಶೋಷಿತನೊಬ್ಬನ ಎದೆಯಾಳದ ತಳಮಳವನ್ನು ಹಸಿಹಸಿಯಾಗಿ ತೆರೆದು ತೋರಿಸುತ್ತದೆ. 'ನನ್ನ ಜನಗಳು', 'ಒಂದು ಮೂಳೆಯ ಹಾಡು' ಕವಿತೆಗಳು ಇದಕ್ಕೆ ಸಾಕ್ಷಿಯಾಗಿವೆ. ನಿರ್ಜೀವ ವಸ್ತು ಮಾತಾಡುವ ಮೂಲಕ ಪ್ರತಿಭಟಿಸುವ ಶಕ್ತಿಯನ್ನು ಇವರ ಭಾಷೆ ಪಡೆದುಕೊಂಡಿದೆ. ಇವರ ಆರಂಭದ ಕವಿತೆಗಳಲ್ಲಿ ಬಳಸಲ್ಪಟ್ಟ ಪ್ರಾದೇಶಿಕ ಭಾಷೆ ಅನಂತರದ ಕವಿತೆಗಳಲ್ಲಿ ಕಂಡುಬರುವುದಿಲ್ಲ. ಸಾಮಾಜಿಕ ಸಮಸ್ಯೆಗಳ ನೇರ ಅಭಿವ್ಯಕ್ತಿಗೆ ಕವಿ ಹೆಚ್ಚು ಒತ್ತು ಕೊಟ್ಟಿದ್ದಾರೆ. ಹಾಗಾಗಿ ಸರಳವಾದ, ನೇರವಾದ ಗ್ರಾಂಥಿಕ ಭಾಷೆಯ ಬಳಕೆಯ ಮೂಲಕ ವಸ್ತುವಿಷಯವನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುವ ಕಡೆಗೆ ಹೆಚ್ಚು ಗಮನಹರಿಸದ್ದಾರೆ. ಭಾಷೆಯಲ್ಲಿ ವಾಸ್ತವ್ಯತೆ ಅಧಿಕವಾಗಿ ಕಂಡುಬಂದರೂ ಪ್ರಭಾವದ ದೃಷ್ಟಿಯಿಂದ ಮಹತ್ವದ್ದಾಗಿದೆ.

ಖಂಡಕಾವ್ಯದ ವಿಶೇಷತೆ:-

ಸಿದ್ಧಲಿಂಗಯ್ಯನವರು ರಚಿಸಿರುವ 'ಅಲ್ಲೆಕುಂತವರೆ' ಖಂಡಕಾವ್ಯವು ದಲಿತ ಸಾಹಿತ್ಯದ ಒಂದು ವಿಶಿಷ್ಟ ರಚನೆ ಎಂದು ಹೇಳಬಹುದು. ಹಾಡು ನಿರೂಪಣೆ ಕಥನಾತ್ಮಕ ಶೈಲಿ ಹಾಗೂ ನಾಟಕೀಯ ಸಂಭಾಷಣೆಯ ಮೂಲಕ ಸಾಗುವ ಈ ಕವಿತೆಯಲ್ಲಿ, ಅನುಭವದೊಟ್ಟಿಗೆ ಕವಿಯ ಸಂವೇದನಾಶೀಲ ಪ್ರಜ್ಞೆಯ ಮಹತ್ವದ ಅಭಿವೃದ್ಧಿಯನ್ನು ಪಡೆದುಕೊಂಡಿದೆ. ಓದುಗನಿಗೆ ನಿರೂಪಕನೊಬ್ಬ ಕಥೆ ಹೇಳುವ ರೀತಿಯಲ್ಲಿಯೇ ಶೋಷಿತನೊಬ್ಬನ ದುರಂತ ಬದುಕಿನ ಗಾಥೆಯನ್ನು ಹಂತಹಂತವಾಗಿ ತೆರೆದಿಡುತ್ತಾ ಹೋಗುತ್ತಾರೆ. ಬರಗಾಲದ ಬೇಗೆಯ ಬಡತನದ ಚಿತ್ರಣ ಹಾಗೂ ಕೆಳಸ್ತರದ ಸಮಾಜದ ಮೇಲಿನ ರಾಜಕೀಯ ಶೋಷಣೆಯ ಭೀಕರತೆಯನ್ನು ಕವಿ ಇಲ್ಲಿ ಕಾವ್ಯವಾಗಿಸಿದ್ದಾರೆ. 'ಅಲ್ಲೆಕುಂತವರೆ' ಎಂಬ ಕವಿತೆಯಲ್ಲಿನ ಶೀರ್ಷಿಕೆಯಲ್ಲಿ ಧ್ವನಿ ಇದೆ. ಇದು ಬಹುಶಃ ಕನ್ನಡದ ಅತ್ಯುತ್ತಮ ರಾಜಕೀಯ ಕವಿತೆ ಮತ್ತು ಇದು ತೌಲನಿಕವಾಗಿ ಕುವೆಂಪು ಅವರ 'ಕಲ್ಕಿ' ಜೊತೆಗಿಟ್ಟು ನೋಡುವಂತೆ ತನ್ನನ್ನು ತಾನೆ ಅಹ್ವಾನಿಸಿಕೊಳ್ಳುತ್ತದೆ. 'ಕಲ್ಕಿ' ಯಲ್ಲಿ ಕನಸಿನ ತಂತ್ರದ ಮೂಲಕ ಸಂಘರ್ಷದ ಮೂಲಕ ಸತ್ಯಗಳನ್ನು ಅದರ ಹಿಂಸಾರಭಸಮತಿಯನ್ನು ಶೋಧಿಸುವ ಪ್ರಯತ್ನವಿದ್ದರೆ 'ಅಲ್ಲೆಕುಂತವರೆ' ಕವಿತೆಯಲ್ಲಿ ದುಃಸ್ವಪ್ನಕ್ಕಿಂತ ಹೆಚ್ಚು ವಿಚಿತ್ರವಾದ ವಾಸ್ತವಲೋಕ ನಿರ್ಮಾಣವಾಗುತ್ತದೆ. 'ಕಲ್ಕಿ' ಕವಿತೆಯಲ್ಲಿ ಉದ್ದಕ್ಕೂ ಶಿಥಿಲತೆ ಎಲ್ಲೂ ಕಾಣದೆ ಕವಿತೆ ಬೆಳೆದರೆ 'ಅಲ್ಲೆಕುಂತವರೆ' ಕವಿತೆಯಲ್ಲಿ ಅಲ್ಲಲ್ಲಿ ಮೊದಲ ಭಾಗದಿಂದಲೇ ಶಿಥಿಲಭಾಗಗಳು ಕಂಡು ಬರುತ್ತವೆ. ಆದರೆ ಈ ಖಂಡಕಾವ್ಯ ನಿಧಾನವಾಗಿ ರಾಜಕೀಯ ಹಿಂಸೆಯ ರೂಪವನ್ನು ತಲಸ್ಪರ್ಶಿಯಾಗಿ ಶೋಧಿಸುತ್ತದೆ. ಕಲ್ಕಿಯಲ್ಲಿ ಕ್ರಾಂತಿಯ ಹಿಂಸಾ ಪ್ರವಾಹದ ಬಗ್ಗೆ ಗಮನವಿದ್ದರೆ 'ಅಲ್ಲೆಕುಂತವರೆ' ಯಲ್ಲಿ ಪ್ರಭುತ್ವದ ಹಿಂಸೆಯ ಬಗ್ಗೆ ಗಮನ ಇದೆ. ಹೊರಗೆ ಮಳೆ ಜೊರ್ರೋ ಎಂದು ಸುರಿಯುತ್ತಿರುತ್ತದೆ ಮಕ್ಕಳು ಆನೆಕಲ್ಲ ಆಯುವ ಆಟ ಆಡುತ್ತಾ ಕುಣಿಯುತ್ತಿದ್ದಾರೆ. ಈ ಕವಿತೆಯ ನಿರೂಪಕ ಸತ್ತು ಭೂತವಾಗುತ್ತಾನೆ ಸೆಕ್ಯುಲರ್ ರಾಜುಕೀಯ ಪ್ರತಿಭೆಗೆ ಸುಲಭವಾಗಿ ಸಾದ್ಯವಾಗದ ಕಾವ್ಯತಂತ್ರವನ್ನು ಈ ಖಂಡಕಾವ್ಯ ಬಳಸಿಕೊಳ್ಳುತ್ತದೆ. ರಾಜಕೀಯ ಹಿಂಸೆ ವಸ್ತುವಾದಾಗ ಅದನ್ನು ಸಮರ್ಥವಾಗಿ ಹಿಡಿಯಲು ಜಾನಪದೀಯ ಕವಿತಾತಂತ್ರ ಬಳಕೆಯಾಗುತ್ತದೆ. ತುರ್ತು ಪರಿಸ್ಥಿತಿಯಲ್ಲಿ ಬಂದ ಈ ಕವಿತೆ ಆಗಿನ ಭೀತಿಯ ಅವ್ಯಕ್ತ ಹಿಂಸೆಯ ವಾತಾವರಣವನ್ನು ವೃತ್ತಪತ್ರಿಕಾ ವರದಿಗಳ ಆಧಾರದ ಮೇಲೆಯೇ ಹಿಡಿಯುತ್ತದೆ. ಸಂಜಯಗಾಂಧಿಯ ಮರ ನೆಡುವ ಕಾರ್ಯಕ್ರಮವನ್ನು ಪ್ರತಿಮೆಯೊಂದರ ಮೂಲಕವೇ ಕವಿ ಚಿತ್ರಿಸುತ್ತಾರೆ.

ದಲಿತ ಸಾಹಿತ್ಯದ ಒಂದು ಬಗೆಯ ಧಾರೆಯ ಅತ್ಯತ್ತಮ ಸಾಧನೆಯನ್ನು 'ಅಲ್ಲೆಕುಂತವರೆ' ಖಂಡಕಾವ್ಯದಲ್ಲಿ ಕಾಣುತ್ತೇವೆ. ಅದು ಪರಂಪರೆಯನ್ನು ಹಿಂಸೆಯ ಪರಮರೂಪ ಎಂದು ಕಾಣುವ

ಧಾರೆಯ ಶಕ್ತಿಶಾಲಿ ಪ್ರತಿನಿಧೀಕರಣ. ದಲಿತಸಾಹಿತ್ಯದ ಇನ್ನೊಂದು ಲೋಕವನ್ನು ಅಂದರೆ ದಲಿತರ ಪಿತೃಪಿತಾಮಹ ಲೋಕದ ಪ್ರತಿರೂಪವಾಗಿ ಅಲ್ಲೆಕುಂತವರೆ ಮೂಡಿಬಂದಿದೆ. ದೇವನೂರು ಮಹದೇವ ಅವರ 'ಕುಸುಮಬಾಲೆ'ಯೊಡನೆಯೂ 'ಅಲ್ಲೆಕುಂತವರೆ' ಖಂಡಕಾವ್ಯವನ್ನು ಹೋಲಿಸಬಹುದು. ಕುಸುಮ ಬಾಲೆಯಲ್ಲಿ ಚೆನ್ನನ ಕೊಲೆಯ ಕುರುಹು ಕೂಡ ಸಿಗದ ರೀತಿಯಲ್ಲಿ ನಿಗಾವಹಿಸಲಾಗಿದೆ. ಹಾಗೆಯೇ ಈ ಖಂಡಕಾವ್ಯದಲ್ಲಿಯೂ ನಿರೂಪಕನನ್ನು ಕೊಂದ ಜಾಗದಲ್ಲಿಯೇ ಪ್ರಭುತ್ವಶಕ್ತಿಗಳು ಸಮಾರಂಭವನ್ನು ಏರ್ಪಡಿಸುತ್ತವೆ. ಅಂದರೆ ವ್ಯವಸ್ಥೆ ಶೋಷಿತರನ್ನು ಕೊಲ್ಲುತಲೇ ಹೇಗೆ ಆ ಎಲ್ಲಾ ಅಪರಾಧಗಳನ್ನು ಸಮರ್ಥಿಸಿಕೊಳ್ಳುತ್ತಿವೆ ಎಂಬುದನ್ನು ಅರ್ಥೈಸುತ್ತದೆ. ಸಿದ್ಧಲಿಂಗಯ್ಯನವರ 'ಅಲ್ಲೆಕುಂತವರೆ' ದೇವನೂರು ಮಹದೇವ ಅವರ 'ಕುಸುಮಬಾಲೆ', ಕೆ.ಬಿ.ಸಿದ್ದಯ್ಯ ಅವರ 'ಬಕಾಲ' ದಲಿತ ಸಂವೇದನೆಯಲ್ಲಿ ಶೋಧಿತವಾಗಿ ಬಂದಿರುವ ಮಹತ್ವದ ಚಿಂತನ ಕೃತಿಗಳು. ಆಕ್ರೋಶ, ಉದ್ವೇಗ, ಸಿಟ್ಟು-ಸೆಡವುಗಳನ್ನು ಅರ್ಥಪೂರ್ಣ ಶೋಧಕ್ಕೆ ಹಚ್ಚುವುದರಿಂದ ಎಂತಹ ವ್ಯಾಪಕ ಅರ್ಥವಲಯಗಳನ್ನು ಸೃಷ್ಟಿಸಬಹುದು ಎಂಬುದಕ್ಕೆ ಇಂತಹ ಕೃತಿಗಳು ಜೀವಂತ ಪುರಾವೆಯಾಗಿವೆ. ದಲಿತ ಸಂವೇದನೆಯ ಎಲ್ಲ ಗುಣಗಳನ್ನು ಅಂದರೆ ನೆಲದ ಸತ್ವವನ್ನು ಜೀವದ ಗುಣವನ್ನು ಸಂಸ್ಕೃತಿಯ ಸಾತತ್ಯವನ್ನು ಒಗ್ಗೂಡಿದ ಅಭಿವ್ಯಕ್ತಿಯಾಗಿಸುವ ಇಂತಹ ಸಾಧನೆಗಳು ಸಾಹಿತ್ಯದ ಶ್ರೇಷ್ಠತೆಯಾಗಿ ಉಳಿಯುತ್ತವೆ ಎಂಬ ಡಿ. ಆರ್. ನಾಗರಾಜ್ ಅವರ ಅಭಿಪ್ರಾಯ ಅರ್ಥಪೂರ್ಣವೆನಿಸುತ್ತದೆ.

ಒಟ್ಟಾರೆ ಎಪ್ಪತ್ತರದಶಕದ ಕನ್ನಡ ಕಾವ್ಯ ಪರಂಪರೆಗೆ ಸಿದ್ಧಲಿಂಗಯ್ಯನವರ ಕಾವ್ಯ ವಿಶಿಷ್ಟ ಕೊಡುಗೆಯಾಗಿದೆ. ಶೋಷಿತರ ಬದುಕಿನ ವ್ಯಾಖ್ಯಾನವಾಗಿ, ಶೋಷಿತರ ವ್ಯವಸ್ಥೆಯ ವಿರುದ್ಧ ಪ್ರತಿಭಟನೆಯ ಅಸ್ತ್ರವಾಗಿ; ಪ್ರೀತಿ, ಪ್ರೇಮ ಹಾಗೂ ಸಾಮರಸ್ಯದ ಸಮಸಮಾಜದ ಹಂಬಲವಾಗಿ ಇವರ ಕಾವ್ಯ ಮೂಡಿಬಂದಿದೆ. ಕವಿತೆಯಲ್ಲಿನ ಗ್ರಹಿಕೆ, ಆಲೋಚನೆ, ಅಭಿವ್ಯಕ್ತಿಯಲ್ಲಿನ ಹಂತಹಂತದ ಬೆಳವಣಿಗೆಯನ್ನು ಅನಾವರಣಗೊಳಿಸುತ್ತಲೇ ಕವಿಯ ಒಟ್ಟು ವ್ಯಕ್ತಿತ್ವವನ್ನು ಅರ್ಥೈಸುತ್ತದೆ.

ಸಿದ್ಧಲಿಂಗಯ್ಯನವರ 'ಅಲ್ಲೆಕುಂತವರೆ' ಖಂಡಕಾವ್ಯವು ದಲಿತಕಾವ್ಯದ ಸಂದರ್ಭದಲ್ಲಿ ಹೊಸ ಭರವಸೆಯನ್ನು ಮೂಡಿಸಿದ ಕವಿತೆಯಾಗಿದೆ. ಹಾಡು, ನಿರೂಪಣೆ, ಕಥನಾತ್ಮಕಶೈಲಿ ಹಾಗೂ ನಾಟಕೀಯ ಸಂಭಾಷಣೆಯ ಮೂಲಕ ಸಾಗುವ ಈ ಕವಿತೆಯಲ್ಲಿ ಅನುಭವದೊಟ್ಟಿಗಿನ ಕವಿಯ ಸಂವೇದನಾಶೀಲ ಪ್ರಜ್ಞೆಯು ಮಹತ್ವದ ಅಭಿವ್ಯಕ್ತಿಯನ್ನು ಪಡೆದುಕೊಂಡಿದೆ, ಕವಿಯು, ಓದುಗರಿಗೆ ಕಥೆ ಹೇಳುವ ರೀತಿಯಲ್ಲಿ ಶೋಷಿತನೊಬ್ಬನ ದುರಂತ ಬದುಕಿನ ಗಾಥೆಯನ್ನು ಹಂತಹಂತವಾಗಿ ತೆರೆದಿಡುತ್ತಾ ಹೋಗುತ್ತಾರೆ. ಬರಗಾಲದ ಬೇಗೆಯ ಬಡತನದ ಚಿತ್ರಣ ಹಾಗೂ ಕೆಳಸ್ಥರದ ಸಮಾಜದ ಮೇಲಿನ ರಾಜಕೀಯ ಶೋಷಣೆಯ ಭೀಕರತೆಯನ್ನು ಕವಿ ಇಲ್ಲಿ ಕಾವ್ಯವಾಗಿಸಿದ್ದಾರೆ. ಖಾಸಗಿ ವ್ಯಕ್ತಿತ್ವದ ಆಲೋಚನೆಗಳು ಸಾಮಾಜಿಕ ಬದುಕಿನ ಹಲವು ವಾಸ್ತವಗಳನ್ನು ಬಿಂಬಿಸುತ್ತವೆ

ಎಂಬುದು ಕವಿಯ ಪ್ರಜ್ಞೆಯಾಗಿದೆ. ದಲಿತ ಸಾಹಿತ್ಯದ ಒಂದು ಬಗೆಯ ಅತ್ಯುತ್ತಮ ಸಾಧನೆಯನ್ನು 'ಅಲ್ಲೆಕುಂತವರೆ' ಖಂಡಕಾವ್ಯದಲ್ಲಿ ಕಾಣುತ್ತೇವೆ. ಅದು ಪರಂಪರೆಯನ್ನು ಹಿಂಸೆಯ ಪರಮರೂಪ ಎಂದು ಕಾಣುವ ಧಾರೆಯ ಶಕ್ತಿಶಾಲಿ ಪ್ರತಿನಿಧಿಕರಣ ಎಂಬ ಡಿ. ಆರ್. ನಾರಗಾರಜ್ ಅವರ ಅಭಿಪ್ರಾಯ ಈ ಕವಿತೆಯ ಆಂತರ್ಯದ ಸತ್ವವನ್ನು ಪರಿಚಯಿಸುತ್ತದೆ.

ಬರಗಾಲದ ತೀವ್ರತೆಯನ್ನು ಅದರ ಬಡಿತಕ್ಕೆ ಸಿಕ್ಕ ಜನತೆಯ ಸ್ಥಿತಿಗತಿಗಳನ್ನು ಕವಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಇದು ರಂಗಭೂಮಿಯಲ್ಲಿ ಯಶಸ್ವಿಯಾಗಿ ಪ್ರದರ್ಶವಾಗಿದೆ.

'ಅಲ್ಲೆಕುಂತವರೆ' ಕಾವ್ಯವು ಎರಡು ಬಗೆಯ ಭೀಕರ ಸನ್ನಿವೇಶಗಳನ್ನು ಚಿತ್ರಿಸುತ್ತದೆ. ಈವರೆಗೆ ಚರ್ಚಿಸಲಾದ ಕವಿತೆಯಸಾರವು ಅಂದರೆ,

"ಈ ಬಾಳಿನ ಗೋಳನ್ನೆಲ್ಲ
ಗುಡಿಸು ಬಾರೋ ಮಳೆಕಾಯ

ಎದೆಗಳ ಕಡಲು ಬತ್ತೋದೊ
ಬಡವರ ಕಣ್ಣಲ್ಲಿ ನೀರಿಲ್ಲ
ಹುಯ್ಯೋ ಹುಯ್ಯೋ ಮಳೆರಾಯ"[48]

ಎಂಬುದು ಕವಿತೆಯ ಮೊದಲರ್ಧ ಭಾಗವಾಗಿದ್ದು ಬರಗಾಲದ ಸ್ಥಿತಿಯನ್ನು ಕುರಿತದ್ದಾಗಿದೆ. ಎರಡನೆ ಬಾಗದಲ್ಲಿ ಸ್ವಾತಂತ್ರ್ಯ ನಂತರದ ಪತಿಗಾಮಿ ರಾಜಕೀಯ ವ್ಯವಸ್ಥೆಯು ಕೆಳಸ್ತರದ ಸಮುದಾಯ ಮೇಲೆ ಎಸಗುತ್ತಿರುವ ದೌರ್ಜನ್ಯದ ಪ್ರತಿಮಾತ್ಮಕ ಚಿತ್ರಣವಾಗಿದೆ. ಸಿದ್ಧಲಿಂಗಯ್ಯನವರ ಸಮಾಜಮುಖಿ ಕಾವ್ಯಚಿಂತನೆಯ ಪ್ರತಿಭೆಗೆ 'ಅಲ್ಲೆಕುಂತವರೆ' ಉತ್ತಮ ಉದಾಹರಣೆಯಾಗಿದೆ. ಕವಿತೆಯಲ್ಲಿ ಬರುವ ನಿರೂಪಕನ ಮೇಲೆ ನಾಲ್ಕು ಜನ ರಾಜಕೀಯ ಗೂಂಡಾಗಳು ನಡೆಸುವ ಅಮಾನವೀಯವಾದ ಹಿಂಸೆ ಎಂಥವರನ್ನು ಕ್ಷಣಕಾಲ ಬೆಚ್ಚಿಬೀಳಿಸುತ್ತದೆ. ತನ್ನ ವೇಳೆ ನಡೆಯುವ ದೌರ್ಜನ್ಯವನ್ನು ನಿರೂಪಕ ಹೀಗೆ ನಿವೇದಿಸಿಕೊಂಡಿದ್ದಾನೆ.

"ಕಾಲೂನ ಬೂಟ್ನ ಬಾಯಿಗೆ ತುರ್ಕಿ
ನೆಕ್ಕೊದ್ ಕಲ್ತ್ಕೋ ಅಂತಾ ಅವ್ರೆ"[49]

ನಿರೂಪಕನನ್ನು ಕೊಲ್ಲಲು ಎಳೆದೊಯ್ಯುವಾಗಲೂ ಬೀದಿಯಲ್ಲಿ ಆಡುತ್ತಿದ್ದ ಹುಡುಗರು ನಿರೂಪಕನ ನೆರವಿಗೆ ಬಾರದೇ ಇರುವ ಸ್ಥಿತಿಯು ಒಂದು ಚಳುವಳಿಯ ಹಾಗೂ ಅಸಂಘಟಿತ ಶೋಷಿತ ಸಮುದಾಯದ ದುರಂತವನ್ನು ತೆರೆದಿಡುತ್ತದೆ. "ಏನಿದೇನು ಚೀರಾಟ ಏನಿದೇನು

ಹೋರಾಟ" ಎನ್ನು ಸಾಲುಗಳು ಒಂದು ಇಡೀ ಚಳುವಳಿಯು ಮಾಡಿಕೊಳ್ಳುವ ಆತ್ಮವಿಮರ್ಶೆಯ ಅಯಾಮವನ್ನು ಪಡೆದಿದೆ. ಏಕೆಂದರೆ ಕೈಯಲ್ಲಿ ಬಾವಿತೋಡಿ, ಬಾವಿಯಲ್ಲಿ ನೀರು ಬಂದಿದೆಯೆ ಎಂದು ನೋಡುವ ಪ್ರಯತ್ನಗಳ ಹುಸಿ ಆತ್ಮವಿಶ್ವಾಸದಲ್ಲಿಯೇ ಒಂದು ದುರಂತ ಅಡಗಿದೆ. 'ಅಲ್ಲೆಕುಂತವರೆ' ಎಂಬ ಕಾವ್ಯದ ಶೀರ್ಷಿಕೆಯಲ್ಲಿ ಧ್ವನಿ ಇದೆ. ಈ ಮಾತು ತಮ್ಮ ಮೂಲ ವ್ಯಕ್ತಿತ್ವವನ್ನು ಬದಲಾಯಿಸಿಕೊಳ್ಳದೆ, ಇಡೀ ಮನುಷ್ಯವನ್ನೇ ಕಳೆದು ಕೊಂಡಿರುವ 'ಶೋಷಕರ' ಹಾಗೂ 'ಶೋಷಣೆಯನ್ನು' ಒಪ್ಪಿಕೊಂಡು ಬದುಕುತ್ತಿರುವ 'ಶೋಷಿತ' ಇಬ್ಬರನ್ನು ಕುರಿತಾಗಿದೆ. ಅಂದರೆ ಶೋಷಕ ತನ್ನ ಅಮಾನವೀಯ ನಡವಳಿಕೆಯನ್ನು ಬದಲಾಯಿಸಿಕೊಳ್ಳಲಾಗಿದೆ. ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳದೆ ಶೋಷಕನಾಗಿ ಉಳಿದಿರುವುದು ಜೊತೆಗೆ ಶೀಷಿತ ತನ್ನ ಅಜ್ಞಾನವನ್ನು ಕಳಚಿ, ಶೋಷಣೆಯನ್ನು ಪ್ರತಿಭಟಿಸಿ ಮನುಷ್ಯನಾಗಲು ಪ್ರಯತ್ನಿಸದೆ ಶೋಷಣೆಯನ್ನು ಒಪ್ಪಿಕೊಂಡು ಬದುಕುತ್ತಿರುವ ಇವರಿಬ್ಬರನ್ನು ಕಂಡ ಕವಿ 'ಅಲ್ಲೆಕುಂತವರೆ' ಎಂದು ಹೇಳಿದ್ದಾರೆ. ಈ ಮಾತು ಅಕ್ಷರಸಃ ಸತ್ಯವಾಗಿದ್ದು ಬದಲಾಗದ ಭಾರತದ ಸಾಮಾಜಿಕ ವ್ಯವಸ್ಥೆಯನ್ನು ಬಿಂಬಿಸುತ್ತದೆ. ಅಸಹಾಯಕತೆ ಮತ್ತು ವಿಷಾದಗಳಲ್ಲಿ ಅದ್ದಿ ತೆಗೆದಿರುವ ಈ ಕವಿತೆಯಲ್ಲಿನ ಅನುಭವ ಜಗತ್ತು ಹಿಂಸೆಗೆ ಗುರಿಯಾದವರ ಸ್ಥಿತಿಯನ್ನು ಅದು ಇರುವ ಹಾಗೆಯೇ ಭಾಷೆಯಲ್ಲಿ ಮರುಮೂಡಿಸುವ ಬದಲು, ಸಾಹಿತ್ಯಕವಾದ ರೂಪಕಗಳು ಮತ್ತು ನಾಟಕೀಯತೆಯನ್ನು ಮೈಗೂಡಿಸಿಕೊಂಡ ಕಥಾನಕದ ಘಟನೆಗಳ ಮೂಲಕ ಕಟ್ಟಿಕೊಡುತ್ತದೆ. ಕವಿತೆಯ ರಚನೆಯಲ್ಲಿ ಗೀತೆಯ ಮಾತುಗಳ ಸಂಯೋಜನೆ, ಪರಿಣಾಮಕಾರಿಯಾದ ದೃಶ್ಯಚಿತ್ರಣಗಳ ಅಳವಡಿಕೆ ಮುಂತಾದ ಸಂಗತಿಗಳು ಈ ಕವಿತೆಯನ್ನು ಸಿದ್ಧಲಿಂಗಯ್ಯನವರ ಕಾವ್ಯದಲ್ಲಿ ಮಾತ್ರವಲ್ಲ ಒಟ್ಟು ಕನ್ನಡ ಸಂದರ್ಭದಲ್ಲಿಯೇ ಅಪರೂಪವಾಗಿಸಿದೆ.

ಡಿ.ಆರ್. ನಾಗರಾಜ್ ಮತ್ತು ಎಸ್.ಎಸ್. ರಾಘವೇಂದ್ರರಾವ್ ಅವರು 'ಅಲ್ಲೆಕುಂತವರೆ' ಖಂಡಕಾವ್ಯವನ್ನು ಕುವೆಂಪು ಅವರ ;ಕಲ್ಕಿ' ಕಾವ್ಯಕ್ಕೂ, ದೇವನೂರು ಮಹಾದೇವ ಅವರ 'ಕುಸುಮಬಾಲೆ' ಕಾದಂಬರಿಯೊಟ್ಟಿಗೆ ಹೋಲಿಸಿ ಚರ್ಚೆಗೊಳಪಡಿಸಿದ್ದಾರೆ. ಕಲ್ಕಿ ಕವಿತೆಯಲ್ಲಿ ಶೋಷಿತರ ಶಕ್ತಿ ಬೃಹದಾಕಾರವಾಗಿ ಬೆಳೆದು ಶೋಷಕ ವ್ಯವಸ್ಥೆಯ ಮೇಲೆ ತನ್ನ ಕೆನ್ನಾಲಿಗೆಯನ್ನು ಚಾಚಿದರೆ, ಅಲ್ಲೆಕುಂತವರೆ ಕಾವ್ಯದಲ್ಲಿ ಶೋಷಕವ್ಯವಸ್ಥೆ ಶೋಷಿತ ಸಮುದಾಯದ ಮೇಲೆ ನಡೆಸುವ ಕ್ರೂರತನದ ಹಿಂಸಾ ಪ್ರವೃತ್ತಿಯ ಚಿತ್ರಣವಿದೆ. ವಾಸ್ತವ ಸಮಾಜದ ನೆಲೆಯಲ್ಲಿ 'ಕಲ್ಕಿ' ಮತ್ತು 'ಅಲ್ಲೆಕುಂತವರೆ' ಕಾವ್ಯಗಳನ್ನು ಅವಲೋಕಿಸಿದರೆ ಕಲ್ಕಿ ಕವಿತೆಯಲ್ಲಿ ಭ್ರಮಾತ್ಮಕ ಪರಿಕಲ್ಪನೆ ಇದ್ದರೆ, ಅಲ್ಲೆಕುಂತವರೆ ಓದುಗರ ಕಣ್ಣೆದುರು ವಾಸ್ತವತೆಯ ಭೀಕರತೆಯನ್ನು ಕಡೆದು ನಿಲ್ಲಿಸುತ್ತದೆ. 'ಕಲ್ಕಿ'ಯಲ್ಲಿ ಕ್ರಾಂತಿಯ ಹಿಂಸಾ ಪ್ರವಾಹದ ಬಗ್ಗೆ ಗಮನವಿದ್ದರೆ 'ಅಲ್ಲೆಕುಂತವರೆ' ಯಲ್ಲಿ ಪ್ರಭುತ್ವದ ಹಿಂಸೆಯ ಬಗ್ಗೆ ಗಮನ ಇದೆ.

ಒಟ್ಟಾರೆ ಖಂಡಕಾವ್ಯವು ಶೋಷಕ ವ್ಯವಸ್ಥೆಯ 'ಭೀಕರತೆ' ಹಾಗೂ ಶೋಷಿತ ಸಮುದಾಯದ 'ಹತಾಶ' ಮುಖಗಳನ್ನು ವಸ್ತುನಿಷ್ಟವಾಗಿ ಹಿಡಿದಿಟ್ಟಿರುವ ಸತ್ಯಪೂರ್ಣ ಕಾವ್ಯವಾಗಿದೆ. ಪ್ರಸ್ತುತ ಭಾರತೀಯ ಸಾಮಾಜಿಕ ಸಂದರ್ಭದ ವಸ್ತು ನಿಷ್ಟವಾಗಿ ಹಿಡಿದಿಟ್ಟಿರುವ ಸತ್ಯಪೂರ್ಣಕಾವ್ಯವಾಗಿದೆ. ಪ್ರಸ್ತುತ ಭಾರತೀಯ ಸಾಮಾಜಿಕ ಸಂದರ್ಭದ ವಸ್ತುಸ್ಥಿತಿ ಈ ಕಾವ್ಯದ ವಿವರಕ್ಕಿಂತ ಭಿನ್ನವಾಗಿಲ್ಲ ಎಂಬುದು ನಿರೂಪಕನ ಮೂಲಕ ತಿಳಿಯುತ್ತದೆ.

ಕಿ. ರಂ. ನಾಗರಾಜ್ ಅವರು ಹೇಳುವಂತೆ “ಸಿದ್ಧಲಿಂಗಯ್ಯನವರ' 'ಅಲ್ಲೆಕುಂತವರೆ' ದಲಿತಸಂವೇದನೆಯಲ್ಲಿ ಶೋಧಿತವಾಗಿ ಬಂದಿರುವ ಮಹತ್ವದ ಕೃತಿ. ದಲಿತ ಸಾಹಿತ್ಯ ಸಂವೇದನೆ ಎಂದರೆ ಅದೊಂದು ಬಾವನಿರ್ಭರತೆಯ ಹಳಹಳಿಕೆ ಮಾತ್ರ ಅಲ್ಲ ಎಂಬುದು ಇಲ್ಲಿ ವಿದಿತವಾಗುತ್ತದೆ.”[1] ಆಕ್ರೋಶ, ಉದ್ರೇಕ, ಸಿಟ್ಟು, ಸೆಡವುಗಳನ್ನು ಅರ್ಥಪೂರ್ಣ ಶೋದಕ್ಕೆ ಹಚ್ಚುವುದರಿಂದ ಎಂಥ ವ್ಯಾಪಕ ಅರ್ಥವಲಯಗಳನ್ನು ಏರಬಹುದೆಂಬುದಕ್ಕೆ ಇಂಥಹ ಕೃತಿಗಳು ಜೀವಂತ ಸಾಕ್ಷಿಯಾಗಿವೆ. ದಲಿತ ಸಂವೇದನೆಯ ಎಲ್ಲಾ ಗುಣಗಳನ್ನು ಎಂದರೆ ನೆಲದ ಸತ್ವವನ್ನು ಜೀವದ ಗುಣವನ್ನು ಸಂಸ್ಕೃತಿಯ ಸಾಹಿತ್ಯವನ್ನು ಅಭಿವ್ಯಕ್ತಿಯಾಗಿಸುವ ಇಂಥ ಸಾಧನೆಗಳು ಯಾವುದೇ ಭಾಷೆಯ ಸಾಹಿತ್ಯದ ಶ್ರೇಷ್ಟತೆಯ ನಿಜವಾದ ಕುರುಹುಗಳು.

ಅಧ್ಯಾಯ – ೪

ಸಿದ್ಧಲಿಂಗಯ್ಯನವರ ನಾಟಕಗಳಲ್ಲಿ ದಲಿತಸಂವೇದನೆ

ಕನ್ನಡ ಸಾಹಿತ್ಯ ಚರಿತ್ರಯನ್ನು ಅವಲೋಕಿಸಿದಾಗ ಕನ್ನಡದಲ್ಲಿ ನಾಟಕಗಳು ಹಿಂದಿನಿಂದಲೂ ರಚನೆಯಾಗಿದ್ದರೂ ಕೂಡ ಪ್ರದರ್ಶನಗೊಂಡಿದ್ದು ಇತ್ತೀಚೆಗೆ. ಪಾರ್ಸಿನಾಟಕಗಳ ಪ್ರಭಾವ ಮತ್ತು ಪ್ರೇರಣೆಯಿಂದಾಗಿ ಕನ್ನಡದಲ್ಲೂ ನಾಟಕಗಳ ರಚನೆ ಮತ್ತು ಪ್ರದರ್ಶನ ಪ್ರಾರಂಭವಾಯಿತೆಂದು ಹೇಳಬಹುದು. ಅನಂತರ ಸಂಸ್ಕೃತಿ ನಾಟಕಗಳ ದಟ್ಟ ಪ್ರಭಾವದಿಂದಾಗಿ ಹಲವಾರು ಪ್ರಮುಖ ನಾಟಕಗಳು ರಚನೆಯಾಗುವುದರ ಜೊತೆಗೆ ಭಾಷಾಂತರಗೊಂಡವು.

ದಲಿತಬಂಡಾಯ ಸಾಹಿತ್ಯದ ಸಂದರ್ಭದಲ್ಲಿ ಕಾವ್ಯ ಪ್ರಕಾರ ತನ್ನ ಪರಿಣಾಮಕಾರಿಯಾದ ಪ್ರಭಾವದ ಛಾಪನ್ನು ಮೂಡಿಸಿದ ಹಾಗೆಯೇ ಎಪ್ಪತ್ತರ ದಶಕದ ನಂತರ ರಚಿಸಲ್ಪಟ್ಟ ದಲಿತ ಬಂಡಾಯ ನಾಟಕಗಳು ಕನ್ನಡ ನಾಟಕ ಕ್ಷೇತ್ರಕ್ಕೆ ಹೊಸ ಬಗೆಯ ಚಿಂತನೆ, ಆಲೋಚನೆ ಹಾಗೂ ಅಭಿವ್ಯಕ್ತಿಯ ಸ್ತರಗಳನ್ನು ಪರಿಚಯಿಸಿದವು. ಪ್ರಯೋಗಾತ್ಮಕ ದೃಷ್ಟಿಕೋನದ ಹಿನ್ನಲೆಯಲ್ಲಿ ಸೃಜಿಸಲಾದ ಹಲವು ನಾಟಕಗಳು ಬೀದಿನಾಟಕಗಳಾಗಿಯೂ ಪ್ರಯೋಗಿಸಲ್ಪಟ್ಟಿವೆ. ಬೀದಿನಾಟಕಗಳು ಸಾಮಾಜಿಕ ಚಳುವಳಿಯ ಸ್ವರೂಪ ಹಾಗೂ ತೀವ್ರತೆ ಇದೆ ಎಂಬುದನ್ನು ಸಾಬೀತುಪಡಿಸಿವೆ. ಈ ಸಂದರ್ಭದಲ್ಲಿ ರಚನೆಗೊಂಡ ಹೆಚ್ಚಿನ ನಾಟಕಗಳು ಸಾಮಾಜಿಕ ಸಮಸ್ಯೆ ಹಾಗೂ ವಾಸ್ತವ ಘಟನೆಗಳನ್ನು ಆಧರಿಸಿ ಅಭಿವ್ಯಕ್ತಗೋಂಡಿವೆ. ಬಿಹಾರದ ಬೆಲ್ಚಿ ಗ್ರಾಮದಲ್ಲಿ ದಲಿತರನ್ನು ಜೀವಂತವಾಗಿ ದಹಿಸಿದ ಘಟನೆಯನ್ನಾದರಿಸಿ ರಚಿಸಲ್ಪಟ್ಟ ನಾಟಕ 'ಬಿಲ್ಚಿ' ಪತ್ರೆಸಂಗಪ್ಪನ ಕೊಲೆಯ ಪ್ರಕರಣವನ್ನು ವಸ್ತುವಾಗುಳ್ಳ 'ಪತ್ರೆ ಸಂಗಪ್ಪನ ಕೊಲೆ' ನರಗುಂದದ ರೈತರ ಚಳುವಳಿಯನ್ನು ಬಿಂಬಿಸುವ ನಾಟಕ 'ನರಗುಂದದ ರೈತ ಬಂಡಾಯ' ಕುದುರೆಮೋತಿಯಲ್ಲಿ ಸ್ವಾಮೀಜಿಯು ನಡೆಸಿದ ಅತ್ಯಾಚಾರ ಪ್ರಕರಣವನ್ನು ಕುರಿತ ನಾಟಕ 'ಕುದುರಿಮೋತಿ' – ಹೀಗೆ ರಚಿಸಲ್ಪಟ್ಟ ಹಲವು ಸಮಾಜಮುಖಿ ನಾಟಕಗಳನ್ನು ಗೆಳೆಯರಗುಂಪು ಸಮುದಾಯ ಚಿತ್ರದಲಿತ ಕಲಾಮಂಡಳಿ ಮೊದಲಾದ ನಾಟಕ ತಂಡಗಳು ಕರ್ನಾಟಕದಾದ್ಯಂತ ಯಶಸ್ವಿಯಾಗಿ ಪ್ರಯೋಗಿಸಿವೆ. ವಾಸ್ತವ ಘಟನೆಗಳನ್ನು ರಂಗಭೂಮಿಯಲ್ಲಿ ಪ್ರಯೋಗಿಸಿದ ಹಾಗೆಯೇ ಕಾವ್ಯ, ಕಥೆ, ಕಾದಂಬರಿ, ಖಂಡಕಾವ್ಯಗಳನ್ನು ಸಹ ರಂಗಭೂಮಿಗೆ ಯಶಸ್ವಿಯಾಗಿ ಅಳವಡಿಸಲಾಗಿದೆ. ಬೆಲ್ಚಿ, ಅಲ್ಲೆ ಕುಂತವರೆ, ಒಡಲಾಳ, ರೊಟ್ಟಿ, ಕೋಟೆ, ಕುಸುಮಬಾಲೆ, ಭರತನಗರಿ, ಬೇಲಿ ಮತ್ತು ಹೊಲ ಮುಂತಾದ ಕೃತಿಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದಾಗಿದೆ.

ಸಿದ್ಧಲಿಂಗಯ್ಯನವರು ಕವಿಯಾಗಿ ತಮ್ಮ ಸ್ವಂತಿಕೆಯನ್ನು ನಿರ್ಮಿಸಿರುವ ಹಾಗೆಯೇ ನಾಟಕ ಕ್ಷೇತ್ರದಲ್ಲಿಯೂ ತಮ್ಮದೇ ಆದ ದೃಷ್ಟಿಕೋನದಲ್ಲಿ ಕೃಷಿ ಮಾಡಿದ್ದಾರೆ.

ಸಿದ್ಧಲಿಂಗಯ್ಯನವರು ಒಟ್ಟು ಮೂರು ನಾಟಕಗಳನ್ನು ರಚಿಸಿದ್ದು 'ಪಂಚಮ', 'ನೆಲಸಮ' ನಾಟಕಗಳು ೧೯೮೦ ರಲ್ಲೂ 'ಏಕಲವ್ಯ' ೧೯೮೬ ರಲ್ಲಿ ಪ್ರಕಟಗೊಂಡಿವೆ. ಪಂಚಮ ಮತ್ತು ನೆಲಸಮ ನಾಟಕಗಳು ಪ್ರತೇಕ ನಾಟಕಗಳಾಗಿದ್ದು ಒಂದೇ ಸಂಕಲನದಲ್ಲಿ ಪ್ರಕಟಗೊಂಡಿವೆ.

ಕುವೆಂಪು ಅವರು ಕೂಡ 'ಜಲಗಾರ', 'ಬೆರಳ್ಗೆಕೊರಳ್' ನಾಟಕಗಳನ್ನು ರಚಿಸುವ ಮೂಲಕ ಏಕಲವ್ಯ ಅನುಭವಿಸಿದ ನೋವು, ಅವನಿಗಾದ ಜಾತಿನಿಂದನೆ ಎಲ್ಲವನ್ನು ದಲಿತ ಸಂವೇದನೆಯ ಮೂಲಕ ತಿಳಿಸಿದರು. ಅನಂತರ ಅನೇಕ ಜನರು ಪ್ರಗತಿಪರ ಚಿಂತಕರು ಬಂದರೂ ಕೂಡ ದಲಿತ ಸಂವೇದನೆಯುಳ್ಳ ನಾಟಕಗಳನ್ನು ಬರೆಯುವ ಹಂತಕ್ಕೆ ಬಂದಿರಲಿಲ್ಲ, ದೇಶಕ್ಕೆ ಸ್ವತಂತ್ರ ಬಂದ ನಂತರ ಅದರ ಲಾಭವನ್ನು ಪಡೆದುಕೊಂಡ ಮೇಲ್ವರ್ಗದವರು ಕೀಳು ರಾಜಕೀಯದ ಮುಖಾಂತರ ಬಡವರ ಅಥವಾ ದಲಿತರನ್ನು ಶೋಷಿಸಲು ಪ್ರಾರಂಭಿಸಿದರು ಹಾಗಾಗಿ ಸುಮಾರು ೧೯೭೦ರ ಹೊತ್ತಿಗೆ ಹಲವಾರು ಕಡೆ ದಲಿತರ ಕಗ್ಗೊಲೆ ಮಾನಾಪಹರಣಗಳು ನಡದವು. ಇಂತಹ ಘಟನೆಗಳಿಂದ ದಲಿತ ಲೇಖಕರು ಮತ್ತು ಬರಹಗಾರರು ತಮ್ಮ ಜನಾಂಗಕ್ಕಾದ ನೋವನ್ನು ಊರೂರುಗಳಿಗೆ ಜಾಥಾ ಹೋಗುವ ಮೂಲಕ ಹಾಗೂ ದಲಿತ ಸಂಘರ್ಷ ಸಮಿತಿಯಿಂದಾಗಿ ಹಲವಾರು ಸಭೆ ಸಮಾರಂಭಗಳಲ್ಲಿ ನಾಟಕಗಳನ್ನು ಆಡಿಸುವುದರ ಮೂಲಕ ಅಭಿವ್ಯಕ್ತಗೊಳಿಸಿದರು.

ಇಂತಹ ಸಂದರ್ಭದಲ್ಲಿಯೇ ಡಾ। ಸಿದ್ಧಲಿಂಗಯ್ಯನವರು ಮೇಲಿನ ಮೂರು ಮುಖ್ಯವಾದ ನಾಟಕಗಳನ್ನು ಬರೆದರು. ಮೂರು ನಾಟಕಗಳಲ್ಲಿಯೂ ಕೂಡ ಶೋಷಣೆಗೆ ಒಳಗಾದಂತಹ ಸಮೂಹದ ಪರವಾದ ಸೈದ್ಧಾಂತಿಕ ನಿಲುವುಗಳು ವ್ಯಕ್ತವಾಗಿವೆ. ಇವರ ಕಾವ್ಯಗಳಲ್ಲಿ ಅಭಿವ್ಯಕ್ತಗೊಂಡಿರುವ ಸಮಾಜಮುಖಿ ಶೋಷಿತಪರ ಆಶಯ, ದೋರಣೆ ಮತ್ತು ಕಾಳಜಿಗಳೇ ಇವರ ಒಟ್ಟು ನಾಟಕಗಳಲ್ಲಿ ಪ್ರಧಾನ ಮೌಲ್ಯಗಳಾಗಿವೆ. ಈ ನಾಟಕಗಳ ಒಂದು ವಿಶೇಷತೆಯೆಂದರೆ ಮೂರು ನಾಟಕಗಳು ಬೀದಿ ನಾಟಕಗಳಾಗಿ ಪ್ರಯೋಗಿಸಲ್ಪಟ್ಟು ಗಮನಾರ್ಹ ಯಶಸ್ಸನ್ನು ಗಳಿಸಿರುವುದು. 'ಏಕಲವ್ಯ' ನಾಟಕವೊಂದೇ ಇದುವರೆಗೂ ಹಲವಾರು ಪ್ರದರ್ಶನಗಳನ್ನು ಕಂಡಿದೆ.

'ಪಂಚಮ', 'ನೆಲಸಮ' ಮತ್ತು 'ಏಕಲವ್ಯ' ನಾಟಕಗಳು ವಾಸ್ತವ ಬದುಕಿನ ಪ್ರತಿಬಿಂಬವಾಗಿವೆ. ಸಮಕಾಲೀನ ಸಮಾಜಿಕ, ರಾಜಕೀಯ ಸಾಂಸ್ಕೃತಿಕ ಪರಿಸರ ಒಬ್ಬ ಪ್ರಜ್ಞಾವಂತ ನಾಟಕಕಾರನನ್ನು ಎಷ್ಟರಮಟ್ಟಿಗೆ ಪ್ರಭಾವಿಸುತ್ತವೆ ಎಂಬುದಕ್ಕೆ ಈ ಮೂರು ನಾಟಕಗಳು ನಿದರ್ಶನವಾಗಿವೆ. ನಾಟಕಕಾರ ತಾನು ಸಂಪೂರ್ಣವಾಗಿ ಸಾಮಾಜಿಮ ಸಂಘರ್ಷಗಳಿಗೆ ಮುಖಾಮುಖಿಯಾಗಿ ನಿಂತಾಗ ಪ್ರಗತಿಪರದೋರಣೆಯುಳ್ಳ ನಾಟಕಗಳು ಹುಟ್ಟಲು ಸಾಧ್ಯವಾಗುತ್ತದೆ. ಸಿದ್ಧಲಿಂಗಯ್ಯನವರು ಸದಾ ಸಾಮಾಜಿಕಸಮಸ್ಯೆಗಳಿಗೆ, ಸವಾಲುಗಳಿಗೆ ತಮ್ಮನ್ನು ತಾವು ಒಡ್ಡಿಕೊಂಡವರು ಮತ್ತು ಪ್ರತಿಸ್ಪರ್ದಿಯಾಗಿ ನಿಂತವರು ಹಾಗಾಗಿ ಇವರ ಒಟ್ಟು ನಾಟಕಗಳು ಸಾಮಾಜಿಕ ಬದುಕಿನ

ಒಪ್ಪಂದದ ಪ್ರತಿಸ್ಪಂದನಗಳಾಗಿವೆ. ಜೊತೆಗೆ ಸಾಮಾಜಿಕ ಸಮಸ್ಯೆಗಳ ಸಂಘರ್ಷಾತ್ಮಕ ನೆಲೆಯಲ್ಲಿಯೇ ಇವರ ನಾಟಕಗಳು ಹೊಸ ಹೊಳಹನ್ನು ಹೊಸದೊಂದು ಆಶಾವಾದವನ್ನು ಬಿಚ್ಚಿಕೊಡುವಂತಹ ಅಂತರ್ ಶಕ್ತಿಯನ್ನು ಒಳಗೊಂಡಿವೆ.

ಕವಿಯಾಗಲೀ ಅಥವಾ ನಾಟಕಕಾರನಾಗಲೀ ಬಡವರ, ಶೋಷಿತರ ಶ್ರಮಿಕರ ಹಾಗೂ ಒಟ್ಟು ಸಮಾಜ ಪರ ಮಾನವೀಯ ಕಾಳಜಿ ಉಳ್ಳವನಾಗಿರಬೇಕು. ಜೊತೆಗೆ ವಾಸ್ತವ ಸಮಾಜದ ಆಗು-ಹೋಗುಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸಬೇಕು ಎಂಬುದನ್ನು ಪ್ರಬಲವಾಗಿ ನಂಬಿರುವ ಸಿದ್ಧಲಿಂಗಯ್ಯನವರು ಪ್ರಪಂಚದ ವಿದ್ಯಮಾನಗಳಿಗೆ ನಿತ್ಯ ನಡೆಯುವ ಘಟನೆಗಳಿಗೆ ಸ್ಪಂದಿಸುವ ಸಂವೇದನಾಶೀಲ ಗುಣವುಳ್ಳವರು. 'ಪಂಚಮ', 'ನೆಲಸಮ' ಮತ್ತು 'ಏಕಲವ್ಯ' ನಾಟಕಗಳು ವಾಸ್ತವ ಬದುಕಿನ ಪ್ರತಿಬಿಂಬವಾಗಿವೆ. ಒಂದು ಜಾತಿವ್ಯವಸ್ಥೆಯ ಉಗ್ರತೆಯನ್ನು ಪ್ರದರ್ಶಿಸಿದರೆ ಮತ್ತೊಂದು ವರ್ಗಸಂಘರ್ಷ ಪರಿಣಾಮವನ್ನು ಪರಿಚಯಿಸುತ್ತದೆ. 'ಏಕಲವ್ಯ' ನಾಟಕವು ಕಾಡು ಮತ್ತು ನಾಡಿನ ಸಂಸ್ಕೃತಿಗಳ ವೈರುಧ್ಯವನ್ನು ಪರಿಚಯಿಸುತ್ತದೆ.

ಎಪ್ಪತ್ತರ ದಶಕದ ನಂತರ ಪ್ರಜ್ಞಾವಂ, ಅಕ್ಷರಸ್ಥ ದಲಿತ ಸಮುದಾಯದ ವಿಭಿನ್ನಧೋರಣೆಯ ಮನಸ್ಥಿಗಳ ತಾಕಲಾಟವನ್ನು ನಾಟಕಕಾರರು ಸಮರ್ಥವಾಗಿ ಬಿಂಬಿಸಿದ್ದಾರೆ. 'ಆಳುವ ವರ್ಗದ ಸಂಸ್ಕೃತಿಯಲ್ಲಿ ಕರಗಿಹೋಗಿ ಸುಳ್ಳು ಮನುಷ್ಯರಾಗಿ ಮಾರ್ಪಟ್ಟಿರುವ ವಿದ್ಯಾವಂತ ದಲಿತರ ಅಸ್ತಿತ್ವದ ಹುಡುಕಾಟದ ಪ್ರಶ್ನೆ 'ಪಂಚಮ' ನಾಟಕದ ವಸ್ತು. ನಾಟಕದಲ್ಲಿ ಬರುವ ಐದು ಜನ ಅಭ್ಯರ್ಥಿಗಳು ಐದು ಧೋರಣೆಗಳ ಪ್ರತಿನಿಧಿಗಳು. ನಾಟಕದ ಮುಖ್ಯ ಆಶಯ ದಲಿತರ ಬದುಕನ್ನು ಶತಮಾನಗಳಿಂದ ಕವಿದುಕೊಂಡಿರುವ, ಗುಲಾಮಗಿರಿಯನ್ನು ಕಿತ್ತೊಗೆಯಬೇಕೆಂಬುದು. ನಾಟಕಕಾರರು ಈ ನಾಟಕದಲ್ಲಿ ಜಾತಿ ಹಾಗೂ ವರ್ಗ ಸಂಘರ್ಷದ ನೆಲೆಗಳನ್ನು ತಾತ್ವಿಕ ಜಿಜ್ಞಾಸೆಗೆ ಒಳಪಡಿಸುತ್ತಲೇ ಅಸಮಾನತೆಯ ಸಮಾಜದ ದುರಂತವನ್ನು ಚಿತ್ರಿಸಿದ್ದಾರೆ. ಎಚ್ಚೆತ್ತ ದಲಿತರಾಗಲು ಜಾಗೃತಗೊಳಿಸಿದ ಮನಸ್ಥಿತಿ ಹಾಗೂ ಶೋಷಕ ವ್ಯವಸ್ಥೆಯ ಮೌಲ್ಯಗಳನ್ನು ಒಪ್ಪಿಕೊಳ್ಳುತ್ತಲೇ ಬದುಕುವ ಶೋಷಿತರ ಬಗೆಗೆ ನಾಟಕಕಾರರಿಗೆ ಒಂದು ಬಗೆಯ ಅಸಮಾಧಾನವಿದೆ.

'ಪಂಚಮ' ನಾಟಕದ ಶೀರ್ಷಿಕೆಯು ಎರಡುಬಗೆಯ ಅರ್ಥಗಳನ್ನು ಸ್ಫುರಿಸುತ್ತದೆ. ನಾಟಕದಲ್ಲಿ ಸಂದರ್ಶನಕ್ಕೆ ಬರುವ ಐದು ಜನ ದಲಿತ ಅಭ್ಯರ್ಥಿಗಳನ್ನು ಪ್ರತಿಮೀಕರಿಸುವ ಅರ್ಥ ಒಂದಾದರೆ, ಭಾರತೀಯ ಶ್ರೇಣಿಕೃತ ಸಾಮಾಜಿಕ ಸಂದರ್ಭದಲ್ಲಿ ದಲಿತರನ್ನು 'ಪಂಚಮ' ರೆಂದು ಕರೆಯಲಾಗಿದೆ. ಹಾಗೆಯೇ ಪಂಚಮ ಎಂಬುದು ನಾಟಕದಲ್ಲಿ ಬರುವ ಕ್ರಾಂತಿಕಾರಿ ಯುವಕನ ಹೆಸರೂ ಆಗಿದೆ. ಸಮಾಜ ಕಲ್ಯಾಣ ಇಲಾಖೆಯ ಹರಿಜನೋದ್ಧಾರಕ ಮಂಡಳಿಯು ವಿದ್ಯಾವಂತ ದಲಿತರಿಗೆ ಉದ್ಯೋಗವನ್ನು ಕಲ್ಪಿಸಿಕೊಡುವುದಕ್ಕಾಗಿ ನಡೆಯುವ ಸಂದರ್ಶನವನ್ನು ವಸ್ತುವಾಗುಳ್ಳ ಈ ನಾಟಕವು

ಒಂದೇ ದೃಶ್ಯದಲ್ಲಿ ಮುಕ್ತಾಯವಾಗುತ್ತದೆ. ಈ ನಾಟಕ ರಂಗಭೂಮಿಯ ಪ್ರಯೋಗಕ್ಕಾಗಿ ರಚಿಸಲಾಗಿದ್ದು, ನಾಟಕದಲ್ಲಿ ಬರುವ ಐ.ಎ.ಎಸ್. ಅಧಿಕಾರಿಯಾದ ಹಯವದನ್ ರಾವ್ ದಲಿತ ವಿದ್ಯಾವಂತರಾದ ಪುಟ್ಟಲಕ್ಷ್ಮಮ್ಮ, ಶೇಷಾದ್ರಿ, ಗಾಂಧಿದಾಸ್, ಪಾಪಣ್ಣ, ಪಂಚಮರೊಟ್ಟಿಗೆ ನಡೆಸುವ ಸಂವಾದದ ಒಟ್ಟು ಚಿತ್ರಣವನ್ನು ಈ ನಾಟಕ ಬಿಂಬಿಸುತ್ತದೆ. ಶೋಷಿತ ಹಾಗೂ ಶೋಷಕ ವರ್ಗಗಳಲ್ಲಿನ ಅಜ್ಞಾನ, ದೌರ್ಜನ್ಯಗಳನ್ನು ಚಿತ್ರಿಸುತ್ತಲೇ, ತಾರತಮ್ಯದ ಸಮಾಜದ ಅಸ್ತಿತ್ವಕ್ಕೆ ಹೇಗೆ ಈ ಎರಡೂ ವರ್ಗಗಳು ಮೂಲಕಾರಣವಾಗಿವೆ ಎಂಬುದನ್ನು ವಿವರಿಸಿದ್ದಾರೆ. ಯತಾಸ್ಥಿತಿವಾದದ ಮೂಲಭೂತ ಬದಲಾವಣೆಯ ನಿಟ್ಟಿನಲ್ಲಿ ಶೋಷಿತಸಮುದಾಯಗಳು ಯಾವ ಬಗೆಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡಾಗ ಆರೋಗ್ಯಪೂರ್ಣ ಸಮಸಮಾಜದ ನಿರ್ಮಿತಿ ಸಾಧ್ಯ ಎಂಬುದನ್ನು ನಾಟಕಗಾರರು 'ಪಂಚಮ' ಪಾತ್ರದ ಮುಖೇನ ಅಭಿವ್ಯಕ್ತಿಸಿದ್ದಾರೆ. ತುಳಿತಕ್ಕೊಳಪಟ್ಟ ಸಮುದಾಯ ಎಚ್ಚರಗೊಳ್ಳದ ಹೊರತು ಶೋಷಕ ವ್ಯವಸ್ಥೆಯ ಬದಲಾವಣೆ ಅಸಾಧ್ಯ ಎಂಬುದು ನಾಟಕದ ನೀಲವಾಗಿದೆ. ನಾಟಕದಲ್ಲಿ ಬರುವ ಹಯವದನರಾವ್ ಬ್ರಾಹ್ಮಣ ಶಾಹಿ, ಅಧಿಕಾರಸ್ಥ ಶೋಷಕ ಸಮುದಾಯದ ಪ್ರತೀಕವಾಗಿಯೂ ಸಂದರ್ಶನಕ್ಕೆ ಬರುವ ಐದು ಜನದಲಿತರನ್ನು ಶೋಷಿತ ಸಮಾಜದ ಪ್ರತಿನಿಧಿಗಳಾಗಿಯೂ ಚಿತ್ರಿಸಿಲಾಗಿದೆ. ನಾಟಕವು ವಾಸ್ತವ ಸಮಸ್ಯೆಯನ್ನೇ ಹಾಸ್ಯ ಮತ್ತು ವ್ಯಂಗ್ಯಪೂರಿತ ಪರಿಭಾಷೆಯಲ್ಲಿ ಚರ್ಚೆಗೊಳಪಡುತ್ತಾ ಸಾಗುತ್ತದೆ. ಜೊತೆಗೆ ಸ್ವಾತಂತ್ರ್ಯಾನಂತರದ ದಲಿತಪರವಾದ ಸರ್ಕಾರದ ಯೋಜನೆಗಳು ಹೇಗೆ ವಿಫಲವಾಗಿವೆ ಎಂಬುದನ್ನು ಇಲ್ಲಿ ತಿಳಿಯಬಹುದಾಗಿದೆ.

ಸಮಾನತೆಯ ಸಮಾಜದ ಕನಸಿನ, ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಸಂವಿಧಾನಾತ್ಮಕವಾಗಿ ಕಲ್ಪಿಸಿರುವ ಮೀಸಲಾತಿ ಸೌಲಭ್ಯದ ಉದ್ದೇಶವನ್ನು ಕೆಲವು ಮನಸ್ಸು ಅರ್ಥಮಾಡಿಕೊಳ್ಳದೆ ಹೋದದ್ದು ದುರಂತವಾಗಿದೆ.

'ನೆಲಸಮ' ನಾಟಕವು ೧೯೭೬ ಜೂನ್ ೨೬ರ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ದೆಹಲಿಯಲ್ಲಿ ನಡೆದ ಬುಲ್ ಡೋಜರ್ ಕಾರ್ಯಕ್ರಮದ ಕರಾಳತೆಯ ಒತ್ತಡದ ಹಿನ್ನಲೆಯಲ್ಲಿ ಮೂಡಿಬಂದ ನಾಟಕವಾಗಿದೆ. ತುರ್ತುಪರಿಸ್ಥಿತಿಯನ್ನು ಒತ್ತಾಯಪೂರ್ವಕವಾಗಿ ದೇಶದಲ್ಲಿ ಜಾರಿಗೆ ತಂದಿದ್ದ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿ ತನ್ನಮಗ ಸಂಜಯಗಾಂಧಿಯೊಟ್ಟಿಗೆ ಸೇರಿ ದೆಹಲಿಯ 'ಟರ್ಕನ್ ಗೇಟ್' ಪ್ರದೇಶದ ಸಮೀಪದಲ್ಲಿದ್ದ ಕೊಳಚೆ ಪ್ರದೇಶದ ಸಾವಿರಾರು ಗುಡಿಸಲುಗಳನ್ನು ಬುಲ್ ಡೋಜರ್ ಮೂಲಕ ಕೆಡವಿಹಾಕಿ ಅಲ್ಲಿ ವಾಸವಾಗಿದ್ದ ಗುಡಿಸಲುವಾಸಿಗಳ ಮೇಲೆ ನಡೆಸಿದ ಅಮಾನವೀಯ ಕ್ರೌರ್ಯದ ಚಿತ್ರಣ ಈ ನಾಟಕದಲ್ಲಿ ವ್ಯಕ್ತಗೊಂಡಿದೆ. ರಾಜಕಾರಣ ಮತ್ತು ಅಧಿಕಾರಿಶಾಹಿ ವರ್ಗ ಜನಸಾಮಾನ್ಯರ ಅಂತರಂಗವನ್ನು ಅವರ ಬವಣೆಯನ್ನು ಲೆಕ್ಕಿಸದೇ ಹೋದದ್ದು ಮಾನವ ವಿರೋದಿಯಾದದ್ದು ಎಂಬುದು ನಾಟಕದಿಂದ ಸ್ಫೋಟಿಸುತ್ತದೆ. "ಬಡವರ

ಉದ್ಧಾರದ ಹೆಸರಿನಲ್ಲಿ ಬಡವರನ್ನು ನಿತ್ಯವೂ ಬಲಿತೆಗೆದುಕೊಳ್ಳುತ್ತಿರುವ ಆಳುವ ವರ್ಗದ ವಂಚನೆಯೇ 'ನೆಲಸಮ' ನಾಟಕದ ವಸ್ತು. ಸುಳ್ಳು ಭರವಸೆ, ಹೆಂಡ, ಹಣವನ್ನು ಚುನಾವಣೆಯ ಕಾಲದಲ್ಲಿ ಚೆಲ್ಲಿ ಸುಲಿಗೆಯ ರಾಜಕಾರಣದಲ್ಲಿ ತೊಡಗಿರುವವರ ಬಣ್ಣವನ್ನು ಬಯಲು ಮಾಡುವ ನಾಟಕ ನೆಲಸಮ.

'ಪಂಚಮ' ನಾಟಕವು ಜಾತಿ ಸಮಸ್ಯೆಯ ಸ್ಥರದಲ್ಲಿ ಬದುಕಿನ ಕ್ರೌರ್ಯಗಳನ್ನು ಜಿಜ್ಞಾಸೆಗೆ ಒಳಪಡಿಸಿದರೆ 'ನೆಲಸಮ' ನಾಟಕವು ವರ್ಗ ಸಂಘರ್ಷದ ನೆಲೆಯಲ್ಲಿ ಮನುಷ್ಯನ ಬದುಕಿನ ಅಸ್ಥಿತ್ವದ ತಲ್ಲಣಗಳನ್ನು ಚರ್ಚಿಸುತ್ತದೆ. 'ನೆಲಸಮ' ಎಂಬ ಪದದ ಅರ್ಥವೇ ಧ್ವನಿಪೂರ್ಣವಾಗಿದೆ. ಬೂರ್ಜ್ವ ಅಧಿಕಾರ ಶಾಯಿ ರಾಜಕೀಯ ವ್ಯವಸ್ಥೆ ಬಡವರ ಬದುಕನ್ನು ತುಳಿಯುವ ದುರಂತದ ಸಂಕೇತವಾಗಿಯೂ ಶೋಷಕ ವ್ಯವಸ್ಥೆಯನ್ನು ಇಲ್ಲವಾಗಿಸಬೇಕೆಂಬ ಹೋರಾಟದ ಆಶಯವಾಗಿಯೂ, ಈ ದೇಶದ 'ನೆಲ, ಸಂಪತ್ತು ಎಲ್ಲಾ ವರ್ಗದ ಜನಸಮುದಾಯಕ್ಕೆ 'ಸಮ' ನಾಗಿ ಹಂಚಿಕೆಯಾಗಬೇಕೆಂಬ ಸಮಸಮಾಜದ ಅಸ್ತಿತ್ವದ ಪರಿಕಲ್ಪನೆಯಾಗಿ ನಾಟಕದ ಶೀರ್ಷಿಕೆ ಔಚಿತ್ಯಪೂರ್ಣವೆನಿಸುತ್ತದೆ. ಹಾಡಿನಿಂದಲೇ ಪ್ರಾರಂಭವಾಗಿ ಹಾಡಿನಿಂದಲೇ ಕೊನೆಗೊಳ್ಳುವ ಈ ನಾಟಕದಲ್ಲಿ 'ಸಾವಿರಾರುನದಿಗಳು', 'ಕಪ್ಪುಕಾಡಿನಹಾಡು' ಸಂಕಲನಗಳಲ್ಲಿನ ಹಾಡುಗಳಾದ 'ಕೊಳಗೇರಿಯ ಹಾಡು', 'ಬಿದ್ದಾವು ಮನೆಗಳು' ಎಂಬುವುಗಳನ್ನು ಆರಿಸಿಕೊಂಡಿದ್ದಾರೆ.

'ಏಕಲವ್ಯ' ನಾಟಕವು ಪುರಾಣ ಮೂಲದ ವಸ್ತುವನ್ನು ಒಳಗೊಂಡಿದ್ದು ವಸ್ತು, ವಿಷಯ, ಪಾತ್ರಗಳು ಕಾಲಕಾಲಕ್ಕೆ ಪರಿಷ್ಕರಗೊಳ್ಳುತ್ತಲೇ ಮರುವ್ಯಾಖ್ಯಾನಕ್ಕೆ ಒಳಪಡುತ್ತಿರುವುದನ್ನು ಕಾಣಬಹುದು. ಆಯಾ ಕಾಲದ ಲೇಖಕರು ತಮ್ಮ ಸಮಕಾಲೀನ ಸಾಮಾಜಿಕ ಸಂವೇದನೆಗಳನ್ನು ಪೌರಾಣಿಕ ವಸ್ತು, ವಿಷಯ, ಪಾತ್ರಗಳ ಮೂಲಕ ಅಭಿವ್ಯಕ್ತಿಸುತ್ತಲೇ ಚೇಮತನೆ ವ್ಯಕ್ತಡಿಸಿದ್ದಾರೆ. ಪೌರಾಣಿಕ ಮೌಲ್ಯಗಳನ್ನು ಯತಾವತ್ತಾಗಿ ಸ್ವೀಕರಿಸುವ ಪುನರ್ ಮೌಲ್ಯೀಕರಿಸುವ ಹಾಗೂ ಮುರಿದು ಕಟ್ಟುವ ಪ್ರವೃತ್ತಿ ಕನ್ನಡ ಸಾಹಿತ್ಯದಲ್ಲಿ ನಿರಂತರವಾಗಿ ನಡೆದಿದೆ. "... ಪುರಾಣ ಕಥೆಗಳು ಒಂದು ಸಂಸ್ಕೃತಿಯ ಆದಿಮಸ್ಥಿತಿಯ ಪಳೆಯುಳಿಕೆಗಳು........... ಇತಿಹಾಸ ಪೂರ್ವಕಾಲದ ಸಾಮುದಾಯಕ ನೆನಪುಗಳು ಪುರಾಣ ಕಥೆಗಳಾಗಿ ಘನೀಭವಿಸಿವೆ. ಒಂದು ಪರಂಪರೆಯೂ ಒಪ್ಪಿಕೊಂಡ ಬಂದ ನಂಬಿಕೆ, ಮೌಲ್ಯ ಮತ್ತು ಸಾಮಾಜಿಕ ಸಂಬಂಧಗಳ ಮೂಲ ರೀತಿಯನ್ನು ಅವುಗಳಲ್ಲಿ ಗುರುತಿಸಬಹುದು ...". ಪುರಾಣ ಮೂಲದಲ್ಲಿ ಅಜ್ಞೆಗೆ ಒಳಗಾದ ಹಲವು ಪಾತ್ರಗಳು ಅನಂತರದಲ್ಲಿ ಮರು ಹುಟ್ಟು ಪಡೆದುಕೊಂಡಿವೆ. ಆಯಾ ಲೇಖಕರ ಅನುಭವಾತ್ಮಕ ಹಿನ್ನಲೆಯಲ್ಲಿ ಪೌರಾಣಿಕ ಪಾತ್ರಗಳು ಸಾಮಾಜಿಕ ಮೌಲ್ಯಗಳನ್ನು ಪ್ರತಿಪಾದಿಸುವ ನಿಟ್ಟಿನಲ್ಲಿ ಬಳಕೆಯಾಗಿವೆ. ಏಕಲವ್ಯ, ಶಂಬೂಕ, ತ್ರಿಶಂಕು, ಅಹಲ್ಯೆ, ಉರ್ಮಿಳೆ, ದ್ರೌಪದಿ, ಸೀತೆ, ಶಕುಂತಲೆ ಮಂತಾದ ಪಾತ್ರಗಳು ಹೊಸ ಚಿಂತನೆಗಳ ಮುಖೇನ ಮಾನವೀ ನೆಲೆಯಲ್ಲಿ ಅಭಿವ್ಯಕ್ತಗೋಂಡಿವೆ. ಪೌರಾಣಿಕ

ಪಾತ್ರಗಳನ್ನು ಕೇವಲ ಪುನರ್‌ವ್ಯಾಖ್ಯಾನ ಮಾಡುವುದಷ್ಟೆ ಲೇಖಕರ ಮುಖ್ಯ ಉದ್ದೇಶವಲ್ಲ ಆ ಪಾತ್ರಗಳ ಮೂಲಕ ತಮ್ಮ ಕಾಲದ ತೊಡಕುಗಳಿಗೆ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳಲು ಲೇಖಕರು ಮತ್ತೆಮತ್ತೆ ಮಾಡುವ ತಾತ್ವಿಕ ಪ್ರಯತ್ನವಾಗಿದೆ.

ಎಪ್ಪತ್ತರ ದಶಕದ ದಲಿತ ಬಂಡಾಯ ಸಾಹಿತ್ಯಯಲ್ಲಿ ಪುರಾಣದ ವಸ್ತು, ಪಾತ್ರಗಳನ್ನು ಪುನರ್ ಅರ್ಥೈಸುವ, ಅಭಿವ್ಯಕ್ತಿಸುವ ದೃಷ್ಟಿಕೋನದಲ್ಲಿ ಭಿನ್ನ ದೋರಣೆ ಹಾಗೂ ಆಶಯಗಳು ವ್ಯಕ್ತಗೊಂಡಿವೆ. ದಲಿತ ಲೇಖಕರು ತಮ್ಮ ಕಾವ್ಯ ನಾಟಕಗಳಲ್ಲಿ ಪುರಾಣಮೂಲ ವಸ್ತು ವಿಷಯ, ಪಾತ್ರಗನ್ನು ಅಳವಡಿಸಿಕೊಳ್ಳುತ್ತಲೇ ಆ ಮೂಲಕ ಬ್ರಾಹ್ಮಣಶಾಹಿರಾಜತ್ವ, ಪಾಳೆಗಾರಿಕೆಯ ಮೌಲ್ಯಗಳನ್ನು ವಿಮರ್ಶಾತ್ಮಕವಾಗಿ ತರ್ಕಕ್ಕೆ ಒಳಗುಮಾಡಿದ್ದಾರೆ. ಈ ಮುಂಚೆ ಕುವೆಂಪು ಅವರು ಅರ್ಥವಿಲ್ಲದ ಹುಸಿ ಮೌಲ್ಯಗಳನ್ನು ವಿಮರ್ಶಾತ್ಮಕವಾಗಿ ತರ್ಕಕ್ಕೆ ಒಳಗುಮಾಡಿದ್ದಾರೆ. ಆ ಮೂಲಕ ಹುಸಿಮೌಲ್ಯವನ್ನು ಒಡೆದು ನಿಜಮೌಲ್ಯವನ್ನು ಕಟ್ಟುವ ಕಲಸವನ್ನು ತಮ್ಮ ಪೌರಾಣಿಕ ಹಿನ್ನೆಲೆಯ ನಾಟಕಗಳಲ್ಲಿ ಮಾಡಿದ್ದರು. ಒಟ್ಟು ಕನ್ನಡಸಾಹಿತ್ಯದ ಸಂದರ್ಭದಲ್ಲಿ 'ಏಕಲವ್ಯ' ಹೆಚ್ಚು ತಾಂತ್ರಿಕ ಜಿಜ್ಞಾಸೆಗೆ ಒಳಗಾದ ಪೌರಾಣಿಕ ಪಾತ್ರಗಳಲ್ಲಿ ಪ್ರಮುಖವಾದದು ಕುವೆಂಪು ಆವರ 'ಬೆರಳ್ಗೆ ಕೊರಳ್', ಗೋವಿಂದ ಪೈ ಅವರ 'ಹೆಬ್ಬೆರಳು', ಕೈಲಾಸಂ ಅವರ 'ಪರ್ಪಸ್' ವಜ್ರಮುಟ್ಟಿ ಅವರ 'ಎಚ್ಚೆತ್ತ ಏಕಲವ್ಯ' ಸತ್ಯಾನಂದ ಪಾತ್ರೋಟ ಅವರ 'ಮತ್ತೊಬ್ಬ ಏಕಲವ್ಯ' ಮುಂತಾದವು ಏಕಲವ್ಯ ನನನು ವಿಭಿನ್ನ ನೆಲೆಯಲ್ಲಿ ಸೃಷ್ಟಿಸಿದ ನಾಟಕಗಳಾಗಿವೆ.

ಕ್ರಿ. ಶ. ೧೯೮೭ ರಲ್ಲಿ ರಚಿಸಲಾದ 'ಏಕಲವ್ಯ' ನಾಟಕ ಒಟ್ಟು ದೃಶ್ಯಗಳನ್ನೊಳಗೊಂಡಿದ್ದು ಸಾಮಾಜಿಕ ಸಂದೇಶ ಮತ್ತು ಆಲೋಚನೆಯಲ್ಲಿ ವಿಭಿನ್ನ ದೃಷ್ಟಿಕೋನವನ್ನು ಒಳಗೊಂಡಿದೆ. ಸಿದ್ಧಲಿಂಗಯ್ಯನವರಿಗೆ ಕಾಡು ಮತ್ತು ನಾಡಿನ ಮಧ್ಯೆ ನಡೆದ ಸಂಘರ್ಷದ ಕಥೆಯಾಗಿ 'ಏಕಲವ್ಯ' ನಾಟಕ ಗೋಚರಿಸಿದೆ. ಕಾಡು ಪ್ರತಿನಿಧಿಸುವ ನಿಸರ್ಗ ಸಹಜ ಮುಗ್ಧತೆ ಮತ್ತು ಸರ್ವಜೀವ ಚೈತನ್ಯವನ್ನು ಕಾಪಾಡುವ ಭರವಸೆಯನ್ನು ಏಕಲವ್ಯ ಮತ್ತವನ ಸಹಚರರು ಪ್ರತಿನಿಧಿಸಿದ್ದರೆ, ನವನಾಗರೀಕತೆಯ ಸ್ವಾರ್ಥ, ಅಹಂಕಾರ ಮತ್ತು ಕ್ರೌರ್ಯದ ಸಾಕಾರವಾಗಿ ರಾಜ ಮತ್ತವನ ಅನುಚರವರ್ಗ ಕಾಣಿಸಿಕೋಳ್ಳುತ್ತದೆ.

ಒಟ್ಟಾರೆಯಾಗಿ ಸಿದ್ಧಲಿಂಗಯ್ಯನವರ ಮೂರು ನಾಟಕದಕಲ್ಲಿ ಓದುಗನನ್ನು ಗಮನಸೆಳೆಯುವ ಅಂಶಗಳೆಂದರೆ ನಾಟಕಗಳಲ್ಲಿನ ಆಡು ಮಾತಿನ ಭಾಷೆ ನಿರರ್ಗಳವಾದ ರಚನಾಶೈಲಿ ತಾತ್ವಿಕ ಜಿಜ್ಞಾಸೆ ಮತ್ತು ಪ್ರಮುಖ ಪಾತ್ರಗಳ ಮೂಲಕ ಹೊರ ಹೊಮ್ಮುವ ವೇದನೆ ಮತ್ತು ಸಂವೇದನೆಗಳು. ಒಟ್ಟು ನಾಟಕಗಳು ದೃಶ್ಯ ನಾಟಕಗಳಾಗಿ ಯಶಸ್ವಿಯಾಗಿರುವ ಹಾಗೇಯೇ ಸಾಹಿತ್ಯಕವಾದ ಓದಿಗೂ

ನಿಲುಕುವಂತಾಗಿದೆ. ಮೂಲತಃ ಕವಿ ಸಿದ್ಧಲಿಂಗಯ್ಯನವರು ತಮ್ಮ ನಾಟಕಗಳಲ್ಲಿ ಸಮಯ, ಸಂದರ್ಭ, ಸನ್ನಿವೇಶಕ್ಕೆ ಪೂರಕವೆಂಬಂತೆ ಲಯಬದ್ಧ ಹಾಡುಗಳನ್ನು ಬಳಸಿದ್ದಾರೆ.

ಸಿದ್ಧಲಿಂಗಯ್ಯನವರ ನಾಟಕಗಳಲ್ಲಿನ ಪಾತ್ರಚಿತ್ರಗಳು ನಾಟಕದ ಕಥಾಹಂದರಕ್ಕೆ ಎಲ್ಲಿಯೂ ಅನೌಚಿತ್ಯ ಎನಿಸುವುದಿಲ್ಲ 'ಪಂಚಮ' ನಾಟಕದಲ್ಲಿನ ಹಯವದನ ರಾವ್ ಪತ್ರವು ಬ್ರಾಹ್ಮಣ ಶಾಯಿ ಮನಸ್ಥಿತಿಯ ಅಭಿವ್ಯಕ್ತಿಯಾಗಿ ಮೂಡಿಬಂದಿದ್ದರೆ ಅಲ್ಲಿ ಬರುವ ಇತರೆ ಪಾತ್ರಗಳಾದ ಪುಟ್ಟಲಕ್ಕಮ್ಮ, ಶೇಷಾಂದ್ರಿ ಗಾಂಧಿ ದಾಸ್ ಮತ್ತು ಪಾಪಣ್ಣ ಶೋಷಿತ ಸಮುದಾಯದ ಪ್ರತಿನಿಧಿಗಳಾಗಿ ಕಂಡುಬರುತ್ತಾರೆ. ಇದೇ ನಾಟಕದಲ್ಲಿನ 'ಪಂಚಮ' ಎಂಬ ಪಾತ್ರವು ಶೋಷಿತ ಸಮುದಾಯದಲ್ಲಿನ ಪ್ರತಿಭಟನಾ ಕಿಡಿಯಾಗಿ ಹೊಮ್ಮುವುದು ನಾಟಕದ ವಿಶೇಷತೆಯಾಗಿದೆ. ಇದಕ್ಕೆ ಸಾಕ್ಷಿಯಾಗಿ ನಾಟಕದಲ್ಲಿ ಬರುವ ಕೆಲವು ಸನ್ನಿವೇಶಗಳು ಆಯಾ ಪಾತ್ರಗಳ ಮನಸ್ಥಿತಿಗೆ ಹಿಡಿದ ಕನ್ನಡಿಯಾಗಿ ಕಂಡು ಬರುತ್ತವೆ. ಸಮಾನತೆಯ ಸಮಾಜದ ಕನಸಿನ ಸಮಾಜಿಕ ನ್ಯಾಯದ ಹಿನ್ನಲೆಯಲ್ಲಿ ಸಂವಿದಾನಾತ್ಮಕವಾಗಿ ಕಲ್ಪಿಸಿರುವ ಮೀಸಲಾತಿ ಸೌಲಭ್ಯದ ಉದ್ದೇಶವನ್ನು ಸವರ್ಣಿಯ ಕೆಲವು ಮನಸ್ಸುಗಳು ಅರ್ಥಮಾಡಿಕೊಳ್ಳದೆ ಹೋದದ್ದು ದುರಂತ. ಅದನ್ನು ನಾಟಕಕಾರರು ಹಯವದನ ರಾವ್ ಸಂಘರ್ಷಕ್ಕೆಂದೇ ಬರುವ ದಲಿತ ಯುವಕರನ್ನು ಕುರಿತು ಹೇಳುವ ಮಾತುಗಳು ಮೇಲ್ವರ್ಗದವರು ದಲಿತರ ಮೇಲೆ ಇಟ್ಟುಕೊಂಡಿರುವ ಅಂದತ್ವಕ್ಕೆ ಸಾಕ್ಷಿಯಾಗಿದೆ. "[illegible] ಕುಡುಕ್ ನನ್ ಮಕ್ಳು ಬಂದ್ಬಿಟ್ಟಿವೆ, ನಮ್ ತಲೆ ತಿಂತವೇ ಸಾರ್, ಏನೋ ರಿಜರ್ವೇಷನ್ ಕನ್ಸೇಷನ್ ಅಂತಾ ಡಿಗ್ರಿ ಮಾಡ್ಬಿಟ್ಟೀವೆ. ತಲೆಲೇ ಏನೂ ಇರಲ್ಲ .... ಅನ್ ಕಲ್ಚರ್ಡ್ ಜನಗಳು, ಕೊಳಕು ಜನಗಳು, ಛೀ .... ಆಫೀಸ್‌ನಲ್ಲಿ ಹೆಂಗ್ ನಡಕೋಬೇಕು ಅನ್ನೋ ಕಾಮನ್ ಸೆನ್ಸ್ ಇಲ್ಲ, ಶೂದ್ರ್ ಮುಂಡೇವು, ಚಂಡಾಲರು? ಏನೋ ಈ ಸರ್ಕಾರ ನಮ್ಮ ಹೆಣ ತೆಗೆಯುತ್ತೇ. ನೋಡಿ ಈ ಹೊಲೆಮಾದಿಗರು ತಂಗಳ್ ತಿಂದು ಬಂದುಬಿಟ್ಟವೆ ಮ್ಯಾನರ್ಸ್ ಗೊತ್ತಿಲ್ಲ ಎಷ್ಟು ಡಿಗ್ರಿ ಮಾಡಿದ್ರೇನು ಚಂಡಾಲ್ರು ಚಂಡಾಲ್ರೇ [illegible]" ಭಾರತೀಯ ಜಾತಿ ವ್ಯವಸ್ಥೆಯಲ್ಲಿ ದಲಿತರ ಸ್ಥತಿ, ಶ್ರೇಣೀಕೃತ ಪದ್ಧತಿಯನ್ನು ಸ್ಥಿರವಾಗಿಸುವ ಮೂಲಭೂತವಾದಿಗಳ ಹುನ್ನಾರ ಹಾಗೂ ದಲಿತರ ಬಗೆಗೆ ಸವರ್ಣೀಯರಿಗಿರಬಹುದಾದ ಸಿಟ್ಟು ಅಸೂಹೆಯನ್ನು ಮೇಲಿನ ಮಾತುಗಳು ವಿವರಿಸುತ್ತವೆ.

ಅದೇ ರೀತಿ ಪುಟ್ಟಲಕ್ಕಮ್ಮಳನ್ನು ಸಂಧರ್ಶನ ಮಾಡುವ ಸಂದರ್ಭದಲ್ಲಿ ಆಕೆ ನಮ್ಮೂರಿಗೆ ಲೈಟಿನ ವ್ಯವಸ್ಥೆ ಇನ್ನೂ ಬಂದಿಲ್ಲ ಎಂದು ಹೇಳಿದ ಮಾತಿಗೆ ಪ್ರತಿಕ್ರಿಯುಸುತ್ತಾ "ನೋಡ್ರೀ ನಿಮ್ಮೂರಿಗೆ ಲೈಟ್ ಬಂದಿಲ್ಲಾ, ಸ್ವಾತಂತ್ರ್ಯ ಬಂದು ೩೧ ವರ್ಷಆದ್ರೂ ಲೈಟ್ ಬಂದಿಲ್ಲಾ ಅಂದ್ರೆ ಇದೆ ತೋರ್ಸುತ್ತೇ ಹರಿಜನ ಗಿರಿಜನರು ಭಾರತದೇಶದ ಕತ್ತಲ್ಲಿ ಭೂತಪ್ರೇತಗಳಂತೆ ವಾಸಿಸುತ್ತಾ ಇದ್ದಾರೆ ಅನ್ನೂದನ್ನ. ನಿಮ್ಮ ಘೋರಾಂಧಕಾರವನ್ನು ಬಿಡಿಸಿ ಮನುಷ್ಯರನ್ನಾಗಿ ಮಾಡಬೇಕು ಅಂತ ಈ ಇಂಟ್ರಾವ್ಯೂ ಕರೆದಿದ್ದೀವಿ" ಎಂದು ಹೇಳುತ್ತಾನೆ. ಈ ಮಾತುಗಳಲ್ಲಿ ವ್ಯವಸ್ಥೆಯ ಬಗೆಗೆ ವ್ಯಂಗ್ಯ ಹಾಗೂ

ದಲಿತರನ್ನು ಕುರಿತ ವಿಡಂಬನೆ ಅಭಿವ್ಯಕ್ತಗೊಂಡಿದೆ. 'ಲೈಟ್' ಎನ್ನುವುದು ಇಲ್ಲಿ ಬೆಳಕಿನ, ಪ್ರಜ್ಞೆಯ ಸಂಖ್ಯೆತವಾಗಿ ನಾಟಕಕಾರರು ಬಳಸಿದ್ದಾರೆ. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದಲಿತರ ಬದುಕು ಕತ್ತಲೆಯಾಗಿಯೇ ಕರಗಿಹೋಗಿದೆ ಹಾಗೂ ದಲಿತರಲ್ಲಿ ತಮ್ಮ ಸ್ಥಿತಿಯ ಬಗೆಗೆ ಇಂದಿಗೂ ಪ್ರಜ್ಞೆ ಮೂಡದಿರುವುದನ್ನು ಇದು ಅರ್ಥೈಸುತ್ತದೆ. ಸಂದರ್ಶನ ಸಂದರ್ಭದಲ್ಲಿ ಪುಟ್ಟಲಕ್ಕಮ್ಮ ಹೇಳುವ 'ನನ್ನ ತಂದೆಯ ಹೆಸರು ರಾವಳಯ್ಯ', ನಮ್ಮ ಊರು 'ಬೆಂಕಿಪುರ' ಎಂಬ ಮಾತುಗಳು ನಾಟಕದಲ್ಲಿ ಸಾಂಕೇತಿಕವಾಗಿ ಬಳಕೆಯಾಗಿದೆ. ರಾವಳಯ್ಯ, ರಾವಣ ಎಂಬ ಹೆಸರು ದಲಿತರ ಚಾರಿತ್ರಿಕ ಹಿನ್ನಲೆಯನ್ನು ಬೆಂಕಿಪುರ ಎಂಬುದು ದಲಿತರ ಬದುಕು ಎಷ್ಟು ಭೀಕರವಾದುದು ಎಂಬುದನ್ನು ಅಥೈಸುತ್ತದೆ. ಜೊತೆಗೆ ಜಾತಿಯ ದೃಷ್ಟಿಯಿಂದ ದಲಿತರನ್ನು ತುಚ್ಛೀಕರಿಸುವ ಮೇಲ್ವರ್ಗದವರು ದಲಿತರ ಹೆಣ್ಣು ಮಕ್ಕಳ ವಿಷಯದಲ್ಲಿ ಕಾಮ ಪಿಶಾಚಿಗಳಾಗಿ ವರ್ತಿಸುವುದು ಹಯವದನರಾವ್ ಪುಟ್ಟಲಕ್ಕಮ್ಮನೊಡನೆ ನಡೆದುಕೊಳ್ಳುವ ರೀತಿಯಿಂದ ತಿಳಿದುಬರುತ್ತದೆ. ಜೊತೆಗೆ ಆಕೆ ಹೇಳುವ ಸಾಯಿಬಾಬ, ಮಾತೆಮಹಾದೇವಿ, ಗುರುಬಾಲಲೀಲ ಕಾಲೇಜುಗಳ ಹೆಸರುಗಳು ಭಾರತದಲ್ಲಿ ಶಿಕ್ಷಣವ್ಯವಸ್ಥೆ ಸಂಪ್ರದಾಯಸ್ಥರ, ಮಠಮಾನ್ಯಗಳ ಹಿಡಿತಕ್ಕೆ ಸಿಕ್ಕಿರುವುದನ್ನು ತಿಳಿಸುತ್ತವೆ.

'ಪಂಚಮ' ನಾಟಕಲದಲ್ಲಿ ಶೋಷಿತರು ಪ್ರತಿಭಟಿಸುವ ಬದಲು ದಲಿತ ಪ್ರಜ್ಞಾವಂತ ಸಮುದಾಯ ಬ್ರಾಹ್ಮಣೀಕರಣಗೊಳ್ಳುತ್ತಲೇ ತಮ್ಮ ಮೂಲನೆಲೆಗೆ ತಾಜಾ ಶತ್ರುಗಳಾಗಿ ಪರಿವರ್ತನೆಗೊಳ್ಳುತ್ತಿರುವುದರ ಬಗೆಗೆ ನಾಟಕಕಾರರಿಗೆ ಸ್ವಲ್ಪ ವಿಷಾದ ವ್ಯಕ್ತವಾಗುತ್ತಿರುವಂತೆ ಕಂಡುಬರುತ್ತದೆ. ಶೇಷಾದ್ರಿ ಎಂಬ ಯುವಕ ತನ್ನ ತಂದೆ ತಾಯಿ ಇಟ್ಟಿದ್ದ 'ಚಿಕ್‌ಯಂಗಟ' ಎಂಬ ಹೆಸರನ್ನು ಬದಲಾಯಿಸಿಕೊಂಡು 'ಶೇಷಾದ್ರಿ ಎಸ್.' ಎಂಬುದಾಗಿ ಇಟ್ಟುಕೊಂಡಿದ್ದಾನೆ. ತನಗೆ ಹೆಸರಿಟ್ಟ ತಂದೆತಾಯಿಗಳನ್ನು ಅನಾಗರೀಕರು ಎಂದು ನಿಂದಿಸುತ್ತಾನೆ. ಜೊತೆಗೆ ತಮ್ಮ ಮನೆಯಲ್ಲಿದ್ದ ದಲಿತ ಮೂಲದ ಮುಳ್ಳುಕಟ್ಟಮ್ಮ ಎಂಬ ದೇವರ ಫೋಟೋವನ್ನು ಬೀಸಾಡಿ ಶ್ರೀಶ್ರೀಶ್ರೀ ರಾಘವೇಂದ್ರಸ್ವಾಮಿಗಳ ಫೋಟೋವನ್ನು ಇಟ್ಟುಕೋಂಡಿರುವುದಾಗಿ ಹಯವದನರಾವ್ ಜೊತೆ ಹೇಳಿಕೊಳ್ಳುತ್ತಾನೆ.

'ಪಂಚಮ' ಮತ್ತು ನೆಲಸಮ ನಾಟಕಗಳು ಸಮಕಾಲೀನ ಸಮಸ್ಯೆಯನ್ನು ವಸ್ತುಗಳನ್ನಾಗಿ ಒಳಗೊಂಡಿದ್ದು ವೈಶಿಷ್ಟ್ಯ ಪೂರ್ಣವಾಗಿವೆ. ಸಿದ್ಧಲಿಂಗಯ್ಯನವರು ತಾವು ಕಂಡುಂಡ ಜಗತ್ತನ್ನೇ ಎರಡೂ ನಾಟಕಗಳ ಹಿನ್ನಲೆಯಲ್ಲಿ ತಾತ್ವಿಕ ಚರ್ಚೆಗೆ ಒಳಗು ಮಾಡಿದ್ದಾರೆ. ಸಮಕಾಲೀನ ಜನಜೀವನವನ್ನು ಪ್ರತಿಬಿಂಬಿಸುವ ಸಾಮಾಜಿಕ ನಾಟಕ, ಕಥೆ, ಕಾದಂಬರಿಗಳು ಒಂದು ಸಮುದಾಯದ ಆತ್ಮಚರಿತ್ರೆ ಇದ್ದತೆ ತನ್ನ ಕಾಲದ ಸಮಾಜದ ಲೋಪದೋಷಗಳನ್ನು ಕುಂದು ಕೊರತೆಗಳನ್ನು ಉನ್ನತಿ ಅವನತಿಯನ್ನು ವಿಮರ್ಶಿಸಿ ಕಾರಣವನ್ನು ಸಮಕಾಲೀನ ಐತಿಹಾಸಿಕ ಹಿನ್ನಲೆಯಲ್ಲಿ ಹುಡುಕಿ ಪರಿಹಾರವನ್ನು ಸೂಚಿಸಬಲ್ಲ ಸಾಮಾಜಿಕ ನಾಟಕಕಾರನಿಗೆ ತಾನು

ಬದುಕುತ್ತಿರುವ ಪರಿಸರದ ಸಮಗ್ರ ಕಲ್ಪನೆಯಿರಬೇಕಾಗುತ್ತದೆ" ಎಂಬ ಮರುಳಸಿದ್ದಪ್ಪನವರ ಮಾತುಗಳು ಸಿದ್ಧಲಿಂಗಯ್ಯನವರ ನಾಟಕಗಳಿಗೆ ಸಂಪೂರ್ಣವಾಗಿ ಅನ್ವಯವಾಗುತ್ತದೆ.

'ನೆಲಸಮ' ನಾಟಕದಲ್ಲಿ 'ಪಂಚಮ' ನಾಟಕದಲ್ಲಿನ ಹಯವದನರಾವ್ ನಂತೆ ಮಹಾರಾಣಿ ಮತ್ತು ವಿಜಯ ಶೋಷಿತರಾಗಿ ಕಂಡುಬಂದರೆ ಚನ್ನ ಮಾತ್ರ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡರೂ ಸ್ವಲ್ಪ ಮೊತ್ತದ ಪ್ರತಿಭಟನೆ ಅವನು ಆಡುವ ವ್ಯಂಗ್ಯಮಾತುಗಳಿಂದ ತಿಳಿದುಬರುತ್ತದೆ. 'ಪಂಚಮ' ನಾಟಕದ ಪಂಚಮನಸ್ಸು ತೀವ್ರವಾಗಿ ವ್ಯವಸ್ಥೆಯನ್ನು ವಿರೂಧಿಸಲಾರದ, ರಾಜೀಯಾಗುವ ಪಾತ್ರ ಚೆನ್ನನದು.

ಸರ್ವಾಧಿಕಾರಿ ವ್ಯವಸ್ಥೆ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಹಮ್ಮಿಕೊಂಡಿದ್ದ ಹಲವು ಜನವಿರೋಧಿ ಕಾರ್ಯಕ್ರಮಗಳಲ್ಲಿ ಕೊಳಗೇರಿಜನರ ಬದುಕನ್ನು ನಾಶ ಗೊಳಿಸುವುದು ಒಂದು. ಇದನ್ನು ನಾಟಕಗಾರರು ಇಡೀ ನಾಟಕದಲ್ಲಿ ವಸ್ತುನಿಷ್ಟವಾಗಿ ಬಿಂಬಿಸಿದ್ದಾರೆ. ಅಂದಿನ ಸರ್ಕಾರಕ್ಕೂ ಕೊಳಗೇರಿ ನಿರ್ಮೂಲನೆಗೊಳಿಸುವ ಮೂಲ ಉದ್ದೇಶವಿತ್ತ ವಿನಃ ಕೊಳಗೇರಿಯ ಜನರಿಗೆ ಪುನರ್ ವಸತಿಯನ್ನು ಕಲ್ಪಿಸುವ, ಅವರ ಬದುಕನ್ನು ಪುನರ್ ನಿರ್ಮಿಸುವ ಯಾವುದೇ ಜನಪರ ಕಾಳಜಿ ಇರಲಿಲ್ಲವೆಂಬುದು ಒಟ್ಟಾರೆ ನಾಟಕದ ಮೂಲಕ ತಿಳಿದುಬರುತ್ತದೆ.

ಕೊಳಗೇರಿ ನಿರ್ಮೂಲನೆಗಾಗಿ ಅದನ್ನು ಪರಿಶೀಲಿಸಲು ಬಂದ ವಿಜಯ ಅಲ್ಲಿಂದ ಬರುವ ದುರ್ವಾಸನೆಯ ಬಗ್ಗೆ ಹೀಗೆ ಹೇಳುತ್ತಾನೆ. "೨೨ ಏನೇ ಆಗಲಿ ನಮ್ಮ ದೇಶದ ಸೌಂದರ್ಯವನ್ನು ಈ ಗುಡಿಸಲು ಹಾಳು ಮಾಡುತ್ತಿವೆ. ಇಂಡಿಯಾಕ್ಕೆ ಬರುವ ವಿದೇಶಿಯರ ಕಣ್ಣಿಗೆ ಮೊದಲು ಬೀಳುವ ಈ ಮೂಟೆ ಹೊರುವ ಕೊಳಕು ನನ್ಮಕ್ಳಿಂದ ಇಡೀ ದೇಶಕ್ಕೆ ಅವಮಾನ ನಾವು ಮೊದಲು ಇವರನ್ನು ಮುಗಿಸಬೇಕು ೨೨" ಎಂದು ಹೇಳುತ್ತಾನೆ.

ವಿಜಯ ಮಾತಿನಲ್ಲಿ ನಮ್ಮ ಸಂಸ್ಕೃತಿಯನ್ನು ಜಾಗತೀಕರಣಗೊಳಿಸವ ಹುನ್ನಾರ ಹಾಗೂ ಮೂಲನೆಲೆಗಳಿಗೆ ಧಕ್ಕೆ ತರುವಂತಹ ಕಾರ್ಯ ಅಡಗಿದೆ. ವಿದೇಶರಿಗೆ ನಮ್ಮ ಸಂಸ್ಕೃತಿಯ ಯಥಾಸ್ಥಿತಿ ದರ್ಶನವಾಗಬೇಕೆ ವಿನಃ ಅದನ್ನು ಅವರಿಗೆ ಮಾರಾಟ ಮಾಡಬಾರದು. ಬೇರೆಯವರ ಆಕರ್ಷಣೆಗಾಗಿ ನಮ್ಮವರ ಕತ್ತು ಹಿಚುಕುವುದು ಭಾರತೀಯ ಮೌಲ್ಯಗಳಿಗೆ ಸಂಸ್ಕೃತಿಗೆ ವಿರುದ್ಧವಾದ ಗುಣವಾಗಿದೆ ಎಂಬುದು ನನ್ನ ಅಭಿಪ್ರಾಯ.

ವಿಜಯನ ಮಾತಿಗೆ ಬೆಂಬಲಸೂಚಿಸುತ್ತಾ ಚೆನ್ನನು ಅಳುವ ಮಾತುಗಳು ಭಾರತದ ಸಮಾಜವಿರೋಧಿರಾಜಕಾರಣದ ವಿಪರ್ಯಾಸವನ್ನು ಕಟ್ಟಿಕೊಡುತ್ತದೆ. ಹೌದುಪ್ರಭು, ಕಪ್ಪುಮುಖ, ಹರಕಲು ಬಟ್ಟೆ, ಕುರುಚಲುಗಡ್ಡದ ಇವರನ್ನು ನೋಡಿದರೆ ಯಾರಿಗೆ ತಾನೆ ಸಂತೋಷ? ತಾಜ್ ಮಹಲ್, ಕೆಂಪುಕೋಟೆಗಳು ಇರುವಂತ ನಾಡಿನಲ್ಲಿ ಬಡವರು ಇರಲೇಬಾರದು". ಮಹಾರಾಣಿ

ಚೆನ್ನಮ್ಮ ಕೋಡ "[illegible] ವಿದೇಶಿಗರು ಬಂದಾಗ ಈ ಬಡವರು ಎಲ್ಲೆಂದರಲ್ಲೆ ಕಣ್ಣಿಗೆ ಬೀಳುತ್ತಾರೆ, ಭಾರತದ ಮಾನವನ್ನು ಬೀದಿ ಪಾಲು ಮಾಡುತ್ತಾರೆ. ಆ ಗುಡಿಸಲುಗಳು ಒಂದು ಗಳಿಗೆಯೂ ಈ ನಗರದಲ್ಲಿರಲು ಬಿಡಬಾರದು. ಬಡವರು ಎಲ್ಲಾದರೂ ಹೋಗಿ ಬದುಕಲಿ, ಭಾರತದ ಮಾನವು ಉಳಿಯಲಿ [illegible]" ಎಂದು ಹೇಳುತ್ತಾಳೆ.

ಮೇಲಿನ ಮಾತುಗಳಿಂದ ವರ್ಗತಾರತಮ್ಯದ ಪರಿಸರದಲ್ಲಿನ ಬಡವರ ಚಿಂತಾಜನಕ ಸ್ಥಿತಿಯ ಭೀಕರತೆ ಇದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಮೌಲ್ಯಗಳನ್ನು ಮೆಟ್ಟಿನಿಂತ ತುರ್ತುಪರಿಸ್ಥಿತಿ ಬಡವರ, ಶ್ರಮಿಕರ ಬದುಕಿನ ಅಸ್ಥಿತ್ವವನ್ನು ಹೇಗೆ ನುಚ್ಚುನೂರು ಮಾಡಿತು ಎಂಬುದು ತಿಳಿದುಬರುತ್ತದೆ.

'ನೆಲಸಮ' ನಾಟಕ ವರ್ಗಸಂಘರ್ಷದ ಕಥೆಯನ್ನು ಒಳಗೊಂಡಿದ್ದು ಚನ್ನ ವ್ಯವಸ್ಥೆಯೊಂದಿಗೆ ರಾಜಿಯಾಗಿದ್ದರೂ, ಆ ವ್ಯವಸ್ಥೆಯ ಹಲವು ಸಣ್ಣತನಗಳನ್ನು ವ್ಯಂಗ್ಯ ಹಾಗೂ ವಿಡಂಬನಾತ್ಮಕವಾಗಿ ಟೀಕಿಸುವುದನ್ನು ಕಾಣಬಹುದು. ವಿಜಯನನ್ನು ಕುರಿತು ಚನ್ನ ಹೇಳುವ ಮಾತಿನಲ್ಲಿ ಆತನ ದೈನ್ಯಸ್ಥಿತಿಯ ಬಂಡಾಯವಿದೆ "ಇಲ್ಲಾಸ್ವಾಮಿ ನೀವು ಎಂತ ಪ್ರಚಂಡ ಬುದ್ಧಿವಂತರೆಂದು ಪ್ರಕಾಂಡ ಪಂಡಿತರೆಂದೂ ನನಗೆ ಮೊದಲೇ ಗೊತ್ತು. ನಿಮ್ಮಂತಹ ಬುದ್ಧಿಜೀವಿಗಳನ್ನು ನಮ್ಮ ಭಾರತ ಇತ್ತೀಚೆಗೆ ಕಂಡೇ ಇರಲಿಲ್ಲ. ಒಂದು ಸಲ ಸ್ಕೂಟರ್ ಕದ್ದು ಬಚಾವ್ ಆದದ್ದೂ ಸಾಮಾನ್ಯ ಮನುಷ್ಯನಿಗೆ ಸಾದ್ಯವೇ? ಎಸ್.ಎಸ್.ಎಲ್.ಸಿ. ಪೇಲ್ ಆಗಿ ಕೂಡ ಎಂಜಿನಿಯರಿಂಗ್ ಸರ್ಟಿಫಿಕೇಟ್ ಪಡೆಯಲು ನಿಮ್ಮಂತವರಿಗಲ್ಲದೆ ಮತ್ತ್ಯಾರಿಗೆ ಸಾಧ್ಯ ಗುರುವೇ? ಇವನು ಸಾಮಾನ್ಯವಾದ ಸಾಧ್ಯಗಳೇ? ಎಂಬ ಮಾತುಗಳಲ್ಲಿ ಶ್ರೀಮಂತರ ಕುಟಿಲತೆ ಭ್ರಷ್ಟಾಚಾರದ ಮುಖವಾಡವನ್ನು ಪರಿಚಯಿಸುತ್ತದೆ.

ಚನ್ನನ ಪಾತ್ರಕ್ಕಿಂತ ಮಾತಿನಲ್ಲಿ ಆಶಯದಲ್ಲಿ ಪ್ರಬಲವಾದದ್ದು ಪಂಚಮನ ಪಾತ್ರ ಅಸಾಮಾನ್ಯತೆಯ ಶೋಷಕ ವ್ಯವಸ್ಥೆಯಲ್ಲಿ ಕ್ರಾಂತಿಯಿಂದ ಮಾತ್ರ ಅಮೂಲಾಗ್ರವಾಗಿ ಬದಲಿಸಲು ಸಾಧ್ಯ ಎಂಬುದನ್ನು ನಾಟಕಕಾರರು ಪಂಚಮ ಪಾತ್ರದ ಮುಖೇನ ಅಭಿವ್ಯಕ್ತಿಸಿದ್ದಾರೆ. ಮಾರ್ಕ್ಸ್‌ನ ವರ್ಗಹೋರಾಟದ ಸಿದ್ಧಾಂತದಿಂದ ಪ್ರಭಾವಿತರಾಗಿದ್ದ ನಾಟಕಕಾರರು ಅವರ ಆಶಯದಲ್ಲಿ ಪಂಚಮ ಪಾತ್ರದ ಮೊಲಕ್ಕೆ ಅಭಿವ್ಯಕ್ತಿಸಿದ್ದಾರೆ. ಸಂದರ್ಶನಕ್ಕೆ ಬರುವ ಐದನೆ ಅಭ್ಯರ್ಥಿಯಾದ ಪಂಚಮ ಪಾತ್ರದ ಮೂಲಕ ಎಪ್ಪತ್ತರ ದಶಕದ ದಲಿತ ಹೋರಾಟಗಾರರ ಸ್ವರೂಪ ಅವರ ದಿಟ್ಟತನ ಸ್ವಾಭಿಮಾನವನ್ನು ಹಿಡಿದಿದ್ದಾರೆ. ಹಯವದನರಾವ್ ಮತ್ತು ಪಂಚಮನ ನಡುವೆ ನಡೆಯುವ ಸಂಭಾಷಣೆಯಲ್ಲಿ ಪಂಚಮನು ಕೊಡುವ ಒಂದೊಂದು ಉತ್ತರವೂ ಶೋಷಕ ವ್ಯವಸ್ಥೆಯ ಮುಖಕ್ಕೆ ರಾಚುವಂತೆ ಇವೆ. ಶತಮಾನಗಳಿಂದ ಶೋಷಣೆಯ ನೋವುಂಡ ಶೋಷಿತನೊಬ್ಬ ಪ್ರಜ್ಞಾವಂತನಾದಾಗ ಶೋಷಕವ್ಯವಸ್ಥೆಯನ್ನು ಮುಖಾಮುಖಿಯಾಗಿಸಿಕೊಳ್ಳುವ ಪರಿ ಪಂಚಮನ

ಪಾತ್ರದಲ್ಲಿ ನಿರೂಪಿತವಾಗಿದೆ. ಹಯವದನರಾವ್ 'ನಿಮ್ಮಹೆಸರೇನ್ರಿ' ಎಂದು ಕೇಳಿದಾಗ ಪಂಚಮ ಅದಕ್ಕೆ "ನನ್ನ ಹೆಸರು ಹೊಲೆಮಾದಿಗ ಎಂದು ಹೇಳುತ್ತಾನೆ".

ಹಯವದನರಾವ್ : ನಿಮ್ಮನ್ನು ನೀವೆ ಹೀಗೆ ಅವಮಾನ ಮಾಡ್ಕೋತೀರಾ?

ಪಂಚಮ : ಹೊಲೆಮಾದಿಗ ಅಂದ್ರೆ ನಿಮ್ಗೆಸಂತೋಷ ಆಗ್ತದೆ ಅಂತ ನನಗೆ ಗೊತ್ತು ಅದಕ್ಕೆ ನನ್ನ ಹೆಸರು ಹೊಲೆಮಾದಿಗ "

ಇಲ್ಲಿ ಪಂಚಮ ತನ್ನ ಹೆಸರು "ಹೊಲೆಮಾದಿಗ" ಎಂದು ಹೇಳುವಲ್ಲಿ ಸ್ವಾಭಿಮಾನವಿದೆ. ದಲಿತ ಚಳುವಳಿ ಉಂಟುಮಾಡಿದ ಜಾಗೃತಿಯಿಂದಾಗಿ ಅವಮಾನದ ಕಾರಣ ಜಾತಿಯನ್ನು ಬಹಿರಂಗವಾಗಿ ಹೇಳಿಕೊಳ್ಳುವ ಕೀಳರಿಮೆಯಿಂದ ನರಳುತ್ತಿದ್ದ ದಲಿತರು ಅನಂತರ ತಮ್ಮ ಹೆಸರಿನ ಜೊತೆಗೆ ಜಾತಿಸೂಚಕ ಪದಗಳನ್ನು ಧೈರ್ಯವಾಗಿ ಬಳಸತೊಡಗಿದರು ಹಯವದನರಾವ್ ನಿಮ್ಮನ್ನು 'ಹರಿಜನ' ಅಂತ ಗಾಂಧೀಜಿ ನಮ್ಮನ್ನು ಕರೆದಿದ್ದಾರಲ್ಲ ನೀವ್ಯಾಕೆ ಹೊಲೆಮಾದಿಗರೆಂದು ಕರೆದುಕೊಳ್ಳುತ್ತೀರಿ ಎಂದು ಕೇಳುತ್ತಾನೆ. ಅದಕ್ಕೆ ಪಂಚಮ ನಾವು ದೇವರ ಮಕ್ಕಳಲ್ಲ ನಮ್ ತಂದೆತಾಯಿ ಮಕ್ಳು ಅಂತ ಹೇಳುತ್ತಾನೆ. ಕೊನೆಗೆ ಹಯವದರಾವ್ ಮೇಲೆ ಕೈಮಾಡುವಷ್ಟರ ಮಟ್ಟಿಗೆ ಹೋದ ಪಂಚಮ ತನ್ನೆಲ್ಲ ದುಗುಡಗಳನ್ನು ಬಿಚ್ಚುತ್ತಾ ಹೋಗುತ್ತಾನೆ. 'ನಿಮ್ಮ ಅನುಕಂಪದ ಪಂಜರದಲ್ಲಿ ನಮ್ಮನ್ನು ಕೂಡಿಟ್ಟಿದ್ದು ಸಾಕಾಯ್ತು, ನಾವು ನಿಮ್ ಹತ್ರಹಲ್‌ಗಿಂಜ್‌ಕಂಡು ಪೋಸ್ ಕೇಳೋ ಕಾಲ ಹೊರಟು ಹೋಯ್ತು ನಿಮ್ ಸಮಾಜ ವ್ಯವಸ್ಥೆನ ಸಂಪೂರ್ಣವಾಗಿ ಬದಲಾಯಿಸೋವರೆಗೂ ನಮಗೆ ಶಾಂತಿ ಇಲ್ಲಾ, ನಮಗೆ ಸಮಾಜ ಬದಲಾಗಬೇಕು'. ಎಂದು ಹೇಳುತ್ತಾ ಕೊನೆಗೆ ಹಯವದನ್‌ರಾವ್‌ಗೆ ಹೊಡೆಯುತ್ತಾ ದೇಶದ ಮಾನಮರ್ಯಾದೆ ಉಳಿಯಲು ಎಲ್ಲಾ ಹೊಲೆಮಾದಿಗ್ರೂ ಕೂಡ ಇದನ್ನೇ ಮಾಡ್ ಬೇಕು ಎಂಬ ಎಚ್ಚರಿಕೆಯ ಮಾತುಗಳನ್ನು, ಉಳಿದ ದಲಿತರಿಗೆ ಜಾಗೃತಿಯ ಮುನ್ನುಡಿಗಳನ್ನು ಹೇಳುತ್ತಾನೆ.

ಒಟ್ಟಾರೆ ನಾಟಕದ ಉದ್ದೇಶ ಸಾಮಾಜಿಕ ಅಸಮಾನತೆಯ ವಿರುದ್ಧ ಕ್ರಾಂತಿಯ ಕಿಡಿಯನ್ನು ಬಿತ್ತುವುದೇ ಆಗಿದೆ. ನಾಟಕದ ಕೊನೆಯಲ್ಲಿ ಬರುವ ಹಾಡು ನಾಟಕಕಾರರ ಸಾವಿರಾರುನದಿಗಳು' ಕವನಸಂಕಲನದಿಂದ ಆಯ್ದ 'ಹೋರಾಟವೇದಾರಿ' ಎಂಬ ಶೀರ್ಷಿಕೆಯಲ್ಲಿ ಕವನವಾಗಿ ಪ್ರಕಟಗೊಂಡಿದೆ. ದಲಿತರನ್ನು ಕೇಂದ್ರವಾಗಿಟ್ಟುಕೊಂಡು ರಚಿಸಲಾದ 'ಪಂಚಮ' ನಾಟಕದಲ್ಲಿ ನಾಟಕಗಾರರ ಉದೇಶ ಸ್ಪಷ್ಟವಾಗಿಯೇ ವ್ಯಕ್ತಗೊಂಡಿದೆ. ದಲಿತರಲ್ಲೇ ಇರುವ ಸಮುದಾಯ ವಿರೋಧಿ ನಿಲುವುಗಳು ಹಾಗೂ ಕೆಲವು ಸಣ್ಣತನಗಳನ್ನು ಬಿಚ್ಚಿಟ್ಟು ಅವರನ್ನು ಆತ್ಮಾವಲೋಕನಕ್ಕೂ ಹಚ್ಚುವ, ವಾಸ್ತವ ಸಮಾಜದ ಬಗೆಗೆ ಪ್ರಜ್ಞೆಮೂಡಿಸುವ, ತುಳಿಯುವ ಸಮಾಜದ ವಿರುದ್ಧ ದಲಿತರನ್ನು ಕ್ರಾಂತಿಗೆ ಅಣಿಗೊಳಿಸುವುದು ನಾಟಕಕಾರರ ಪ್ರಧಾನ ಆಶಯವಾಗಿದೆ. ಈ ನಾಟಕದಲ್ಲಿ

ಬರುವ ಒಂದೊಂದು ಪಾತ್ರದ ಮುಖೇನ ವಿದ್ಯಾವಂತ ದಲಿತರ ಮನಸ್ಥಿತಿ ಹಾಗೂ ತೊಳಲಾಟವನ್ನು ನಾಟಕಗಾರರು ಅನಾವರಣ ಮಾಡುತ್ತಾ ಹೋಗುತ್ತಾರೆ. ಸ್ವತಂತ್ರ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಕೂಡ ಅಧಿಕಾರಶಾಯಿ ಹಾಗೂ ಬ್ರಾಹ್ಮಣಶಾಹಿ ವರ್ಗದಲಿತರನ್ನು ಹೇಗೆ ವಂಚಿಸಲಾಗುತ್ತಿದೆ ಎಂಬುದನ್ನು ಚಿತ್ರಿಸಲಾಗಿದೆ.

'ಪಂಚಮ' ನಾಟಕದ ಮೂಲಕ ಮನುಷ್ಯ – ಮನುಷ್ಯರ ನಡುವಿನ ಅಮಾನವೀಯ ಅಂತರವನ್ನು ಇಲ್ಲವಾಗಿಸುವ ಮತ್ತು ಜಾತಿವರ್ಗರಹಿತ ಸಮಸಮಾಜದ ಅಸ್ತಿತ್ವದ ಕಾತರತೆ ಹೇಗೆ ವ್ಯಕ್ತವಾಗಿದೆ ಎಂಬುದನ್ನು ತಿಳಿಯಬಹುದು. ಶೋಷಿತ ಸಮುದಾಯದ ಅರ್ಥಪೂರ್ಣ ಆಂತರಂಗಿಕ ಬದಲಾವಣೆಯು ಶೋಷಕ ಸಮುದಾಯವನ್ನು ಮಾನವ ಸಮಾಜದ ನಿರ್ಮಾಣದ ತೆಕ್ಕೆಗೆ ತರಬಹುದು ಎಂಬುದನ್ನು ಇದು ಧ್ವನಿಸುತ್ತದೆ.

ಪರಿಣಾಮದ ದೃಷ್ಟಿಯಿಂದ 'ಪಂಚಮ'ಕ್ಕಿಂತ 'ನೆಲಸಮ' ನಾಟಕ ಓದುಗರ ಅಥವಾ ನೋಡುಗರ ಪ್ರಜ್ಞೆಯಲ್ಲಿ ಬಡವರ, ತುಳಿತಕ್ಕೊಳಪಟ್ಟವರ ಬದುಕಿನ ಸಮಸ್ಯೆಗಳ ಬಗ್ಗೆ ಚಿಂತನೆಯನ್ನು ಹುಟ್ಟುಹಾಕಬಲ್ಲದು. 'ಪಂಚಮ'ದ ಕ್ರಾಂತಿಕಾರಿಯ ಗೆಲುವಿಗಿಂತ 'ನೆಲಸಮ'ದ ದಲಿತರ ದುರಂತ ಆಳವಾಗಿ ಮನಸ್ಸಿನಲ್ಲಿ ಬೇರೂರುತ್ತದೆ. ಸಮಕಾಲೀನ ಘಟನೆಯೊಂದನ್ನು ಆಧರಿಸಿ ರಚಿಸಲಾಗಿರುವ ಈ ನಾಟಕದ ಪಾತ್ರ ಪರಿಪೋಷಣೆ ಮತ್ತು ಸಂಭಾಷಣೆಗಳಲ್ಲಿ ಯಕ್ಷಗಾನ ಸಂಪ್ರದಾಯಧಾಟಿಯನ್ನು ಯಶಸ್ವಿಯಾಗಿ ಅಳವಡಿಸಿಕೊಂಡಿದ್ದಾರೆ. ಇಲ್ಲ ಹಾಡುಗಳು ಭಾವತೀವ್ರತೆಯಿಂದ ಕೂಡಿದ್ದು ದುರಂತದ ನೋವನ್ನು ಪರಿಣಾಮಕಾರಿಯಾಗಿ ಮಂಡಿಸುತ್ತವೆ. ಮೇಲುಜಾತಿ ಮತ್ತು ವರ್ಗದ ಅನ್ಯಾಯ ಅತ್ಯಾಚಾರಗಳನ್ನು ಬಯಲಿಗೆಳೆಯುವ ಅವರ ನಾಟಕಗಳು ತಮ್ಮವರ ಕೀಳರಿಮೆ, ದುರಾಸೆ, ಹೊಣೆಗೇಡಿತನಗಳನ್ನು ಮರೆತಿಲ್ಲ. ಈ ಎರಡೂ ನಾಟಕಗಳ ಮೂಲಕ ಸಿದ್ಧಲಿಂಗಯ್ಯನವರು ಶೋಷಕ ವ್ಯವಸ್ಥೆಯ ದೌರ್ಜನ್ಯ, ದಬ್ಬಾಳಿಕೆ, ಶೋಷಿತಸಮುದಾಯದ ಅಸಹಾಯಕತೆ, ದುಸ್ಥಿತಿಯನ್ನು ಕುರಿತು ವಿವೇಚಿಸಿದ್ದಾರೆ. ಜೊತೆಗೆ ಶೋಷಿತರು ಪ್ರಜ್ಞಾವಂತರಾಗಿ, ಸಂಘರ್ಷಾತ್ಮಕ ಧೋರಣೆ ಮೂಲಕವಾದರೂ ಸಾಮಾಜಿಕ ಬಲಾವಣೆಗೆ ಮುಂದಾಗಬೇಕು ಎಂಬ ತಮ್ಮ ಆರೋಗ್ಯಕರ ನಿಲುವನ್ನು ಈ ನಾಟಕಗಳಲ್ಲಿ ಪ್ರತಿಪಾದಿಸಿರುವುದು ಅವರಿಗಿರುವ ಸಾಮಾಜಿಕ ಪ್ರೇಮವನ್ನು ತಿಳಿಸುತ್ತದೆ. ಮಾರ್ಕ್ಸ್‌ವಾದಿ ಚಿಂತನೆಯ ಪ್ರತಿಪಾದಕರಾದ ಸಿದ್ಧಲಿಂಗಯ್ಯನವರು ವರ್ಗ ಸಂಘರ್ಷದ ತಾತ್ವಿಕ ಗ್ರಹಿಕೆ ಹಿನ್ನಲೆಯಲ್ಲಿ ಪಂಚಮ, ನೆಲಸಮ, ಏಕಲವ್ಯ ನಾಟಕಗಳನ್ನು ರಚಿಸಿದ್ದಾರೆ. ಜಾತಿ, ವರ್ಗ, ವರ್ಣರಹಿತ ಮಾನವೀಯ ಸಮಾಜ ನಿರ್ಮಿತಿಯ ಕಳಕಳಿ ಇವರ ಒಟ್ಟು ನಾಟಕದ ಆಶಯವಾಗಿದೆ. ಕ್ರಾಂತಿ ಮುಖೇನವಾದರೂ ಈ ಸಮಾಜದ ಏರುಪೇರುಗಳನ್ನು ಹೋಗಲಾಡಿಸಿ ಆದರ್ಶಸಮಾಜವನ್ನು ಕಟ್ಟಬೇಕು ಎಂಬುದು ಇವರ ನಾಟಕಗಳ ಧೋರಣೆಯಾಗಿದೆ. 'ಪಂಚಮ' ನಾಟಕವು ಶೋಷಕ ವ್ಯವಸ್ಥೆಯ ಕುತಂತ್ರಗಳ ಬಗೆಗೆ ದಲಿತ ಸಮುದಾಯದಲ್ಲಿರುವ

ಅಪ್ರಜ್ಞಾಸ್ಥಿತಿಯನ್ನು ಹಾಗೂ ದಲಿತ ಪರ ಸಮುದಾಯ ಶೋಷಕ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಬೇಕೆಂಬ ನಿಲುವನ್ನು ಅಭಿವ್ಯಕ್ತಿಸುತ್ತದೆ. 'ನೆಲಸಮ' ನಾಟಕವು ವರ್ಗ ಹಾಗೂ ಅಧಿಕಾರಿಶಾಹಿ ವ್ಯವಸ್ಥೆಯಲ್ಲಿ ಬಡವರ ಬದುಕಿನ ಧಾರುತೆಯನ್ನು ಬಿಂಬಿಸುತ್ತದೆ. ವಿಡಂಬನೆ ಮತ್ತು ಹಾಸ್ಯದ ಮೂಲಕವೇ ಶೋಷಕ ಮತ್ತು ಶೋಷಿತ ವರ್ಗದ ಪರಸ್ಪರ ಸಂಬಂಧವನ್ನು ಬಹಳ ಚೆನ್ನಾಗಿ ಕಾವ್ಯಾತ್ಮಕವಾಗಿ ಸಿದ್ಧಲಿಂಗಯ್ಯನವರು ಮಂಡಿಸುತ್ತಾರೆ ಎಂಬ ಕೆ. ಮರುಳಸಿದ್ದಪ್ಪನವರ ಮಾತುಗಳು ನೂರಕ್ಕೆ ನೂರರಷ್ಟು ಸತ್ಯವಾಗಿದೆ.

'ಏಕಲವ್ಯ' ನಾಟಕದಲ್ಲಿನ ಏಕಲವ್ಯನ ಪಾತ್ರದಲ್ಲಿ ಹೊಸತನದ ಆಶಯವಿದೆ. ಉಳ್ಳವರ ಕುತಂತ್ರ ನಡುವೆಯೂ ತನ್ನ ಛಲ, ಆತ್ಮವಿಶ್ವಾಸ, ಆತ್ಮಾಮಭಿಮಾನ, ದೃಢಸಂಕಲ್ಪ ಹಾಗೂ ಸ್ವಾಭಿಮಾನಗಳನ್ನು ಕಳೆದುಕೊಳ್ಳದೆ, ಬದುಕಿನ ಅಸ್ತಿತ್ವದ ಬಗೆಗಿನ ಅದಮ್ಯ ಚೈತನ್ಯವನ್ನು ಉಳಿಸಿಕೊಳ್ಳುವ ವ್ಯಕ್ತಿತ್ವವಾಗಿ ಏಕಲವ್ಯನ ಪಾತ್ರ ವ್ಯಕ್ತಗೊಂಡಿದೆ. ಪಾತ್ರಗಳು ನಾಟಕಕಾರನ ಆಲೋಚನೆ ಹಾಗೂ ಧೋರಣೆಯ ಅಭಿವ್ಯಕ್ತಿಯ ಮಾಧ್ಯಮಗಳಾಗಿರುತ್ತವೆ. ಆಪಾತ್ರಗಳ ವ್ಯಕ್ತಿತ್ವದಲ್ಲಿಯೂ ನಾಟಕಗಾರರ ವ್ಯಕ್ತಿತ್ವ ಬೆರೆತು ಹೋಗುತ್ತದೆ. 'ಪಂಚಮ' ಮತ್ತು 'ಏಕಲವ್ಯ' ವ್ಯವಸ್ಥೆಯ ವಿರುದ್ಧ ಪ್ರತಿಭಟನಾ ಸ್ವರೂಪದ ವ್ಯಕ್ತಿತ್ವವುಳ್ಳ ಪಾತ್ರಗಳಾಗಿ ನಿರ್ಮಾಣಗೊಂಡಿವೆ. ಸಮಕಾಲೀನ ಸಂದರ್ಭದಲ್ಲಿ ಜಾತಿ, ವರ್ಗ, ವರ್ಣ ವ್ಯವಸ್ಥೆಯಲ್ಲಿನ ಮನುಷ್ಯವಿರೋಧಿ ನಿಲುವುಗಳನ್ನು 'ಏಕಲವ್ಯ' ನಾಟಕ ವಸ್ತುವಾಗಿಸಿಕೊಂಡಿದೆ. ಬಲಗೈ ಹೆಬ್ಬೆರಳು ಕಳೆದುಕೊಂಡ 'ಏಕಲವ್ಯ' ತನ್ನ ಎಡಗೈ ಹೆಬ್ಬೆರಳಿನಿಂದ ತನ್ನ ಛಲವನ್ನು ಸಾಧಿಸಿಕೊಳ್ಳಲು ಏಕಲವ್ಯ ಪಂಚಮನಿಗಿಂತಲೂಎತ್ತರಕ್ಕೆ ಏರಬಲ್ಲ ಪಾತ್ರವಾಗಿದೆ.

'ಏಕಲವ್ಯ' ನಾಟಕದ ಆರಂಭದ ಏಳು ದೃಶ್ಯಗಳಲ್ಲಿ ಸಿದ್ಧಲಿಂಗಯ್ಯನವರು ಆವರೆಗೆ ಬಂದಿದ್ದ ಏಕಲವ್ಯನ ಕುರಿತಾದ ನಾಟಕಗಳ ಕಥಾವಸ್ತುವನ್ನೇ ಪುನರ್ ರೂಪಿಸದ್ದಾರೆ. ಆನಂತರದ ನಾಲ್ಕು ದೃಶ್ಯಗಳು, ಇವರ ಕ್ರಾಂತಿಕಾರಕ ಸಮಾಜಮುಖಿ ಧೋರಣೆಯ ಅಭಿವ್ಯಕ್ತಿಯಾಗಿದೆ. ನಾಟಕದ ಎಂಟನೆ ದೃಸ್ಯವು ಸೈನಿಕರ ನಡುವಿನ ಪರಸ್ಪರ ಸಂಭಾಷಣೆ ವಿನೋದದ ಹಿನ್ನಲೆಯಲ್ಲಿ ಚಿತ್ರಿತಗೋಂಡಿದೆ. ಏಕಲವ್ಯನ ಕುರಿತಾದ ಇತರ ನಾಟಕಗಳಿಗಿಂತ ಭಿನ್ನವಾಗಿ ಈ ನಾಟಕವು ಸಾಮಾಜಿಕ ಸಂದೇಶ ಮತ್ತು ಆಲೋಚನೆಯಲ್ಲಿ ವಿಭಿನ್ನ ದೃಷ್ಟಿಕೋನವುಳ್ಳದ್ದಾಗಿದೆ. ಈ ನಾಟಕದಲ್ಲಿ ದಲಿತರ ಎಚ್ಚತ್ತ ಪ್ರಜ್ಞೆ ಹೋರಾಟವಾಗಿ ಘೋಷಿತಗೊಂಡಿರುವುದನ್ನು ಕಾಣಬಹುದು.

ಕುರುಕ್ಷೇತ್ರ ಯುದ್ಧದ ವಿವರದೊಮದಿಗೆ ತೆರೆದುಕೊಳ್ಳುವ ಈ ನಾಟಕದ ಆರಂಭದ ಹಾಡಿನಲ್ಲೆ ನಾಟಕಕಾರರು ಇಡೀ ನಾಟಕದ ವಸ್ತು ವಿಷಯ, ಧೋರಣೆಯನ್ನು ಕುರಿತು ಧ್ವನಿಪೂರ್ಣವಾಗಿ ಅಭಿವ್ಯಕ್ತಿಸಿದ್ದಾರೆ. ಪದ್ಯರೂಪದಲ್ಲಿರುವ ಈ ಸಾಲುಗಳು ನಾಟಕದ ಆರಂಭವನ್ನೂ ಹಾಗೂ ಅಂತ್ಯದ ಪರಿಣಾಮವನ್ನು ಸಮಗ್ರವಾಗಿ ಪರಿಚಯಿಸುತ್ತದೆ.

"ಅಡವಿಯ ಬಾಲನು ಏಕಲವ್ಯನು
ಹೋರಾಟ ಮಾಡಿದ ಕಥೆಯಕೇಳಿ
ಕಾಡಿನ ಹೂವೊಂದು ಊರಿನಗುಡಿಯಲ್ಲಿ
ಪೂಜೆಗೆ ಸಲ್ಲದೆ ಹೋಯಿತಲ್ಲ
ಮೇಲು ಕೀಳಿನ ಜಾಲಜಗವೆಲ್ಲ ಆವರಿಸಿ
ತನ್ನಾಟ ಆಡಿದ ಕಥೆಯ ಕೇಳಿ
ಗಿಳಿಯೊಂದು ಹಾಡಲು ಉಳಿದಂತ ಮೃಗಗಳು
ದನಿಕಿತ್ತು ಕೊಂಡಂಥ ಕಥೆಯ ಕೇಳಿ
ಊರು ಕಾಡಿನ ನಡುವೆ ನೂರು ಅಂತರ ಮೂಡಿ
ಧರೆ ಹತ್ತಿ ಉರಿದಂತ ಕಥೆಯ ಕೇಳಿ"

ಈ ಸಾಲುಗಳು ನಿಸರ್ಗ ಸಹಜ ಸಂಸ್ಕೃತಿಕವಾಗಿರುವ ಏಕಲವ್ಯಗೆ ಆಗಿರುವ ಅಪಮಾನ , ಅನ್ಯಾಯವನ್ನು ಹೇಳುತ್ತವೆ. ಹಾಡು ಮುಗಿದ ಕೂಡಲೆ ಬೋರಣ್ಣ ಮತ್ತು ಗಾಳಣ್ಣ ಎಂಬ ಪಾತ್ರದಾರಿಗಳು ಸಂಭಾಷಣೆ ಕಂಡುಬರುತ್ತದೆ. ಗಾಳಣ್ಣ, ಬೋರಣ್ಣ ಎಂಬ ಪಾತ್ರಗಳು ಇಲ್ಲಿ ಪ್ರಗತಿಪರ ಚಿಂತನಾ ಮನೋಭಾವವನ್ನು ಹೊಂದಿರುವಂತೆ ಕಂಡುಬರುತ್ತವೆ. ರಾಜನ ಅಪ್ಪಣೆ ಮೇರೆಗೆ ಕಾಡಿಗೆ ಮರಕಡಿಯಲು ಬಂದ ಸೈನಿಕ ಮತ್ತು ಶೆಟ್ಟಿಯರನ್ನು ವಿರೋಧಿಸುತ್ತಾರೆ. ಸೈನಿಕನನ್ನು 'ಈ ಕಾಡು ನಿಮ್ಮಪ್ಪಂದ' ಎಂದು ಪ್ರಶ್ನಿಸುವಷ್ಟು ಗಟ್ಟಿತನದ ಪಾತ್ರ ಬೋರಣ್ಣನದು. ಅದಕ್ಕೆ ಪ್ರತಿಕ್ರಿಯೆಯಾಗಿ ಶೆಟ್ಟಿ "ನಮ್ಮ ರಾಜ ಅಪ್ಪಣೆ ಮಾಡದಿದ್ದರೆ ಪ್ರಜೆಗಳಿಗೆ ರಾತ್ರೀಲಿಕನಸು ಕೂಡ ಬೀಳಲ್ಲ' ಎಂದು ಶೆಟ್ಟಿಯ ಮಾತುಗಳು ರಾಜಪರಂಪರೆಯ ನಿರಂಕುಶಾಧಿಕಾರವನ್ನು ಪರಿಚಯಿಸುತ್ತದೆ. ಜೊತೆಗೆ ಅಧಿಕಾರಶಾಹಿ ವ್ಯವಸ್ಥೆ ಹೇಗೆ ತನ್ನ ಕಪಿಮುಷ್ಟಿಯಲ್ಲಿ ಇಡೀ ಸಾಮಾಜಿಕ ಬದುಕನ್ನು ನಿಯಂತ್ರಿಸಿತ್ತು ಎಂಬುದನ್ನು ನಿಸರ್ಗಸಹಜವಾದ ಕಾಡು ರಾಜಶಾಹಿಯ ದೌರ್ಜನ್ಯದಿಂದ ನಾಶವಾಗುತ್ತಿರುವುದನ್ನು ತಿಳಿಸುತ್ತದೆ. ಆಡಳಿತ ವ್ಯವಸ್ಥೆ ತೆರೆಮರೆಯಲ್ಲಿ ಕಾಡನ್ನು ದೋಚುವವರೊಟ್ಟಿಗೆ ಶಾಮೀಲಾಗಿ ಕಾಡಿನ ಸಂಪತ್ತನ್ನು ಕಬಳಿಸುತ್ತಿರುವ ವಾಸ್ತವ ಸತ್ಯವನ್ನು ನಾಟಕದಲ್ಲಿ ನೋಡಬಹುದಾಗಿದೆ.

ಕಾಡು ಮತ್ತು ನಾಡಿನ ನಡುವೆ ನಡೆಯುವ ಸಂಘರ್ಷವೇ ನಾಟಕದ ಮುಖ್ಯವಸ್ತು. ಕಾಡನ್ನು ನಾಶಮಾಡದೆ ಅದರೊಟ್ಟಿಗೆ ಅವಿನಾಭಾವ ಸಂಬಂಧ ಹೊಂದಿದ ಜನಸಮೂಹ ಕಾಡು ಕಡಿಯುವುದನ್ನು ವಿರೋಧಿಸುವಾಗ, ಕಾಡಿನ ಮುಗ್ಧ ಜನರ ಮೇಲೆ ಪಟ್ಟಣ ಸೈನಿಕರು ನಡೆಸಿದ ದಾಳಿಯನ್ನು ಎರಡನೇ ದೃಶ್ಯದಲ್ಲಿ ನೋಡಬಹುದು. ಗಾಳಣ್ಣ, ಬೋರಣ್ಣ, ಕಾಡಣ್ಣ, ಈರಣ್ಣ ಎಂಬ ಕಾಡನ್ನು ಆಸರೆಯಾಗುಳ್ಳ ಜನರು ಏಕಲವ್ಯನಿಗೆ ಕಾಡಿನ ನಾಶದ ಬಗ್ಗೆ ವಿವರಿಸುತ್ತಾರೆ. ಆಗ

ಏಕಲವ್ಯ ಈ ನಾಗರೀಕರು ಕಾಡಿನ ಮೇಲೆ ನಡೆಸುತ್ತಿರುವ ದಾಳಿಯನ್ನು ತಡೆಯಲು ತಾಯಿಯ ಅಣತಿಯ ಮೇರೆಗೆ ದ್ರೋಣಾಚಾರ್ಯನ ಬಳಿಗೆ ಹಸ್ತಿನಾವತಿಗೆ ಬರುತ್ತಾನೆ.

ಶ್ರೇಣೀಕೃತ ಜಾತಿ ಆಧಾರಿತ ಸಾಮಾಜಿಕ ವ್ಯವಸ್ಥೆಯ ನಡವಳಿಕೆಯನ್ನು ಬಲ್ಲ ಏಕಲವ್ಯನ ಸೋದರಮಾವ ಏಕಲವ್ಯನನ್ನು ಕುರಿತು "ಏಕಲವ್ಯ ನೀನು ದ್ರೋಣಾಚಾರ್ಯರ ಬಳಿ ಇದ್ದರೆ ಅವರು ವಿದ್ಯೆ ಕಲಿಸಲ್ಲ, ನೀನು ಹೋದರೆ ಅವರಿಗೆ ಸೂತಕದಂತೆ ಕಾಡುತ್ತದೆ " ಎಂದು ಹೇಳುತ್ತಾನೆ. ಇದನ್ನೇ ಕುವೆಂಪು ಅವರ 'ಬೆರಳ್ಗೆ ಕೊರಳ್' ನಾಟಕದಲ್ಲಿ ಏಕಲವ್ಯನ ತಂದೆ "ಅವರ್ ಪಾರ್ವರ್, ಬಯದರ್ಗೆ, ಒವಜುಗೆಯ್ಯಲ್ಕೆ ಒಪ್ಪರ್, ನಿನ್ನನ್ ಗಹಗಹಿಸಿ ನಕ್ಕು ನೂಂಕುವರ್" ಎಂದು ಹೇಳುತ್ತಾನೆ. ಶ್ರೇಣೀಕೃತವಾದ ಜಾತಿ ಪ್ರಣೀತಿ ವ್ಯವಸ್ಥೆಯಲ್ಲಿ ಕೆಳಜಾತಿಯವನೊಬ್ಬ ವಿದ್ಯೆ ಕಲಿಯುವ ಹಂಬಲದಿಂದ ಬಂದಾಗ, ಮೇಲ್ವರ್ಗದ ಮನಸ್ಸುಗಳು ಜಾತಿಯನ್ನು ಮುಂದುಮಾಡಿ ಹೇಗೆ ಆತನನ್ನು ನಿಂದಿಸುತ್ತದೆ ಎಂಬುದನ್ನು ಮೇಲಿನ ಮಾತುಗಳಿಂದ ತಿಳಿಯಬಹುದು. ದ್ರೋಣ ಮತ್ತು ಏಕಲವ್ಯ ನಡುವೆ ನಡೆಯುವ ಸಂಬಾಷಣೆ ಕೂಡ ಮೇಲಿನ ಮಾತಿಗೆ ಒತ್ತುಕೊಡುತ್ತವೆ. ಏಕಲವ್ಯನ ವಿದ್ಯಾಕಾಂಕ್ಷೆಗೆ ದ್ರೋಣಾಚಾರ್ಯರು "ನಿನಗೆ ಗುರು ಮುಖೇನ ವಿದ್ಯೆ ಕಲಿಸಲು ಶಾಸ್ತ್ರದ ಅನುಮತಿಯಿಲ್ಲ, ನಿನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಲು ಸಾಧ್ಯವಿಲ್ಲ" ಎಂದು ಹೇಳುತ್ತಾನೆ. ಈ ಮಾತಿಗೆ ಪೂರಕವಾಗುವಂತೆ ಈ ಬಗೆಯ ಅಸಮಾನತೆ ನಿಸರ್ಗದಷ್ಟೇ ಸಹಜ ಏಕಲವ್ಯ. ಎಲ್ಲ ಮರಗಳೂ ಸಮನಾದ ಎತ್ತರಕ್ಕೆ ಬೆಳೆಯಲಾರವೂ, ಎಲ್ಲ ಬಂಡಗಳೂ ಒಂದೆ ಗಾತ್ರ ಇರಲಾರವೂ, ಪೂರ್ವಜನ್ಮದ ಪಾಪಪುಣ್ಯಗಳಿಗನುಗುಣವಾಗಿ ಮನುಷ್ಯ ಮೇಲು ಕೀಳು ಜಾತಿಗಳಲ್ಲಿ ಹುಟ್ಟುತ್ತಾನೆ. ಈಜನ್ಮದಲ್ಲಿ ಪಾಲಿಗೆ ಬಂದ ವೃತ್ತಿಯನ್ನು ನಿಸ್ವಾರ್ಥದಿಂದ ನಿರ್ವಹಿಸಿದರೆ ಮುಂದಿನ ಜನ್ಮದಲ್ಲಿ ಒಳ್ಳೆಯದಾಗುತ್ತದೆ ಎಂದು ಹೇಳುತ್ತಾನೆ.

ಈ ದೇಶದ ಧರ್ಮ, ಶಾಸ್ತ್ರ, ಪುರಾಣಗಳು ಹೇಗೆ ಬಹುಸಂಖ್ಯಾತ ಮೂಲ ನಿವಾಸಿಗಳನ್ನು ವಿದ್ಯೆಯಿಂದ ವಂಚಿಸಿವೆ ಎಂಬುದನ್ನು ಮೇಲಿನ ಮಾತುಗಳಿಂದ ತಿಳಿಯಬಹುದು. ಪುರೋಹಿತಶಾಹಿ ವ್ಯವಸ್ಥೆ ವರ್ಣಕಲ್ಪನೆಯ ಜೊತೆಗೆ ಶೂದ್ರ ಹಾಗೂ ಅತಿಶೂದ್ರರಿಗೆ ಅಕ್ಷರವನ್ನು ನಿರಾಕರಿಸಿ ಅಂದಕಾರದತ್ತ ನೂಕಿದ್ದು ಅವರ ಕುಟಿಲ ನೀತಿಗೆ ಸಾಕ್ಷಿಯಾಗಿದೆ.

"ಏಖ ಈ ನಾಟಕ ಜಾತಿ ವ್ಯವಸ್ಥೆಯನ್ನು ವಿರೋಧಿಸುವದರೊಂದಿಗೆ ಊಹಾತ್ಮಕವಾಗಿ ವರ್ಗ ವ್ಯವಸ್ಥೆಯನ್ನು ವಿರೋಧಿಸುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ ಏಕಲವ್ಯನಂತಹ ದಲಿತರು ಕಾಣೆಸಿಕೊಂಡಿದ್ದು ಅರ್ಜುನ, ದ್ರೋಣರಿಗೆ ಸಂಬಂಧಿಸಿದ ಕ್ಷತ್ರಿಯಾ ಹಾಗೂ ಪುರೋಹಿತಶಾಹಿ ವರ್ಗಗಳೇ ಕಾರಣವಾಗಿವೆ. ಹೀಗಾಗಿ ಈ ಎರಡೂ ವರ್ಗಗಳು ದಲಿತರ ನಂಬಲರ್ಹವಾದವರು ಎನ್ನುವುದನ್ನು ಸೂಕ್ಷ್ಮವಾಗಿ ಎತ್ತಿ ತೋರಿಸುತ್ತದೆ. ಇದು ಇಂದಿನ ಸಾಂಸ್ಕೃತಿಕ ಬದುಕಿನ ಸ್ಥಿತಿಯೂ

ಆಗಿರುವುದರಿಂದ ಪ್ರಸ್ತುತತೆಗೆ ಗುರಿಇಟ್ಟಂತೆ ಆಗುತ್ತದೆ. ಮೊದಲ ತಲೆಮಾರಿನಲ್ಲಿ ಶಿಕ್ಷಣ ಪಡೆದುಕೊಂಡು ಹೊರಬರುವ ದಲಿತರ ಅನಿಸಿಕೆಗಳುಏಕಲವ್ಯನ ಮುಖಾಂತರ ಹೊರಹೊಮ್ಮಿದೆ. ಶೈಕ್ಷಣಿಕ ವ್ಯವಸ್ಥೆಯ ವಂಚಿತ ಹಾಗೂ ಹದಗೆಟ್ಟ ಸ್ಥಿತಿಗೆ ದ್ರೋಣರೇ ಪ್ರತೀಕವಾಗಿಬಿಡುತ್ತಾರೆ ಎಂಬ ಅರವಿಂದ ಮಾಲಗತ್ತಿಯವರ ಮಾತುಗಳು ನಾಟಕದಲ್ಲಿ ಕಂಡುಬರುವ ವ್ಯವಸ್ಥೆಗೆ ಪ್ರಸ್ತುತವೆನಿಸಿವೆ.

ಸಿದ್ಧಲಿಂಗಯ್ಯನವರು ತಮ್ಮ ನಾಟಕದಲ್ಲಿ ಏಕಲವ್ಯನ ಮನೋಧೋರಣೆಯಲ್ಲಿ ಬದಲಾವಣೆಯನ್ನು ತಂದಿದ್ದಾರೆ. ಏಕಲವ್ಯ ತನ್ನ ಬಲಗೈ ಹೆಬ್ಬೆರಳನ್ನು ಗುರುವಿಗೆ ಕಾಣಿಕೆ ನೀಡಿದಕ್ಕಾಗಿ ಚಿಂತಿಸದೆ, ಸಂಯಮದಿಂದಲೇ ಸತತ ಅಭ್ಯಾಸದಿಂದ ಎಡಗೈಯ ಬಿಲ್ವಿದ್ಯೆ ಸಾಧಕನಾಗಿ ಕ್ರಾಂತಿಯ ದುಂಧುಬಿ ಮೊಳಗಿಸುತ್ತಾನೆ. ಬ್ರಾಹ್ಮಣ ಶಾಹಿಗಳಿಗೆ ಅಶುಭದ ಸಂಕೇತವಾಗಿರುವ 'ಎಡ' ವನ್ನು ಇಲ್ಲಿ ಲೇಖಕರು 'ಶುಭ'ದ ಸಂಕೇತವಾಗಿ ಬಳಸಿದ್ದಾರೆ. ಇದು ಸಂಪ್ರದಾಯದ ಯತಾಸ್ಥಿತಿ ವಾದವನ್ನು ಮೀರುವ ಜಿಜ್ಞಾಸೆಯ ಕ್ರಮವಾಗಿದೆ. ಮನುವಾದಿ ಬಲಪಂಥೀಯ ಆಲೋಚನೆಗಳನ್ನು, ಪ್ರಗತಿಪರವಾದ ;ಎಡಪಂಥೀಯ' ವಿಚಾರವಾದಿ ಚಿಂತನೆಗಳ ಮೂಲಕ ಪ್ರತಿಭಟಿಸಬೇಕೆಂಬುದನ್ನು ಛಲವೊಂದಿದ್ದರೆ ಯಾವುದೂ ಅಸಾಧ್ಯವಲ್ಲ ಎಂಬುದಕ್ಕೆ ಸಿದ್ಧಲಿಂಗಯ್ಯನವರ ಏಕಲವ್ಯ ಜೀವಂತ ಪ್ರತಿಮೆಯಾಗಿದೆ. ಈ ಸನ್ನಿವೇಶದ ಮೂಲಕ ನಾಟಕಕಾರರು ಶೋಷಿತ ಸಮುದಾಯವನ್ನು ಕುರಿತು ಮೇಲ್ವರ್ಗದವರ ತುಳಿತಕ್ಕೆ ಸಿದ್ದಿ ಎಷ್ಟೇ ಜರ್ಜರಿತರಾಗಿದ್ದಾಗಲೂ ಆತ್ಮಾಭಿಮಾನ ದೃಢಸಂಕಲ್ಪವನ್ನು ಕಳೆದುಕೊಳ್ಳದೆ ವ್ಯವಸ್ಥೆಯ ಎದುರು ಪ್ರತಿಭಟಿಸಬೇಕೆಂಬುದನ್ನು ವ್ಯಕ್ತಪಡಿಸಿದ್ದಾರೆ. 'ಏಕಲವ್ಯ ನಾಟಕದ ಆರಂಬದ ಏಳು ದೃಶ್ಯಗಳಲ್ಲಿ ಸಿದ್ಧಲಿಂಗಯ್ಯನವರು ಆವರೆಗೆ ಬಂದಿದ್ದ ಏಕಲವ್ಯನ ಕುರಿತಾದ ನಾಟಕಗಳ ಕಥಾವಸ್ತುವನ್ನೇ ಪುನರ್ ರೂಪಿಸಿದ್ದಾರೆ. ಆನಂತರದ ನಾಲ್ಕುದೃಶ್ಯಗಳು ಇವರ ಕ್ರಾಂತಿ ಕಾರಕ ಸಮಾಜಮುಖಿ ಧೋರಣೆಯ ಅಭಿವ್ಯಕ್ತಿಯಾಗಿದೆ. ನಾಟಕದ ಎಂಟನೆ ದೃಶ್ಯವು ಸೈನಿಕರ ನಡುವಿನ ಪರಸ್ಪರ ಸಂಬಾಷಣೆ, ವಿನೋದದ ಹಿನ್ನಲೆಯಲ್ಲಿ ಚಿತ್ರಿತಗೋಂಡಿದೆ. ಹೆಂಡತಿಗೆ ಹೆದರಿದ ಸೈನಿಕನೊಬ್ಬ ಆಕೆಯ ಹೊಡೆತದಿಂದ ತಪ್ಪಿಸಿಕೊಳ್ಳಲಿಕ್ಕಾಗಿ ಓಡಿ ಹೋಗಿ ದೊಡ್ಡ ಮಾವಿನಮರವನ್ನು ಏರಿ ಕುಳಿತುಕೊಳ್ಳುವ ಪ್ರಸಂಗ ಹಾಸ್ಯದಿಂದ ಕೂಡಿದೆ. ಒಟ್ಟಾರೆ ನಾಟಕವನ್ನು ಇಡಿಯಾಗಿ ಓದಿದಾಗ, ಏಳನೆಯ ದೃಶ್ಯಕ್ಕೆ ನಾಟಕ ಮುಕ್ತಾಯಗೊಂಡು ಕೊನೆಯ ನಾಲ್ಕು ದೃಶ್ಯಗಳನ್ನು ಉದ್ದೇಶಪೂರ್ವಕವಾಗಿ ತಂದು ಜೋಡಿಸಲಾಗಿದೆ ಎನಿಸುತ್ತದೆ. ಬಲಗೈ ಹೆಬ್ಬರಳನ್ನು ಕತ್ತರಿಸಿಕೊಟ್ಟ ಏಕಲವ್ಯನು ಮುಂದೆ ಎಡಗೈಯಲ್ಲಿ ಬಿಲ್ಲು ಹಿಡಿದು ಕ್ರಾಂತಿಯ ದುಂದುಭಿ ಮೊಳಗಿಸಿದನೆಂಬ ನಾಟಕಕಾರರ ಕಲ್ಪನೆ ಧ್ವನಿಪೂರ್ಣವಾಗಿದೆ. ಮುಂದೆ ಕುರುಕ್ಷೇತ್ರ ಯುದ್ಧ ನಡೆದಾಗ ಏಕಲವ್ಯನು ಕೌರವಪಕ್ಷದಲ್ಲಿದ್ದು ಕಾದಿದನೆಂಬ ಪುರಾಣ ಕಥೆಯನ್ನು ಸಿದ್ಧಲಿಂಗಯ್ಯನವರು ಬದಲಾಯಿಸಿಕೊಂಡಿದ್ದಾರೆ.

ನಾಟಕದ ಕೊನೆಯ ದೃಶ್ಯ ನಾಟಕಕಾರರ ಆಶಯ ಮತ್ತು ಧೋರಣೆಯನ್ನು ಸಮರ್ಥವಾಗಿ ಬಿಂಬಿಸುತ್ತದೆ. ಏಕಲವ್ಯನು ಕೃಷ್ಣ, ಅರ್ಜುನ, ಕರ್ಣ, ದುರ್ಯೋಧನರು, ಬೀಸಿದ ಬಲೆಗೆ ಬಲಿಯಾಗದೆ ಅದರ ವಿರುದ್ಧ ಸಂಘರ್ಷಕ್ಕೆ ಅಣಿಯಾಗುತ್ತಾನೆ. ಸಿದ್ಧಲಿಂಗಯ್ಯನವರು ಕರ್ಣ ಮತ್ತು ಏಕಲವ್ಯರ ನಡುವೆ ಸಾಮ್ಯತೆ ಇದ್ದರೂ ಕೂಡ ಕೆಲವು ಸೂಕ್ಷ್ಮ ವ್ಯತ್ಯಾಸಗಳನ್ನು ಗುರ್ತಿಸಿದ್ದಾರೆ. ಕರ್ಣ ತನಗಾದ ಶೋಷಣೆಯ ವಾಸ್ತವದ ಅರಿವಿನ ಕೊರತೆಯಿಂದಾಗಿ ಮತ್ತೆ ಶೋಷಕ ವ್ಯವಸ್ಥೆಯ ಮತ್ತೊಂದು ಮಗ್ಗುಲಾದ ದುರ್ಯೋಧನನನ್ನು ಬೆಂಬಲಿಸುತ್ತಾನೆ. ಆದರೆ ಏಕಲವ್ಯನಿಗೆ ಕೌರವ – ಪಾಂಡವರಿಬ್ಬರು ಶೋಷಕ ವ್ಯವಸ್ಥೆಯ ಒಂದೇ ನಾಣ್ಯದ ಎರಡು ಮುಖಗಳಂತೆ ಕಾಣುತ್ತಾರೆ. ಕರ್ಣ ವ್ಯವಸ್ಥೆಯೊಟ್ಟಿಗೆ ರಾಜಿಯಾದರೆ, ಏಕಲವ್ಯ ವ್ಯವಸ್ಥೆಯನ್ನು ಪ್ರತಿಭಟಿಸಿ ನಿಲ್ಲುತ್ತಾನೆ.

ಸಿದ್ಧಲಿಂಗಯ್ಯನವರು ತಮ್ಮ ನಾಟಕಗಳ ವಸ್ತುವಿನ ಆಯ್ಕೆ ಸಂದರ್ಭದಲ್ಲಿ ಸಮಾಜಮುಖಿ ಧೋರಣೆಯನ್ನೆ ಮಾನದಂಡವಾಗಿಸಿಕೊಂಡಿರುವುದನ್ನು ಕಾಣಬಹುದು. ನಾಟಕದ ಸಂವಿಧಾನಕ್ಕೆ ಎಲ್ಲಿಯೂ ಚ್ಯುತಿಬರದ ಹಾಗೆ ವಸ್ತುವನ್ನು ಅಳವಡಿಸುವಲ್ಲಿಯೂ ಯಶಸ್ವಿಯಾಗಿದ್ದಾರೆ. ಮೂರು ನಾಟಕಗಳಲ್ಲಿನ ಸರಳವಾದ ಆಡುಮಾತಿನ ಭಾಷೆ ನಿರರ್ಗಳವಾದ ರಚನಾಶೈಲಿ, ಪರಸ್ಪರ ಪಾತ್ರಗಳ ನಡುವಿನ ಸಂಭಾಷಣಾ ರೀತಿ ಎಲ್ಲಿಯೂ ತೊಡಕೆನಿಸುವುದಿಲ್ಲ. ಒಟ್ಟು ನಾಟಕಗಳು ದೃಶ್ಯ ನಾಟಕಗಳಾಗಿ ಯಶಸ್ವಿಪ್ರಯೋಗಗಳನ್ನು ಕಂಡಿರುವ ಹಾಗೆಯೇ ಸಮಾಜದ ಮೂಲಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುತ್ತವೆ.

ಸಿದ್ಧಲಿಂಗಯ್ಯನವರ 'ಪಂಚಮ', 'ನೆಲಸಮ', 'ಏಕಲವ್ಯ' ನಾಟಕಗಳು ಬಹುಸಂಖ್ಯಾತ ದಲಿತರ ಬದುಕಿನ ಅಸ್ತಿತ್ವದ ಸಂಬಂಧದಲ್ಲಿ ಹೋರಾಟದ ನಿರಂತರತೆಯನ್ನು ಸ್ಪಷ್ಟವಾಗಿ ಮಂಡಿಸುತ್ತವೆ. ದಲಿತ ಚಳುವಳಿಯ ಸೈದ್ಧಾಂತಿಕ ಚಿಂತನೆ, ಆಲೋಚನೆ ಆಶಯಗಳನ್ನು ಪ್ರತಿಪಾದಿಸುವ ನಿಟ್ಟಿನಲ್ಲಿ ಇವರ ಮೂರು ನಾಟಕಗಳು ರಚನೆಗೊಂಡಿವೆ ತಮ್ಮ ಕಾವ್ಯಗಳಲ್ಲಿ ವ್ಯವಸ್ಥೆಯ ಕ್ರೂರತನದ ಬಗ್ಗೆ ಸಿಟ್ಟನ್ನು ವ್ಯಕ್ತಪಡಿಸಿರುವ ಹಾಗೆಯೇ ನಾಟಕಗಳಲ್ಲಿಯೂ ಸಮಾಜದ ದೌರ್ಜನ್ಯದ ವಿರುದ್ಧ ಕಿಡಿಕಾರಿದ್ದಾರೆ. ಆರೋಗ್ಯಕರ ಸಮಾಜದ ನಿರ್ಮಾಣವನ್ನು ಬಯಸುವ ಸಿದ್ಧಲಿಂಗಯ್ಯನವರ ಹಂಬಲ ಈ ಮೂರು ನಾಟಕಗಳ ಅಂತರ್ಯದಲ್ಲಿ ಗುಪ್ತಗಾಮಿನಿಯಾಗಿ ಪ್ರವಹಿಸುವುದನ್ನು ಕಾಣಬಹುದಾಗಿದೆ. ಈ ಮೂರು ನಾಟಕಗಳು ಸಮಾಜನಿಷ್ಟ ಚಿಂತನೆ ನೆಲೆಯಲ್ಲಿ ಮೂಡಿಬಂದಿರುವುದು ನಾಕಟಕಾರರಿಗೆ ಸಮಾಜದೊಟ್ಟಿಗಿನ ಪ್ರತಿಸ್ಪಂದನವನ್ನು ಅಂಗೀಕರಿಸುತ್ತದೆ. ಸಿದ್ಧಲಿಂಗಯ್ಯನವರ ಮೂರು ನಾಟಕಗಳನ್ನು ಒಟ್ಟಾರೆಯಾಗಿ ಚಿಂತನೆಗೊಳಪಡಿಸಿದರೆ ಕಂಡುಬರುವ ಮುಖ್ಯ ವಿಷಯವೆಂದರೆ 'ಸಾಮಾಜಿಕ ಪರಿವರ್ತನೆಗಾಗಿ ಸಂಘರ್ಷ' ಎಂಬುದಾಗಿದೆ.

ಸಿದ್ಧಲಿಂಗಯ್ಯನವರ ಗದ್ಯ ಹಾಗೂ ಆತ್ಮಕಥೆಗಳಲ್ಲಿ ದಲಿತಸಂವೇದನೆ

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕಾವ್ಯದಷ್ಟೆ ಗದ್ಯಬರಹವು ತನ್ನದೇ ಆದ ವಿಶಿಷ್ಟ ಛಾಪನ್ನು ಮೂಡಿಸಿದೆ. ದಲಿತ ಬಂಡಾಯ ಸಾಹಿತ್ಯ ಕೂಡ ಈ ಪ್ರಕಾರಕ್ಕೆ ವಿಶಿಷ್ಟ ಕೊಡುಗೆಯನ್ನು ನೀಡಿದೆ. ಕನ್ನಡಸಾಹಿತ್ಯದ ಆವರೆಗಿನ ಗದ್ಯಬರಹದ ದಿಕ್ಕನ್ನೇ ಬದಲಾಯಿಸಿ ಹೊಸಪರಿಕಲ್ಪನೆಯನ್ನು ಹುಟ್ಟುಹಾಕುವಲ್ಲಿ ದಲಿತ ಸಾಹಿತ್ಯದ ಪಾತ್ರ ಮಹತ್ತರವಾದದ್ದಾಗಿದೆ. ದಲಿತ ಸಮುದಾಯದ ಭಾಷೆ, ಅನುಭವ, ಸಾಂಸ್ಕೃತಿಕ ನೆಲೆಗಳನ್ನು ಚೆನ್ನಾಗಿ ಅಭಿವ್ಯಕ್ತಿಸುವಲ್ಲಿ ಗದ್ಯಬರಹ ಜೀವಂತಿಕೆಯನ್ನು ಪಡೆದುಕೊಂಡಿದೆ ಎಂದು ಹೇಳಬಹುದು. ದಲಿತ ಸಾಹಿತಿಗಳು ಗದ್ಯಬರಹದ ಮೂಲಕ ಈ ನೆಲದ ಜೀವಸತ್ವವನ್ನು ಚೆನ್ನಾಗಿ ಹಿಡಿದಿಟ್ಟಿದ್ದಾರೆ. ಈ ನಿಟ್ಟಿನಲ್ಲಿ ತಮ್ಮ ಗದ್ಯಬರಹದ ಮೂಲಕ ಕನ್ನಡ ಸಾಹಿತ್ಯಕ್ಕೆ ಶೋಷಿತರ ಬದುಕನ್ನು ಪರಿಚಯಿಸುವಲ್ಲಿ ದೇವನೂರು ಮಹದೇವ, ಅರವಿಂದ ಮಾಲಗತ್ತಿ, ಮೊಗಳ್ಳಿ ಗಣೇಶ್ ಮ. ನ. ಜವರಯ್ಯ, ದೇವಯ್ಯ ಹರವೆ ಮುಂತಾದವರು ಪ್ರಮುಖರು. ದಲಿತ ಕವಿಗಳಲ್ಲಿ ಆಧುನಿಕ ಕನ್ನಡ ಸಾಹಿತ್ಯದ ದಿಕ್ಕನ್ನೇ ಬದಲಾಯಿಸಿದ ಕವಿ ಸಿದ್ಧಲಿಂಗಯ್ಯನವರು ಗದ್ಯ ಬರಹಕ್ಕೂ ತಮ್ಮದೇಯಾದ ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ. 'ಅವತಾರಗಳು', 'ಹಕ್ಕಿನೋಟ', 'ಗ್ರಾಮದೇವತೆಗಳು', 'ಊರುಕೇರಿ' ಮುಂತಾದವು ಸಿದ್ಧಲಿಂಗಯ್ಯನವರ ಗದ್ಯಬರಹಗಳಾಗಿವೆ.

ಸಿದ್ಧಲಿಂಗಯ್ಯನವರು ತಮ್ಮ ಗದ್ಯದಲ್ಲಿ ನಗುನಗುತ್ತಲೇ ವ್ಯವಸ್ಥೆಯ ಮೌಢ್ಯ ಕಂದಾಚಾರ ಹಾಗೂ ಸಂಪ್ರದಾಯಬದ್ಧ ಸ್ಥಾಪಿತ ಮೌಲ್ಯಗಳನ್ನು ವಿಡಂಬಿಸುವುದು ಇವರ ಗದ್ಯ ಬರಹದ ಪ್ರಮುಖ ಗುಣವಾಗಿದೆ. ಸಮಾಜದ ಕಾರ್ಯಗಳ ವಿರುದ್ಧ ತಮ್ಮ ಕವಿತೆಗಳಲ್ಲಿ ಕಿಡಿಕಾರಿರುವ ಇವರು ಇಲ್ಲಿಯೂ ಅವುಗಳನ್ನು ಗೇಲಿ ಮಾಡುತ್ತಲೇ ಚಿಂತನೆಗೆ ಹಚ್ಚುತ್ತಾರೆ. ಕನ್ನಡ ಸಾಹಿತ್ಯವಲಯದಲ್ಲಿ ಕವಿಯಾಗಿ, ನಾಟಕಕಾರರಾಗಿ ಹೆಸರಾಗಿರುವ ಸಿದ್ಧಲಿಂಗಯ್ಯನವರು ನಾಸ್ತಿಕವಾದವನ್ನು ಮೈಗೂಡಿಸಿಕೊಂಡ ಎಡಪಂಥೀಯ ಧೋರಣೆಯುಳ್ಳವರು.

ಸಿದ್ಧಲಿಂಗಯ್ಯನವರ 'ಅವತಾರಗಳು' ಪ್ರಬಂಧಸಂಕಲನವು ದೇವರ ಬಹುರೂಪಿ ವಿಚಿತ್ರ ವ್ಯಕ್ತಿತ್ವನ್ನು ಪರಿಚಯಿಸುತ್ತಲೆ ದೇವರ ಬಗೆಗಿನ ನಂಬಿಕೆ, ಸಂಪ್ರದಾಯ ಮೌಢ್ಯತೆಗಳನ್ನು ಹಾಸ್ಯಭರಿತ ವಿಡಂಬನಾತ್ಮಕ ಶೈಲಿಯಲ್ಲಿ ತಾತ್ವಿಕ ಜಿಜ್ಞಾಸೆಗೆ ಒಳಗೂ ಮಾಡುತ್ತದೆ. ಹಾಗೆಯೇ ಜನಸಾಮಾನ್ಯರ ಪ್ರಜ್ಞೆಯಲ್ಲಿ ದೇವರ ಪರಿಕಲ್ಪನೆ ಬಹುಮುಖ ಸ್ವರೂಪವುಳ್ಳದ್ದು ಎಂಬುದನ್ನು ತಿಳಿಸುತ್ತದೆ. ಲೇಖಕರು ಉದ್ಧೃತಗೊಳಿಸಿರುವ ದೇವರು ಹಾಗೂ ಮನುಷ್ಯರ ನಡುವಿನ ಕೆಲವು ಸಂಭಾಷಣೆಯ ತುಣುಕುಗಳು ಓದುಗರಲ್ಲಿ ನಗು ತರಿಸುವುದರ ಜೊತೆಗೆ ಜನಪರರು ದೇವರೊಟ್ಟಿಗೆ

ಇಟ್ಟುಕೊಂಡಿರುವ ಸಲಿಗೆಯ ಸಂಬಂಧವನ್ನು ಪರಿಚಯಿಸುತ್ತದೆ. ದೇವರು ಇದ್ದಾನೆಯೇ? ಇಲ್ಲವೇ? ದೇವರು ಎಂದರೆ ಯಾರು? ಎಂಬ ಅರ್ಥಹೀನ ತರ್ಕಕ್ಕೆ ಒಳಗಾಗದೇ ದೇವರ ಬಗೆಗಿನ ಚಿಂತನೆ ಎಷ್ಟರ ಮಟ್ಟಿಗೆ ಜನಪದರ ಬದುಕಿನಲ್ಲಿ ಹಾಸುಹೊಕ್ಕಾಗಿ ಬೆರೆತು ಹೋಗಿದೆ ಎಂಬುದನ್ನು ಲೇಖಕರು ಕ್ಷೇತ್ರಕಾರ್ಯದ ಅನುಭವದ ನೆಲೆಗಟ್ಟಿನಲ್ಲಿ ದಾಖಲಿಸಿರುವುದು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಮಹತ್ವದ ಸಂಗತಿ ಆಗಿದೆ. ಸ್ವತಃ ಲೇಖಕರೇ " ಈಗ ನನಗೆ ಆಸ್ತಿಕತೆ ನಾಸ್ತಿಕತೆಗಳು ಗೌಣ. ಮಾನವೀಯ ಸಮಾಜ ರಚನೆಯೇ ನಮ್ಮೆಲರ ಹಂಬಲವಾಗಲೆಂದು ಹಾರೈಸುತ್ತೇನೆ. ಇಲ್ಲಿ ದೇವತೆಗಳಿಗೆ ನಾನು ನೀಡಿರುವ ಗಮನ, ಮನುಷ್ಯರನ್ನು, ಸಮಾಜವನ್ನು ಅರ್ಥಮಾಡಿಕೊಳ್ಳುವ ಒಂದು ಪ್ರಯತ್ನ " ಎಂಬುದಾಗಿ ಹೇಳಿಕೊಂಡಿದ್ದಾರೆ. ಜನಪದರು ಹಾಗೂ ದೇವರ ನಡುವಿನ ಸಂಬಂಧದ ಹಲವು ಕೌತುಕ ಸಂಗತಿಗಳನ್ನು ಈ ಕೃತಿ ಕಟ್ಟಿಕೊಡುತ್ತದೆ. ಈ ಎಲ್ಲ ಕಾರಣಗಳಿಂದಾಗಿ 'ಅವತಾರಗಳು' ಕೃತಿ ಮಾಲಿಕವಾಗಿದೆ. ಜನಪದರ ನಂಬಿಕೆ ಆಚಾರ ವಿಚಾರಗಳು ಪುರೋಹಿತಶಾಹಿ ವ್ಯವಸ್ಥೆಗಿಂತ ಭಿನ್ನವಾದವುಗಳು ಎಂಬುದು ಇಲ್ಲಿ ಧ್ವನಿತವಾಗುತ್ತದೆ. ಶೋಷಣೆಯ ನಿರಂತರತೆಯ ಮೂಡನಂಬಿಕೆಗಳು ಕೆಲವೊಮ್ಮೆ ಇದ್ದು ಸಹ ಹಳ್ಳಿಗಾಡಿನ ಜನತೆ ತಮ್ಮ ಆಂತರಿಕ ನೋವುಗಳನ್ನು ಮರೆಯಲು ದೇವರ ಮೊರೆಹೋಗುತ್ತಾರೆ. ಜನಪದ ನಂಬಿಕೆಗಳನ್ನು ವೈಜ್ಞಾನಿಕ ಚಿಂತನೆಗೆ ಒಳಪಡಿಸಿ ಸಮಕಾಲೀನ ಸಂದರ್ಭಕ್ಕೆ ಬಳಸುವುದಾದರೆ ನಂಬಿಕೆಗಳು ಮೌಲಿಕವೆನಿಸುತ್ತವೆ.

ದಲಿತ ಸಾಹಿತ್ಯಕ್ಕೆ ಸಿದ್ಧಲಿಂಗಯ್ಯನವರು ನೀಡಿದ ಇನ್ನೊಂದು ವಿಶಿಷ್ಟಕೃತಿ ಎಂದರೆ "ಹಕ್ಕುನೋಟ" ಎಂಬ ವಿಮರ್ಶಾಕೃತಿ. ೧೯೯೦ ರಲ್ಲಿ ಪ್ರಕಟಗೊಂಡ ಈ ಕೃತಿಯಲ್ಲಿ ಒಟ್ಟು ಹದಿಮೂರು ವಿಮರ್ಶಾಲೇಖನಗಳಿವೆ. 'ಹಕ್ಕಿನೋಟ'ದಲ್ಲಿ ನಾವುನೋಡಬಹುದಾದ ಎರಡು ಮುಖ್ಯ ವಿಷಯಗಳೆಂದರೆ, ಮೊದಲನೆಯದು ಅದರಲ್ಲಿ ಅಭಿವ್ಯಕ್ತವಾಗಿರುವ ತಾತ್ವಿಕ ನಿಲುವು, ಎರಡನೆಯದು ಅದು ಒಳಗೊಂಡಿರುವ ಸರಳವಾದ ಭಾಷೆ. ಸಿದ್ಧಲಿಂಗಯ್ಯನವರು ಈ ಕೃತಿಯಲ್ಲಿ ಸಾಹಿತ್ಯ, ಸಮಾಜ, ಸಂಸ್ಕೃತಿ ಜನಪದ ಆಚರಣೆ ಹಾಗೂ ವ್ಯಕ್ತಿಗತ ಸಾಮಾಜಿಕ ಮೌಲ್ಯಗಳನ್ನು ವಿಮರ್ಶಾತ್ಮಕ ನೆಲೆಯಲ್ಲಿ ವಿವೇಚಿಸಿದ್ದಾರೆ. 'ಸಾಹಿತ್ಯಾಭಿವ್ಯಕ್ತಿಯಲ್ಲಿ ಸಾಮಾನ್ಯ ಮನುಷ್ಯ' ಎಂಬ ಲೇಖನದಲ್ಲಿ ಲೇಖಕರು ಇಡೀ ಸಾಮಾಜಿಕ ಹಾಗೂ ಸಾಹಿತ್ಯಕ ವ್ಯವಸ್ಥೆ, ಚಾರಿತ್ರಿಕವಾಗಿ ಸಾಮಾನ್ಯ ಮನುಷ್ಯನನ್ನು ಹೇಗೆ ನಿಯಂತ್ರಿಸುತ್ತದೆ ಎಂಬುದನ್ನು ತಾರ್ಕಿಕ ದೃಷ್ಟಿಕೋನದ ಹಿನ್ನೆಲೆಯಲ್ಲಿ ಅವಲೋಕಿಸಿದ್ದಾರೆ. ಎಲ್ಲಾ ಸಂಕೋಲೆ ನಿರ್ಬಂಧಗಳ ನಡುವೆಯೂ ಸಾಮಾನ್ಯ ಮನುಷ್ಯ ಹೇಗೆ ತನ್ನತನವನ್ನು ಸಾಹಿತ್ಯದಲ್ಲಿ ಅಭಿವ್ಯಕ್ತಿಸಿದ್ದಾನೆ ಎಂಬುದನ್ನು ಚರ್ಚಿಸಿದ್ದಾರೆ. ಸಾಮಾನ್ಯ ಮನುಷ್ಯ ಸಾಹಿತ್ಯ ನಿರ್ಮಾಣದಲ್ಲಿ ತೊಡಗಿಸಿಕೊಂಡ ಬಗೆಯನ್ನು ವಚನಕಾರರು, ಕನಕದಾಸ ಜನಪದ ಸಾಹಿತ್ಯವನ್ನು ಗಮನದಲ್ಲಿಟ್ಟುಕೊಂಡು ಬರೆದಿರುವುದಾಗಿ ಲೇಖಕರು ಹೇಳಿಕೊಂಡಿದ್ದಾರೆ. ಸಾಹಿತ್ಯಕ

ಸಿದ್ಧಾಂತದ ವಿಮರ್ಶಾ ಮಾನದಂಡಗಳಿಗೆ ಬದಲಾಗಿ ಬದುಕಿನ ಮೂಲಭೂತ ಸಮಸ್ಯೆಗಳನ್ನೇ ಆಧರಿಸಿ ತಮ್ಮ ವಿಮರ್ಶಾ ಆಲೋಚನಾಕ್ರಮವನ್ನು ಹಂತಹಂತವಾಗಿ ಬೆಳೆಸುತ್ತಾ ಹೋಗುತ್ತಾರೆ. ತಳಸಮುದಾಯದಿಂದ ಬಂದಂತಹ ವಚನಕಾರರ ಡೋಹರಕಕ್ಕಯ್ಯ, ಜೇಡರದಾಸಿಮಯ್ಯ, ಹಡಪದ ಅಪ್ಪಣ್ಣ, ಮಡಿವಾಳ ಮಾಚಯ್ಯ, ಗೊಗ್ಗವ್ವೆ, ಸೂಳೆಸಂಕವ್ವೆ, ಕಾಳವ್ವೆ ಇವರ ಒಂದೊಂದು ವಚನಗಳನ್ನು ತಾರ್ಕಿಕ ನೆಲೆಯಲ್ಲಿ ವಿಮರ್ಶೆಗೆ ಒಳಪಡಿಸಿದ್ದಾರೆ. ವಚನ ಚಳುವಳಿಯ ಸಂವೇದನಾತ್ಮಕ ಮಾನವೀಯ ಅಂತಃಕರಣದ ಮೌಲ್ಯಗಳನ್ನು ಗುರುತಿಸಿದ್ದಾರೆ.

ಒಟ್ಟಾರೆ 'ಹಕ್ಕಿನೋಟ' ಕೃತಿಯಲ್ಲಿ ವಿಭಿನ್ನ ವಸ್ತು, ವಿಷಯಗಳನ್ನು ಕುರಿತು ವಿಮರ್ಶಾತ್ಮಕ ಹಾಗೂ ವಿಶ್ಲೇಷಣಾತ್ಮ ಚರ್ಚೆ ನಡೆಸಿದ್ದಾಗ್ಯೂ ಲೇಖಕರ ಆಲೋಚನೆ, ಧೋರಣೆಗಳು ಸಮಾಜಮುಖಿಯಾಗಿದ್ದು ಮಾನವೀಯ ಮೌಲ್ಯಗಳನ್ನು ಹೆಕ್ಕಿತೆಗೆಯುವ ಪ್ರಮುಖ ಕಾಳಜಿಯನ್ನು ಗುರುತಿಸಬಹುದು ವಾಸ್ತವವಾದಿ ನೆಲೆಯಲ್ಲಿ ಪ್ರಜ್ಞಾಪೂರ್ವಕವಾಗಿ ಸಾಹಿತ್ಯ, ಸಮಾಜ, ಸಂಸ್ಕೃತಿ ಸಂಪ್ರದಾಯ, ಆಚರಣೆ, ಅಸ್ಪೃಶ್ಯತೆ, ಚಳುವಳಿ ಮಾನವೀಯ ತುಡಿತಗಳು ಹಾಗೂ ವ್ಯಕ್ತಿ ನಿಷ್ಠ ಮೌಲ್ಯಗಳನ್ನು ತಾತ್ವಿಕ ಚಿಂತನೆಗೆ ಒಳಗುಮಾಡಿದ್ದಾರೆ. ವಿಮರ್ಶಾತ್ಮಕ ಸಂವೇದನೆ ಬದುಕಿನ ವಾಸ್ತವದೊಟ್ಟಿಗೆ ಸಹಜವಾಗಿ ಸ್ಪಂದಿಸಬೇಕು ಎಂಬುದನ್ನು ಇಲ್ಲಿನ ಎಲ್ಲಾ ಲೇಖನಗಳು ಸಾಭೀತು ಪಡಿಸುತ್ತವೆ.

ಸಿದ್ಧಲಿಂಗಯ್ಯನವರ ಮತ್ತೊಂದು ಗದ್ಯರೂಪದ ಗ್ರಂಥವೆಂದರೆ ಅವರ ಸಂಶೋಧನ ಗ್ರಂಥವಾದ 'ಗ್ರಾಮದೇವತೆಗಳು' ಈ ಗ್ರಂಥ ೧೯೮೮ರಲ್ಲಿ ಸಿದ್ಧಲಿಂಗಯ್ಯನವರು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಮಹಾಪ್ರಬಂದವಾಗಿದೆ. ಕವಿ ಜಿ. ಎಸ್. ಶಿವರುದ್ರಪ್ಪನವರ ನೇತ್ರತ್ವದಲ್ಲಿ ಸುದೀರ್ಘ ಕ್ಷೇತ್ರಕಾರ್ಯದಲ್ಲಿ ಪರಿಶ್ರಮದಿಂದಾಗಿ ರಚಿಸಲ್ಪಟ್ಟ ಮೌಲಿಕ ಕೃತಿಯಾಗಿದೆ. ಗ್ರಾಮದೇವತೆಗಳಿಗೆ ಸಂಬಂದಿಸಿದ ಪುರಾಣ ಆಚರಣೆ, ಸಂಪ್ರದಾಯ, ಕಟ್ಟುಪಾಡುಗಳು ಒಟ್ಟು ಗ್ರಾಮೀಣ ಸಮುದಾಯದ ಸಾಂಸ್ಕೃತಿಕ ಬದುಕನ್ನು ತೆರೆದಿಡುತ್ತವೆ. ಜನಪದರ ಜೀವನದ ಹಲವು ಮುಖಗಳನ್ನು ಪರಿಚಯಿಸುವ ನಿಟ್ಟಿನಲ್ಲಿ ಗ್ರಾಮದೇವತೆಗಳ ಅಧ್ಯಯನ ಮಹತ್ವದ್ದಾಗುತ್ತದೆ. ಗ್ರಾಮದೇವತೆಗಳ ಬಗೆಗೆ ಜನಪದರಿಗಿರುವ ಗಾಢವಾದ ನಂಬಿಕೆ, ಅವರ ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಆಳವಾಗಿ ಬೇರು ಬಿಟ್ಟು ಆವರಿಸಿರುವುದನ್ನು ಕಾಣಬಹುದು. ಎಲ್ಲಾ ಬಗೆಯ ಗ್ರಾಮೀಣ ಸಮಾಜದ ಸಾಂಸ್ಕೃತಿಕ ಮೌಲ್ಯಗಳನ್ನು ಲೇಖಕರು ಈ ಕೃತಿಯಲ್ಲಿ ಆಧಾರ ಸಹಿತವಾಗಿ ಚರ್ಚಿಸಿದ್ದಾರೆ. ಗ್ರಾಮದೇವತೆಯ ಸಾಂಸ್ಕೃತಿಕ ಅಧ್ಯಯನದ ಜೊತೆಯಲ್ಲಿಯೇ ಜನಪದರ ಜೀವನ ಕ್ರಮ ನೀತಿನಿರ್ಭಂದ, ಜಾತಿ ಮೂಲ ಶ್ರೇಣೀಕೃತ ಸಮಾಜದ ಅಸ್ಥಿತ್ವವನ್ನು ಕುರಿತು ಅವಲೋಕಿಸಿದ್ದಾರೆ. ಜಾತಿ ಹಾಗೂ ವರ್ಗತಾರತಮ್ಯದ ನಡುವೆಯೂ ಎಲ್ಲಾ ವರ್ಗದ ಜನರ ಸಾಂಸ್ಕೃತಿಕ ಸಾಮರಸ್ಯವನ್ನು ಕಾಯ್ದುಕೊಂಡಿರವ ಮಾನವೀಯ ಮೌಲ್ಯಗಳನ್ನು ಕುರಿತು ವಿವೇಚಿಸಿರುವುದು ವಿಶೇಷವೆನಿಸುತ್ತದೆ. ಜನಪದರ ಸಾಂಸ್ಕೃತಿಕ

ಮೌಲ್ಯಗಳಲ್ಲಿನ ಜನಪರ ಆಶಯ, ಧೋರಣೆಯನ್ನು ಹೇಳುತ್ತಲೇ, ಶ್ರೇಣೀಕೃತ ವ್ಯವಸ್ಥೆಯ ಜಾತಿ ವರ್ಗದ ಸಮಸ್ಯೆಗಳು ಮನುಷ್ಯ ಬದುಕಿಗೆ ಮಾರಕವಾಗಿ ಪರಿಣಮಿಸುವುದನ್ನು ವಿಶ್ಲೇಷಿಸಿದ್ದಾರೆ. ಸಾಂಸ್ಕೃತಿಕಮೌಲ್ಯ ಹಾಗೂ ಜಾತಿ ವ್ಯವಸ್ಥೆಯ ಅಪಮೌಲ್ಯಗಳನ್ನು ಒಟ್ಟೊಟ್ಟಿಗೆ ಚರ್ಚಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಸಿದ್ಧಲಿಂಗಯ್ಯನವರ ಗ್ರಾಮದೇವತೆಗಳು ಕೃತಿ ಕನ್ನಡ ಸಾಂಸ್ಕೃತಿಕಲೋಕಕ್ಕೆ ಹೊಸಬಗೆಯ ಅರಿವನ್ನು ವಿವೇಕವನ್ನು ಕೊಡುವ ಮಹತ್ವದ ಸಂಶೋಧನಾ ಕೃತಿಯಾಗಿದೆ.

ಭಾರತೀಯ ಸಾಹಿತ್ಯ ಸಂಧರ್ಭದಲ್ಲಿ ಆತ್ಮಕಥಾ ಸಾಹಿತ್ಯ ಪ್ರಕಾರವು ಒಬ್ಬ ವ್ಯಕ್ತಿಯ ಜೀವನದ ಏಳು ಬೀಳುಗಳ ಚಿತ್ರಣವನ್ನು ತೆರೆದಿಡುತ್ತಾ, ಸಾಮಾಜಿಕ ಪರಿಸರದ ಮೇಲೆ ಕ್ರಾಂತಿಕಾರಿ ಪರಿಣಾಮವನ್ನು ಉಂಟುಮಾಡಬಲ್ಲದು ಎಂಬುದನ್ನು ಮಾರಾಟ ದಲಿತ ಆತ್ಮಕಥೆಗಳು ಸಾಧ್ಯವಾಗಿಸಿವೆ. ಆತ್ಮ ಕಥೆ, ಲೇಖಕನೊಬ್ಬನ ವೈಯಕ್ತಿಕ ಅನುಭವ ಸಾಧನೆಗಳ ಪಡಿಅಚ್ಚಾಗಿರದೆ, ಶೋಷಿತ ಸಮುದಾಯದಲ್ಲಿ ಪ್ರಜ್ಞಾಪೂರ್ವಕ ಎಚ್ಚರವನ್ನು ಮೂಡಿಸಬಲ್ಲ ಸಾಮಾಜಿಕ ಜವಬ್ದಾರಿಯುಳ್ಳದ್ದು ಎಂಬುದನ್ನು ಪ್ರಚಾರ ಪಡಿಸಿವೆ. ಈ ನಿಟ್ಟಿನಲ್ಲಿ ಲಕ್ಷ್ಮಣ ಗಾಯಕವಾಡ 'ಉಚ್ಚಲ್ಯ' ದಾದಾ ಸಾಹೇಬ ಮೋರೆಯವರ 'ಗಬಾಳ', ಮಾಧವದೇಸಾಯಿ ಅವರ 'ಕುಣಿಯೇಘಮ' ಮುಂತಾದ ಆತ್ಮಕಥೆಗಳು ಶೋಷಿತರ, ದಲಿತರ, ಬಡವರ ಪರವಾದ ಅಘಾದ ಶಕ್ತಿಯಾಗಿ ಅಭಿವ್ಯಕ್ತಗೊಂಡಿವೆ. ಆತ್ಮಕಥೆಯನ್ನು ವೈಯಕ್ತಿಕ ನೆಲೆಯಿಂದ ಸಮುದಾಯಬದ್ಧ ಸಾಮಾಜಿಕರಣದ ಸೆಲೆಗೆ ಕೊಂಡೊಯ್ದ ಕೀರ್ತಿ ಮರಾಠಿ ದಲಿತ ಆತ್ಮ ಕಥೆಗಳಿಗೆ ಸಲ್ಲುತ್ತದೆ. ವೈಯಕ್ತಿಕ ಬದುಕಿನ ಅನುಭವಗಳನ್ನು ಹೇಳಿಕೊಳ್ಳುತ್ತಲೇ ತಾನು ಬೆಳೆದು ಬಂದ ಸಮುದಾಯದ ಬದುಕಿನಾಳದ ಒಳವಿನ್ಯಾಸಗಳನ್ನು ಕಟ್ಟಿಕೊಡಬಲ್ಲದು ಎಂಬುದನ್ನು ಈ ಆತ್ಮಕಥೆಗಳು ತಿಳಿಸುತ್ತವೆ. ಜೊತೆಗೆ ಕಾವ್ಯದಷ್ಟೆ ಪ್ರಕಾರವಾಗಿ ಆತ್ಮಕಥೆಗಳೂ ಕೂಡ ಶೋಷಕವ್ಯವಸ್ಥೆಯ ವಿರುದ್ಧ ಆಕ್ರೋಶ ಸಿಟ್ಟನ್ನು ವ್ಯಕ್ತಪಡಿಸಬಲ್ಲವು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಆತ್ಮಕಥೆಯ ಪ್ರಕಾರ ತನ್ನದೇ ಆದ ವಿಶಿಷ್ಟ ಛಾಪನ್ನು ನಿರ್ಮಿಸಿದೆ. ೧೯೩೬ ರಲ್ಲಿ ಪ್ರಕಟವಾದ ಕನ್ನಡದ ಮೊದಲ ಸ್ವತಂತ್ರ ಆತ್ಮಚರಿತ್ರೆಯಾದ ಹರ್ಡೇಕರ್ ಮಂಜಪ್ಪನವರ 'ನನ್ನ ಇಪ್ಪತ್ತು ವರ್ಷಗಳ ಕಾಣಿಕೆ' ಎಂಬ ಕೃತಿಯಿಂದ ಮೊದಲುಗೊಂಡು ಜಿ. ಪಿ. ರಾಜರತ್ನಂ ಅವರ 'ಹತ್ತು ವರ್ಷ' ಕುವೆಂಪು ಅವರ 'ನೆನಪಿನ ದೋಣಿಯಲ್ಲಿ' ಮಾಸ್ತಿ ಅವರ 'ಭಾವ', ಕಾರಂತರ 'ಹುಚ್ಚುಮನಸ್ಸಿನ ಹತ್ತು ಮುಖಗಳು', ಎ.ಎನ್. ಮೂರ್ತಿರಾವ್ ರವರ 'ಸಂಜೆಗಣ್ಣಿನ ಹಿನ್ನೋಟ' – ಮುಂತಾದ ಹಿರಿಯ ಲೇಖಕರ ಆತ್ಮ ಕಥೆಗಳು ಆತ್ಮ ಕಥೆ ಸಾಹಿತ್ಯ ಪ್ರಕಾರಕ್ಕೆ ಅರ್ಥಪೂರ್ಣ ಪರಂಪರೆಯನ್ನು ನಿರ್ಮಿಸಿವೆ. ಇತ್ತೀಚೆಗೆ ಪ್ರಕಟಗೊಳ್ಳುತ್ತಿರುವ ಅನೇಕ ದಲಿತ ಆತ್ಮಕಥೆಗಳು ತನ್ನದೇ ಆದ ಕ್ರಾಂತಿಕಾರಕ ಸೃಜನಶೀಲ ಪ್ರಕ್ರಿಯೆಗಳಾಗಿವೆ.

ಮರಾಠಿಯಲ್ಲಿ ದಲಿತ ಆತ್ಮ ಕಥೆಗಳು ಶೋಷಕ ಸಮಾಜದ ವಿರುದ್ಧ ಪ್ರತಿಭಟನೆಯ ಅಸ್ತ್ರವಾಗಿ ಝಳಪಿಸುತ್ತಿದ್ದ ಸಂದರ್ಭದಲ್ಲಿ ಕನ್ನಡ ದಲಿತ ಕಾವ್ಯ ಆ ನಿಟ್ಟಿನಲ್ಲಿ ತನ್ನ ಕ್ರಾಂತಿಕಾರಿ ಸ್ವರೂಪವನ್ನು ಕನ್ನಡ ಸಾಹಿತ್ಯಕ್ಕೆ ಪರಿಣಾಮ ಕಾರಿಯಾಗಿ ಪರಿಚಯಿಸಿತ್ತು. ಮರಾಠಿ ದಲಿತ ಆತ್ಮ ಕಥೆಗಳು ಅಲ್ಲಿನ ಸಾಮಾಜಿಕ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ವಲಯದಲ್ಲಿ ಉಂಟುಮಾಡಿದ ಸಂಘರ್ಷ ಕನ್ನಡ ದಲಿತ ಸಾಹಿತ್ಯ ಸಂದರ್ಭದಲ್ಲಿ ಆತ್ಮಕಥೆಯ ಪ್ರಗತಿಪರ ಆಲೋಚನೆಗೆ ಇಂಬುನೀಡಿದವು. ಇದಕ್ಕೆ ಪ್ರತಿಕ್ರಿಯೆ ಎಂಬಂತೆ ಕನ್ನಡದ ಪ್ರಥಮ ದಲಿತ ಆತ್ಮಕಥೆ ಅರವಿಂದ ಮಾಲಗತ್ತಿಯವರ 'ಗೌರ್ಮೆಂಟ್ ಬ್ರಾಹ್ಮಣ' ೧೯೯೮ ರಲ್ಲಿ ಪ್ರಕಟಗೊಂಡಿತು. ಆನಂತರದಲ್ಲಿ ಅನುಕ್ರಮವಾಗಿ ೧೯೯೬ ರಲ್ಲಿ ಸಿದ್ಧಲಿಂಗಯ್ಯನವರ 'ಊರುಕೇರಿ', ತುಂಬಾಡಿ ರಾಮಯ್ಯನವರು ಬರೆದ 'ಮಣೆಗಾರ', ಕೆ. ಗೋವಿಂದರಾಜು ರವರ 'ಮನವಿಲ್ಲದವರಮಧ್ಯೆ', ಲಕ್ಷ್ಮಣ ರವರ 'ಸಂಭೋಳಿ' ಮೊದಲಾದ ದಲಿತ ಆತ್ಮಕಥೆಗಳು ಹೊರ ಬಂದಿವೆ. ಕನ್ನಡದ ದಲಿತ ಆತ್ಮ ಕಥೆಗಳು ಮರಾಠಿ ಆತ್ಮಕಥೆಗಳಲ್ಲಿನ ಪ್ರಕರತೆಯನ್ನು ಹೊಂದಿಲ್ಲದಿದ್ದರೂ ತಮ್ಮದೇ ಆದ ಭಿನ್ನಸ್ವರೂಪದ ಶೈಲಿಯನ್ನು ಒಳಗೊಂಡಿವೆ. ಆರಂಭದ ಕನ್ನಡ ದಲಿತ ಕಾವ್ಯಗಳಲ್ಲಿ ವ್ಯವಸ್ಥೆಯ ವಿರುದ್ಧ ಸಿಟ್ಟು, ಆಕ್ರೋಶ, ವ್ಯಕ್ತಗೊಂಡ ಕಾರಣ, ಆನಂತರದಲ್ಲಿ ಬಂದ ಆತ್ಮಕಥೆಗಳಲ್ಲಿ ಮರಾಠಿ ಆತ್ಮ ಕಥೆಗಳಲ್ಲಿಯ ಹಾಗೇ ತೀವ್ರ ಆಕ್ರೋಶ, ಸಿಟ್ಟಿಗೆ ಬದಲಾಗಿ ವ್ಯವಸ್ಥೆಯನ್ನು ಭಿನ್ನರೀತಿಯಲ್ಲಿ ಕಾಣಬಹುದು.

ಕನ್ನಡದಲಿತ ಆತ್ಮಕಥೆಗಳಲ್ಲಿ ಸಿದ್ಧಲಿಂಗಯ್ಯನವರ 'ಊರುಕೇರಿ' ಯು ವಿಭಿನ್ನ ನೆಲೆಯಲ್ಲಿ ಅಭಿವ್ಯಕ್ತಗೊಂಡಿರುವ ಆತ್ಮಕಥನ. ಯಾವುದೇ ಪ್ರಭಾವಕ್ಕೂ ಒಳಗಾಗದೆ ತನ್ನದೇ ಆದ ಅಭಿವ್ಯಕ್ತಿ ಶೈಲಿಯನ್ನು ರೂಢಿಸಿಕೊಂಡ ಕೃತಿ. ತಮ್ಮ ಕವನಗಳಲ್ಲಿ ರೊಚ್ಚಿನ ಭಾಷೆಯನ್ನು ಬಳಸುವ ಸಿದ್ಧಲಿಂಗಯ್ಯ ಇಲ್ಲಿ ಯಾವ ರೋಷವನ್ನು ಪ್ರಕಟಿಸದೆ ಸಾಮಾನ್ಯ ಸಂಗತಿಯನ್ನು ಹೇಳಿಕೊಂಡು ಹೋಗುವ ದನಿಯಲ್ಲಿ ಮಾತನಾಡುವುದೇ ಕೃತಿಯ ಶಕ್ತಿಯನ್ನು ಹೆಚ್ಚಿಸುತ್ತದೆ. – ಎಂಬ ಎಲ್. ಎಸ್. ಶೇಷಗಿರಿರಾವ್ ಅವರ ಅಭಿಪ್ರಾಯ ಸತ್ಯಸಂಗತಿಯಾಗಿದೆ. ಈಗಾಗಲೇ ಮೂರು ಮುದ್ರಣಗಳನ್ನು ಕಂಡಿರುವ 'ಊರುಕೇರಿ' ಯನ್ನು ಪಾವಣ್ಣನ್ ಎಂಬುವವರು 'ಊರುಂಚೇರಿ' ಎಂಬುದಾಗಿ ತಮಿಳುಭಾಷೆಗೆ ಅನುವಾದಿಸಿದ್ದು ಅಲ್ಲಿಯೂ ಕೂಡ ಎರಡು ಮುದ್ರಣವನ್ನು ಕಂಡಿದೆ.

ಸಿದ್ಧಲಿಂಗಯ್ಯನವರು ತಮ್ಮ ಆತ್ಮಕಥೆಗೆ ಇಟ್ಟಿರುವ ಹೆಸರು ಅವರ ಸೂಕ್ಷ್ಮಗ್ರಾಹಿ ಮನಸ್ಥಿತಿಗೆ ದ್ಯೋತಕವಾಗಿದ್ದು ಹಲಬಗೆಯ ಅರ್ಥಗಳನ್ನು ಬಿಟ್ಟಿಕೊಡುತ್ತದೆ. 'ಊರುಕೇರಿ' ಎನ್ನುವ ಹೆಸರೆ, ಭಾರತೀಯ ಶ್ರೇಣೀಕೃತ ಸಮಾಜದ ವರ್ಗವ್ಯವಸ್ಥೆಯನ್ನು ಪರಿಚಯಿಸುತ್ತದೆ. ಹಾಗೂ ಭಾರತೀಯ ಅಸಮಾನತೆಯ ಸಮಾಜವನ್ನು ಸಾಂಕೇತಿಸುತ್ತದೆ. ಸವರ್ಣೀಯರುಮಾತ್ರ ವಾಸಿಸುವ ಸ್ಥಳವನ್ನು 'ಊರು' ಎಂಬುದಾಗಿಯೂ, ಕೀಳು ಕುಲದವರೆಂಬ ಕಾರಣಕ್ಕಾಗಿ ಊರಹೊರಗೆ ವಾಸಿಸುತ್ತಿರುವ ಅಸ್ಪೃಶ್ಯರ ಸ್ಥಳವನ್ನು 'ಕೇರಿ' ಎಂಬುದಾಗಿ ಭಾರತೀಯ ಸಂದರ್ಭದಲ್ಲಿ ಅರ್ಥೈಸಲಾಗಿದೆ. 'ಊರು'

ಎಲ್ಲಾ ಜಾತಿ ಸಮುದಾಯದ ವಾಸಸ್ಥಳವಾದರೂ ಅದೇ ಊರಿನಲ್ಲಿ ಜಾತಿಯಾಧಾರಿತವಾಗಿ ಬೇರೆ ಬೇರೆ ವಾಸವಾಗಿರುವ ಪ್ರದೇಶಗಳಿಗೂ 'ಕೇರಿ' ಎನ್ನಲಾಗುತ್ತದೆ. ಒಟ್ಟಾರೆ 'ಊರುಕೇರಿ' ಆತ್ಮಕಥೆಯು ಸವರ್ಣೀಯರು ಮತ್ತು ಅಸ್ಪೃಶ್ಯರಬದುಕಿನಾಳದ ಹಲವು ಸುಡುಸತ್ಯಗಳನ್ನು ಪರಿಚಯಿಸುತ್ತದೆ. ಇಲ್ಲಿ ಲೇಖಕರ ವೈಯಕ್ತಿಕ ನೋವು ಸಾಮಾಜಿಕ ನೆಲೆಯಲ್ಲಿ ಅಭಿವ್ಯಕ್ತಗೊಂಡಿದೆ. ಸುತ್ತಲ ಸಾಮಾಜಿಕ ಪರಿಸರವನ್ನು ಪ್ರಜ್ಞಾಪೂರ್ವಕವಾಗಿ ಅವಲೋಕಿಸುವ ಅಭಿವ್ಯಕ್ತಿಸುವಲ್ಲಿನ ಲೇಖಕರ ಸೂಕ್ಷ್ಮಸಂವೇದನಾಶೀಲ ಮನಸ್ಥಿತಿಯನ್ನು ಕೂಡ ಇದು ತಿಳಿಸುತ್ತದೆ.

ಕನ್ನಡ ದಲಿತ ಆತ್ಮಕಥೆಗಳಲ್ಲಿ ಪ್ರಾದೇಶಿಕವಾಗಿ ಭಿನ್ನತೆಯಿದ್ದರೂ ಸಹ ಅಲ್ಲಿನ ಕೆಲವು ಘಟನೆಗಳು ಸಾಮ್ಯತೆಯನ್ನು ಹೊಂದಿರುತ್ತವೆ. ಜೊತೆಗೆ ಸಾಮಾಜಿಕವಾಗಿ ಕಂಡುಬರುವ ಕೆಲವು ಸಮಸ್ಯೆಗಳು ಒಂದೇ ಆಯಾಮ ಹೊಂದಿರುತ್ತವೆ. 'ಊರುಕೇರಿ' ಯಲ್ಲಿ ನೀರಿನ ಸಮಸ್ಯೆ ಪ್ರದಾನವಾಗಿದೆ. ಅಂಬೇಡ್ಕರ್ ತಮ್ಮ ಜೀವಿತದ ಕಾಲದಲ್ಲಿ ಈ ಸಮಸ್ಯೆಯ ವಿರುದ್ಧ ೧೯೨೯ ರಲ್ಲಿ ಹೋರಾಡಿದ್ದು ಈಗ ಇತಿಹಾಸ. ಜಾತಿಯ ಕಾರಣಕ್ಕಾಗಿ ಪ್ರತ್ಯೇಕಿಸಲ್ಪಟ್ಟಿರುವ ದಲಿತರು ಸವರ್ಣೀಯರ ಬಾವಿಗಳಿಗೆ ಹೋಗದೆ ತಮಗೆ ಮೀಸಲಾದ ಬಾವಿಗಳಲ್ಲಿಯೇ ನೀರನ್ನು ಬಳಸಬೇಕೆಂಬ ಸಾಮಾಜಿಕ ಕಟ್ಟುಪಾಡುಗಳು ಇಂದಿಗೂ ಜೀವಂತವಾಗಿವೆ. ಮಾಗಡಿಯ ದಲಿತರು ಕುಡಿಯುವ ನೀರಿಗಾಗಿ ಅನುಭವಿಸುತ್ತಿದ್ದ ತೊಂದರೆಗಳನ್ನು ಕಂಡಿದ್ದ ಲೇಖಕರು ತಮ್ಮ ಆತ್ಮಚರಿತ್ರೆಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ. "ಆ ಜಮೀನಿನಲ್ಲಿ ಐನೋರ ಚಂದವಾದ ಮನೆ, ದೊಡ್ಡದಾದ ಬಾವಿ, ಪಂಪ್‌ಸೆಟ್ ಮನೆ ಇದ್ದವು. ಈ ಬಾವಿಯಿಂದ ಅವರ ಹೊಲಗದ್ದೆಗಳಿಗೆ ನೀರು ಹರಿಯುತಿತ್ತು ನಮ್ಮ ಕೇರಿಯ ಜನಕ್ಕೆ ಕುಡಿಯಲು ನೀರು ಸಿಕ್ಕರೆ ಅದೇ ದೊಡ್ಡ ಸಂಗತಿ. ನಮ್ಮ ಜನ ಸ್ವಲ್ಪ ದೂರದಲ್ಲಿದ್ದ ಹೂವಿನ ತೋಟದ ಪಕ್ಕದ ಬಾವಿಯಿಂದ ನೀರು ತರುತ್ತಿದ್ದರು. ದಲಿತರನ್ನು ಬಿಟ್ಟರೆ ಉಳಿದವರು ಆ ಬಾವಿಯಿಂದ ನೀರು ತರುವುದನ್ನು ನಾನು ನೋಡಲಿಲ್ಲ". ಒಂದು ಸಮುದಾಯಕ್ಕೆ ಕುಡಿಯಲು ನೀರಿಲ್ಲದಿದ್ದರೂ ಇನ್ನೊಂದು ಸಮುದಾಯಕ್ಕೆ ಯಥೇಚ್ಚವಾಗಿ ಉಳಿದ ನೀರನ್ನು ಹೊಲಗದ್ದೆಗಳಿಗೆ ಹರಿಯಬಿಡುವಷ್ಟು ಸಮೃದ್ಧವಾಗಿರುವುದು ವಿಪರ್ಯಾಸದ ಸಂಗತಿ ಎಂಬುದನ್ನು ಲೇಖಕರು ಧ್ವನಿಸುತ್ತಾರೆ.

ಕನ್ನಡ ದಲಿತ ಆತ್ಮಕಥೆಗಳು ಸಾಮ್ಯತೆಯ ಲಕ್ಷಣಗಳನ್ನು ಒಳಗೊಂಡಿವೆ. ನೀರಿನ ಸಮಸ್ಯೆ ಅರವಿಂದ ಮಾಲಗತ್ತಿ ಹಾಗೂ ತುಂಬಾಡಿ ರಾಮಯ್ಯನವರ ಆತ್ಮ ಕಥೆಗಳಲ್ಲಿ ವ್ಯಕ್ತಗೊಮಡಿದೆ. ಮೂರು ಆತ್ಮಕಥೆಗಳಲ್ಲೂ ನೀರಿನ ಸಮಸ್ಯೆ ಅಥವಾ ಪ್ರಸಂಗಗಳು ಮೂಲಭೂತ ಅಗತ್ಯಗಳ ವಿಷಯದಲ್ಲೂ ಭಾರತೀಯ ಸಮಾಜದಲ್ಲಿನ ಜಾತೀಯತೆಯ ಭೀಕರತೆಯನ್ನು ಬಿಂಬಿಸುತ್ತದೆ.

ದಲಿತ ಆತ್ಮಕತೆಗಳು ಕನ್ನಡ ಸಾಹಿತ್ಯ ಪರಂಪರೆಗೆ ಹೊಸ ಬಗೆಯ ಅನುಭವದ ಲೋಕಗಳನ್ನು ಪರಿಚಯಿಸಿವೆ. ಸಿದ್ಧಲಿಂಗಯ್ಯನವರ 'ಊರುಕೇರಿ' ತನ್ನ ನಿರೂಪಣಾ ಶೈಲಿಯಿಂದಾಗಿ 'ಗೌರ್ಮೆಂಟ್ ಬ್ರಾಹ್ಮಣ' ಕೃತಿಗಿಂತ ವಿಭಿನ್ನ ನೆಲೆಯಲ್ಲಿ ನಿಲ್ಲುತ್ತವೆ. ಲೇಖಕರು ತಮಗಾದ ನೋವಿನ, ಅಪಮಾನದ ಅನುಭವಗಳನ್ನು ನಿರ್ಲಿಪ್ತವಾಗಿ ಹೇಳಿಕೊಳ್ಳುತ್ತಲೇ, ಎಲ್ಲಿಯೂ ಕೂಡ ಸಿಟ್ಟನ್ನು ವ್ಯಕ್ತಪಡಿಸದೆ, ವ್ಯಂಗ್ಯ, ವಿಡಂಬನೆ ಹಾಸ್ಯದ ಮುಖೇನ ವಾಸ್ತವ ಸ್ಥಿತಿಗಳನ್ನು ಅನಾವರಣಗೊಳಿಸುತ್ತಾರೆ "ಳ ಇದು ಬಡತನದ ನೋವಿನ ಕಥೆಯೂ ಅಲ್ಲ ಸಾಧನೆಗಳ ಚರಿತ್ರೆಯೂ ಅಲ್ಲ. ಸಾಮನ್ಯವಾಗಿ ಆತ್ಮಕಥೆಯಲ್ಲಿ 'ನಾನು' ಕೇಂದ್ರವಾಗಿ ಅದರ ಸುತ್ತ ವಿವರಗಳು ಬೆಳೆಯುತ್ತವೆ. ಆದರೆ 'ಊರುಕೇರಿ' ಯಲ್ಲಿ ನಾನು ಎಂಬ 'ಅಹಂ' ಇಲ್ಲ ಬದಲಾಗಿ 'ನಾನು' ಎಂಬ ಅಸ್ತಿತ್ವವನ್ನು ಕಂಡು ಕೊಳ್ಳುವ ಪ್ರಕ್ರಿಯೆಯ ಕಥನವಾಗಿ ಇದು ಮುಖ್ಯ ಆಗುತ್ತದೆಳ". ಎಂಬ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ಅಭಿಪ್ರಾಯ 'ಊರುಕೇರಿ' ಯ ಆಶಯ ಮತ್ತು ಧೋರಣೆಯನ್ನು ಸ್ಪಷ್ಟವಾಗಿ ಗುರ್ತಿಸುತ್ತದೆ.

ಸಿದ್ಧಲಿಂಗಯ್ಯನವರು ತಮ್ಮ ಆತ್ಮಕಥೆಯನ್ನು ಐದು ಬಾಗಗಳಾಗಿ ವಿಭಾಗಿಸಿಕೋಮಡು ಬಾಲ್ಯದಿಂದ ಹಿಡಿದು ತಾವು ಸಂಶೋಧನ ಸಹಾಯಕ ಹುದ್ದೆಗೆ ನೇಮಕಗೊಳ್ಳುವವರೆಗಿನ ತಮ್ಮ ಜೀವನಾನುಭವವನ್ನು ಸರಳಾಭಿವೃದ್ಧಿಯಲ್ಲಿ ನಿರೂಪಿಸಿದ್ದಾರೆ. ಹಲವು ವಿಮರ್ಶಕರು ಗುರುತಿಸಿರುವ ಹಾಗೆ, ಪ್ರಬಂಧ ಬರವಣಿಗೆಯ ಶೈಲಿಯಲ್ಲಿ ಸಾಗುವ ಇವರ ಆತ್ಮಕಥೆಯಲ್ಲಿನ ಒಂದೊಂದು ಘಟನೆಯೂ ಕೂಡ ಕಥೆ, ಕಾದಂಬರಿಯಾಗುವ ಮೌಲ್ಯವುಳ್ಳವುಗಳಾಗಿವೆ. ಲೇಖಕರು ಆತ್ಮಕಥೆಯ ಕೆಲವು ಪ್ರಸಂಗಗಳನ್ನು ಶಿಷ್ಟಬಾಷೆಯ ಜೊತೆಗೆ, ಆಡುಮಾತಿನ ಸೊಗಡಿನೊಂದಿಗೆ ಅಭಿವ್ಯಕ್ತಿಸಿರುವುದು ವಿಶೇಷವೆನಿಸುತ್ತದೆ. 'ಊರುಕೇರಿ' ಯಲ್ಲಿ ಮಾಗಡಿ, ಮಂಚನಬಲೆ, ಅವ್ವೇರಹಳ್ಳಿ, ಬೆಂಗಳೂರು ನಗರದ ಕೊಳಚೆ ಪ್ರದೇಶವಾದ ಶ್ರೀರಾಂಪುರದ ಪರಿಸರ, ಕೌಟುಂಬಿಕ ಚಿತ್ರಣ ಶಿಕ್ಷಣ ಹಾಗೂ ವಿದ್ಯಾರ್ಥಿನಿಲಯದ ಅನುಭವಗಳ ವಿವರ, ಕಾಲೇಜು ದಿನಗಳಲ್ಲಿನ ಹೋರಾಟಗಳು, ಸಾಂಸ್ಕೃತಿಕ ಚಟುವಟಿಕೆಗಳ ಸಂಗತಿಗಳು, ಪ್ರಭಾವಿ ಪೂರ್ಣ ವ್ಯಕ್ತಿಗಳ ವ್ಯಕ್ತಿತ್ವದ ಪರಿಚಯ – ಈ ವಿಷಯಗಳು ವಿವರಣಾತ್ಮಕವಾಗಿ ಅಭಿವ್ಯಕ್ತಗೊಂಡಿದೆ. ಆತ್ಮಕಥೆ ಆರಂಭವಾಗುವುದೇ 'ಕೇರಿಯಲ್ಲಿ ಕೊನೆಯ ಮನೆ ನಮ್ಮದು' ಎಂಬ ಸಾಲಿನ ಮುಖೇನ ಲೇಖಕರ ಈ ಮಾತನ್ನು ಸೂಕ್ಷ್ಮವಾಗಿ ಗ್ರಹಿಸಿದ್ದೇ ಆದಲ್ಲಿ ವಿಭಿನ್ನ ಅರ್ಥವು ಸ್ಫುರಿಸುತ್ತಾ ಹೋಗುತ್ತದೆ. ಭಾರತೀಯ ಶ್ರೇಣೀಕೃತ ಜಾತೀವ್ಯವಸ್ಥೆಯಲ್ಲಿ ದಲಿತರ ಸ್ಥಿತಿ ಯಾವ ಬಗೆಯದು ಎಂಬುದನ್ನು ಸಹ ಈ ಸಾಲು ತಿಳಿಸುತ್ತದೆ. ದಲಿತ ಆತ್ಮ ಕಥೆಗಳಲ್ಲಿ ಚಿತ್ರಿತಗೊಂಡಿರುವ ಹಸಿವು, ಬಡತನ, ಜೀತಪದ್ದತಿ ತೀವ್ರತೆ ಹಾಗೂ ಅವುಗಳನ್ನು ಎದುರಿಸಲು ದಲಿತರು ನಡೆಸಿದ ಹೊಯ್ದಾಟಗಳು ಓದುಗರನ್ನು ತಲ್ಲಣಿಸದೆ ಇರಲಾರವು. ಸಿದ್ಧಲಿಂಗಯ್ಯನವರು ಹಸಿವು ಬಡತನವನ್ನು ಸಹಿಸಿಕೊಂಡ ಬಗೆಯನ್ನು ಕುರಿತು "ಮಾವಿನಮರದ ಹೊಲದ ಒಡೆಯರು ಬಹು ಉದಾರಿಗಳು. ಪೇಟೆಯಲ್ಲಿದ್ದ ಅವರ

ಮನೆಗೆ ಹೋಗಿ ಅಪ್ಪ, ಅವ್ವ, ನಾನು ಅವರ ಬಾಗಿಲ ಮುಂದೆ ನಿಂತಾಗ ಅವರು ಮನೆಯಲ್ಲಿ ಉಳಿದಿದ್ದ ಚಿತ್ರಾನ್ನ, ಪೂರಿ ಇತ್ಯಾದಿಗಳನ್ನು ಕೊಡುತ್ತಿದ್ದರು. ಈ ರೀತಿಯ ತಿಂಡಿಗಳನ್ನು ನಾನು ಎಂದೂ ತಿಂದಿರಲಿಲ್ಲ. ಅವುಗಳ ರುಚಿಯೋ ರುಚಿ. ಜೊತೆಗೆ ಏನೋರ ಹಳೆಯದಾದ ಸ್ವಲ್ಪ ಹರಿದುಹೋದ ತಮ್ಮ ಮಗನ ಶರಾಯಿ, ಅಂಗಿಯನ್ನು ನನಗೆ ಕೊಡುತ್ತಿದ್ದರೂ. ದೊಗಳೆಯಾದ [ದೊಡ್ಡದಾದ] ಅವುಗಳನ್ನು ಧರಿಸಿದಾಗ ನನ್ನ ಓರಗೆಯ ಹುಡುಗರಿಗಿಂತ ವಿಚಿತ್ರವಾಗಿ ಕಾಡಿತಿದ್ದ" ಮೇಲಿನ ಸಾಲುಗಳಲ್ಲಿ ಹಸಿವು ಮತ್ತು ಬಡತನ ಕೆಲವು ಸಂದರ್ಭಗಳಲ್ಲಿ ನಮ್ಮ ತನವನ್ನು ಮರೆತು ಬೇರೆಯವರ ಮುಂದೆ ಕೈಚಾಚಿಸುವ ಮಟ್ಟಕ್ಕೆ ಇಳಿಸುತ್ತದೆ. ಎಂಬುದನ್ನು ನೋಡಬಹುದು. ಆತ್ಮಕಥೆಯ ಎರಡನೇ ಭಾಗದಲ್ಲಿ ಹಸಿವನ್ನು ಇಂಗಿಸಿಕೊಳ್ಳಲು ಜನರು ಊರಿಗೆ ತಪ್ಪಿಸಿಕೊಂಡು ಬಂದ ಎಮ್ಮೆಯನ್ನು ಕೊಯ್ದು ತಿಂದ ಪ್ರಸಂಗವನ್ನು ಹೇಳಿದ್ದಾರೆ.

ಸ್ವತಃ ಲೇಖಕರೇ ಕಣ್ಣಾರೆ ನೋಡಿರುವ ಒಂದು ಪ್ರಸಂಗವು ಬಾರತೀಯ ಸಮಾಜದಲ್ಲಿ ಹೇಗೆ ಜಾತಿ ಪದ್ಧತಿ ಮನೆಮಾಡಿತ್ತು ಎಂಬುದನ್ನು ತಿಳಿಸುತ್ತದೆ. "ಎಂದಿನಂತೆ ಹುಡುಗರೆಲ್ಲ ಪಕ್ಕದ ಮನೆಯ ಮೋಟುಗೋಡೆಯ ಮೇಲೆ ನೀಂತು, ಅವ್ವಂದಿರನ್ನು ಕೂಗುತ್ತಿದ್ದಾಗ ಒಂದು ದೃಶ್ಯ ಕಾಣಿಸಿತು. ಏನೋರ ಹೊಲದಲ್ಲಿ ಇಬ್ಬರು ಮನುಷ್ಯರು ನೊಗ ಹೊತ್ತು ಎತ್ತುಗಳಂತೆ ದುಡಿಯುತ್ತಿರುವ ದೃಶ್ಯ ಕಾಣಿಸಿತು. ಆನಂತರ ನೊಗಹೊತ್ತ ಇಬ್ಬರು ಮನುಷ್ಯರಲ್ಲಿ ನಮ್ಮಪ್ಪನೂ ಒಬ್ಬ ಎಂಬುದು ತಿಳಿದಾಗ ವಿಚಿತ್ರಸಂಕಟ ಶುರುವಾಯಿತು. ನಮ್ಮ ಪಕ್ಕದಲ್ಲೆ ಹೋಗುತ್ತಿದ್ದ ಇಬ್ಬರು ಹೆಂಗಸರು ಪಾಪ ದ್ಯಾವಣ್ಣನಿಗೆ ಎಂತಹ ಸ್ಥಿತಿ ಬಂತು ಎಂಬ ಮಾತುಗಳು ಕಿವಿಗೆ ಬಿದ್ದಾಗ ದುಃಖ ಇಮ್ಮಡಿಸಿತು. ಉಳುಮೆಮಾಡಿ ಸಂಜೆ ಮನೆಗೆ ಬಂದ ನಮ್ಮಪ್ಪನ ಭುಜಕ್ಕೆ ಅಮ್ಮ ಎಣ್ಣೆ ಕಾಯಿಸಿ ಹಚ್ಚುತ್ತಿದ್ದಳು. ಜಮೀನ್ದಾರಿ ವ್ಯವಸ್ಥೆಯ ಕೌರ್ಯಕ್ಕೆ ಕನ್ನಡಿ ಹಿಡಿದಂತಿದೆ ಮೇಲಿನ ಪ್ರಸಂಗ ಸಾಲದ ಹೊರೆಯನ್ನು ತೀರಿಸಲಾರದೆ ಜೀತದಾಳಾಗಿ, ಮಲಹೊರುವ ಕೆಲಸವನ್ನು ಮಾಡುತ್ತಿದ್ದರೆಂಬುದು ತಿಳಿಯುತ್ತದೆ. ಹಸಿವು, ಬಡತನ, ಅಸ್ಪೃಶ್ಯತೆ, ಜಾತೀಯತೆ, ಅಪಮಾನಗಳು – ಶತಮಾನಗಳಿಂದಲೂ ದಲಿತ ಸಮುದಾಯವನ್ನು, ಅವರಲ್ಲಿನ ಸೃಜನಶೀಲ ಶಕ್ತಿಗಳನ್ನು ತುಳಿಯುತ್ತಲೇ ಗಹಗಹಿಸುತ್ತಿರುವುದು ಚಾರಿತ್ರಿಕವಾದ ಸತ್ಯವಾಗಿದೆ. ಈ ಎಲ್ಲಾ ಸವಾಲುಗಳನ್ನು ಪ್ರತಿಸ್ಪರ್ಧಿಯಾಗಿಸಿಕೊಳ್ಳುತ್ತಲೇ ಅವುಗಳನ್ನು ಮೆಟ್ಟಿನಿಂತ ಅಪರೂಪದ ವ್ಯಕ್ತಿತ್ವ ಸಿದ್ಧಲಿಂಗಯ್ಯನವರದು. ಆತ್ಮಕಥನದ ಉದ್ದಕ್ಕೂ ಇದನ್ನು ಗುರುತಿಸಬಹುದು. ಸಮಾಜ ಹಾಗೂ ವೈಯಕ್ತಿಕ ಬದುಕಿನ ಸಮಸ್ಯೆಸವಾಲುಗಳು ಇವರ ದೃಷ್ಟಿಯಲ್ಲಿ ವ್ಯಕ್ತಿತ್ವ ವಿಕಸನದ ಒತ್ತಡಗಳಾಗಿ ಗುಣಾತ್ಮಕವಾಗಿ ಪರಿಣಮಿಸಿವೆ.

'ಊರುಕೇರಿ' ಆತ್ಮಕಥೆ ಕೇವಲ ನೋವಿನ ದಾಖಲೆ ಮಾತ್ರವಾಗಿರದೆ ಪ್ರಾಕೃತಿಕ ಸೌಂದರ್ಯ ಕೂಡ ಲೇಖಕರ ಜೀವನದ ಅವಿಭಾಜ್ಯ ಅಂಗವಾಗಿ ರೂಪುಗೊಂಡಿದೆ. ಮಂಚನಬಲೆ,

ಅಪ್ಪೇರಹಳ್ಳಿಯಲ್ಲಿನ ಪ್ರಾಕೃತಿಕ ಸೌಂದರ್ಯ ಜುಳು ಜುಳು ಹರಿಯುವ ಅರ್ಕಾವತಿ ನದಿ ಬೆಟ್ಟದ ಬುಡದಲ್ಲಿ ಹಿಂಡುಹಿಂಡಾಗಿ ಕುಣಿಯುತ್ತಿದ್ದ ನವಿಲುಗಳು ತಮ್ಮನ್ನು ಆಕರ್ಷಿಸಿದ ಬಗೆಯನ್ನು ವಿವರಿಸಿದ್ದಾರೆ.

ಆತ್ಮಕಥೆಯ ಮೂರನೇ ಬಾಗದಲ್ಲಿ ಲೇಖಕರು ತಮ್ಮ ತಾಯಿ ಕೆಲಸಮಾಡುತ್ತಿದ್ದ ಶ್ರೀರಾಂಪುರದ ಆರ್. ಗೋಪಾಲಸ್ವಾಮಿ ಅಯ್ಯರ್ ದಲಿತ ವಿದ್ಯಾರ್ಥಿನಿಲಯಕ್ಕೆ ತಮ್ಮನ್ನು ಸೇರಿಸಿದ್ದು, ಅನಂತರ ವಿದ್ಯಾರ್ಥಿದೆಸೆಯ ಹಾಸ್ಟೆಲ್ ಜೀವನದ ಅನುಭವಗಳನ್ನು ಸ್ವಾರಸ್ಯಕರವಾಗಿ ಚಿತ್ರಿಸಿದ್ದಾರೆ. ವಿದ್ಯಾರ್ಥಿನಿಲಯದಲ್ಲಿದ್ದಾಗ ಹಲವು ಬಗೆಯ ಹಣ್ಣುಗಳನ್ನು ಕದ್ದು ತಿಂದ ಪ್ರಸಂಗವನ್ನು ಚಿತ್ರಿಸಿದ್ದಾರೆ. ವಿದ್ಯಾರ್ಥಿನಿಲಯದ ಅನುಭವಗಳು 'ಗೌರ್ಮೆಂಟ್ ಬ್ರಾಹ್ಮಣ' ಹಾಗೂ 'ಮಣೆಗಾರ', 'ಸಂಬೋಳಿ' ಆತ್ಮ ಕಥೆಗಳಲ್ಲಿಯೂ ಚಿತ್ರಿತಗೊಂಡಿವೆ. ಊರಿನಿಂದ ತಂದ ತಿಂಡಿಯನ್ನು ಬಚ್ಚಿಟ್ಟುಕೊಂಡು ತಿನ್ನುತಿದ್ದ ಹುಡುಗರು ಶಾಲೆಗೆ ಹೋಗಿದ್ದ ಸಂದರ್ಭದಲ್ಲಿ, ಅವರ ಟ್ರಂಕಿನ ಬೀಗ ತೆಗೆದು ಕದ್ದು ತಿಂಡಿಯನ್ನು ತಿನ್ನುವ ಪ್ರಸಂಗವಾಗಲೀ, ಹಾಸ್ಟೆಲ್‌ನಲ್ಲಿ ಓದಿಕೊಂಡಿದ್ದಾಗಲೇ ಬಾರ್‌ಗಳಲ್ಲಿ, ಫ್ಯಾಕ್ಟರಿಗಳಲ್ಲಿ ಕೆಲಸಮಾಡಿಕೊಂಡು ಹಣ ಹೊಂದಿಸಿಕೊಳ್ಳುತ್ತಿದ್ದ ಘಟನೆಗಳಾಗಲೀ, ಹಾಸ್ಟೆಲ್ನಲ್ಲಿ ಊಟಕ್ಕಾಗಿ ಒಬ್ಬರಿಗೊಬ್ಬರು ಪೈಪೋಟಿ ನಡೆಸುತ್ತಿದ್ದ ಪ್ರಸಂಗಗಳಾಗಲೀ ಬೇರೆಯವರ ಬಟ್ಟೆಗಳನ್ನು ಧರಿಸಿ ಬೇರೆ ಕಾರ್ಯಕ್ರಮಗಳಿಗೆ ಹೋಗುತ್ತಿದ್ದುದು ಹಾಸ್ಟೆಲ್ ನಲ್ಲಿನ ಹುಡುಗರು ಬ್ರಾಹ್ಮಣೀಕರಣಗೊಳಿಸಲು ಯತ್ನಿಸುತ್ತಿದ್ದ ಘಟನೆಗಳಾಗಲೀ ಎಲ್ಲಾ ದಲಿತ ಕಾದಂಬರಿಗಳಲ್ಲೂ ಸ್ವಲ್ಪ ಸಾಮ್ಯತೆಯೊಂದಿಗೆ ಚಿತ್ರಿತಗೊಂಡಿದೆ.

ಆತ್ಮಕಥೆಯ ನಾಲ್ಕನೇ ಭಾಗದಲ್ಲಿ ಸ್ಮಶಾನದ ವಾಸ, ಕಾಲೇಜು ದಿನಗಳ ಅನುಭವ, ವೈಚಾರಿಕವಾದ ನಾಸ್ತಿಕ ಮನೋಭಾವವನ್ನು ಮೈಗೂಡಿಸಕೊಂಡ ಸಂಗತಿಗಳನ್ನು ವಿಶ್ಲೇಷಿಸಿದ್ದಾರೆ. ತಮ್ಮ ಮತ್ತು ತಂಗಿಯರು ಹುಟ್ಟಿ ಕುಟುಂಬ ದೊಡ್ಡದಾಗಿ ನಿರ್ವಹಣೆ ಕಷ್ಟವೆನಿಸಿದಾಗ ಲೇಖಕರು ಕೆಲಸ ಗೊತ್ತಿಲ್ಲದಿದ್ದರೂ ಗೊತ್ತಿದೆ ಎಂದು ಸುಳ್ಳು ಹೇಳಿ ಮೆಜೆಸ್ಟಿಕ್‌ಲ್ಲಿದ್ದ ದೊಂಡೊಸಾ ಸಿಲ್ಕ್ ಫ್ಯಾಕ್ಟರಿಗೆ ಸೇರಿ ನಿಜಸ್ಥಿತಿ ಗೊತ್ತಾದಾಗ ಮಾಲೀಕನಿಂದ ಕಪಾಳಮೋಕ್ಷ ಪಡೆದು ಅನಂತರ ಅವರಿಂದಲೇ ವೈಂಡಿಂಗ್ ಕೆಲಸ ಕಲಿತಿದ್ದನ್ನು ಮತ್ತು ಮನೆ ಪಾತ್ರೆ ತೊಳೆಯುವ ಕೆಲಸಕ್ಕೆ ಸೇರಿದಾಗ ಅನುಭವಿಸಿದ ಅವಮಾನಗಳನ್ನು ಚಿತ್ರಿಸಿದ್ದಾರೆ.

ಬಹುಸಂಖ್ಯಾತರ ಚಿಂತನೆಯಲ್ಲಿ 'ಸ್ಮಶಾನ'ದ ಕಲ್ಪನೆ ಬದುಕಿನ ನಶ್ವರತೆ ಮತ್ತು ನಿಸ್ತೇಜಕ್ಕೆ ಸಂಬಂಧಪಟ್ಟದ್ದಾಗಿದೆ. ಆದರೆ ಸಿದ್ಧಲಿಂಗಯ್ಯನವರ ಅನುಭವದಲ್ಲಿ ಸ್ಮಶಾನದ ನೀರವ ವಾತಾವರಣವು ಭವಿಷ್ಯದ ಬದುಕಿನ ಆಶಾಭಾವನೆಯನ್ನು ಕಟ್ಟಿಕೊಳ್ಳುವಲ್ಲಿ ಸ್ಫೂರ್ತಿಸೆಲೆಯಾಗಿ ಪರಿಣಮಿಸಿದೆ. ಸ್ಮಶಾನದ ಮೌನಕ್ಕೆ ಸೃಜನಶೀಲತೆಯನ್ನು ಹುಟ್ಟುಹಾಕುವ ಚೈತನ್ಯವಿದೆ ಎಂಬುದನ್ನು

ಸಿದ್ಧಲಿಂಗಯ್ಯನವರು ಪರಿಚಯಿಸಿದ್ದಾರೆ. ತಮಗಾದ ಸ್ಮಶಾನದ ಅನುಭವವನ್ನು ಕುರಿತು "ಯಾಕೊ ನನಗೆ ಸ್ಮಶಾನ ಬಹಳ ಇಷ್ಟವಾಯಿತು ಅಲ್ಲಿಗೆ ನಿತ್ಯವೂ ಸಂಜೆ ಹೋಗತೊಡಗಿದೆ. ಯಾವುದಾದರೂ ಒಂದು ಗೋರಿಯ ಮೇಲೆ ಕುಳಿತಾಗ ಪದ್ಯದ ಸಾಲುಗಳು ತಾನೆತಾನಾಗಿ ಹೊಳೆಯತೊಡಗಿದವು. ಅವನ್ನು ಗುರುತು ಹಾಕಿಕೊಳ್ಳತೊಡಗಿದೆ, ಸ್ಮಶಾನ ಮೌನವನ್ನು ಅನುಭವಿಸತೊಡಗಿದೆ" ಎಂದು ಹೇಳಿಕೊಂಡಿದ್ದಾರೆ. ಬದುಕನ್ನು ಗ್ರಹಿಸುವ ಸೂಕ್ಷ್ಮ ಸಂವೇದನಾಶೀಲಮನಸ್ಥಿತಿಯುಳ್ಳವರಿಗೆ ಮಾತ್ರ ನೋವಿನಾಳದಲ್ಲಿಯೂ ನಲಿವಿನ ಸೆಲೆಗಳು ಗೋಚರಿಸಬಲ್ಲವು ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ.

ಸರ್ಕಾರಿ ಆರ್ಟ್ಸ್ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ನಡೆದ ಒಂದು ಘಟನೆ ಪ್ರಜ್ಞಾವಂತವ್ಯಕ್ತಿಗಳು ಅದರಲ್ಲೂ ವಿದ್ಯೆಕಲಿಸುವ ಗುರುಗಳು ಹೇಗೆ ಜಾತಿಯ ಬಲೆಗೆ ಸಿಲುಕಿ ತಮ್ಮನ್ನು ಬಂಧಿಸಿಕೊಳ್ಳುವುದರ ಜೊತೆಗೆ ಇತರರ ಮನಸ್ಸಿಗೂ ನೋವನ್ನುಂಟು ಮಾಡುತ್ತಾರೆಂಬುದನ್ನು ತಿಳಿಸುತ್ತದೆ. "ತರಗತಿ ನಡೆಯುತ್ತಿದ್ದಾಗ ಒಬ್ಬ ಅಧ್ಯಾಪಕರಿಗೆ ಬಾಯಾರಿಕೆ ಆಗುತ್ತಿತ್ತು ಅವರು ತಮ್ಮ ಗಾದ್ರೇಜ್ ಬೀರುವಿನಿಂದ ನೀರು ತರಲು ನನ್ನನ್ನು ಕಳುಹಿಸುತ್ತಿದ್ದರು. ಜಂಗಮನೆಂದು ನನ್ನನ್ನು ತಿಳಿದಿದ್ದ ಅವರಿಗೆ ದಲಿತ ವಿದ್ಯಾರ್ಥಿ ಎಂದು ಹೇಳಿದ ಕೂಡಲೆ ಸಂಪ್ರದಾಯವಾದಿಗಳಾದ ಗುರುಗಳು ನೀರು ತರುವ ಕೆಲಸದಿಂದ ವಿಮುಕ್ತಿಗೊಳಿಸಿದರು" ಈ ಮಾತುಗಳು ಗುರುಗಳಲ್ಲಿ ಅಸ್ಪೃಶ್ಯತೆ ಹೇಗೆ ಮನೆಮಾಡಿತ್ತು ಎಂಬುದನ್ನು ತಿಳಿಸುತ್ತದೆ.

ಆತ್ಮಕಥೆಯ ಐದನೇ ಭಾಗದಲ್ಲಿ ಸಿದ್ಧಲಿಂಗಯ್ಯನವರು ತಾವು ಕ್ರಾಂತಿಕಾರಿಯಾಗಿ ರೂಪುಗೊಂಡ ಬಗೆಯನ್ನು ವಿಶ್ಲೇಷಿಸಿದ್ದಾರೆ. ಗೆಳೆಯರೊಟ್ಟಿಗೆ ಸೇರಿ ವಿಚಾರವಾದಿ ಪರಿಷತ್ತನ್ನು ಸ್ಥಾಪಿಸಿ ಬೆಂಗಳೂರಿನಲ್ಲಿದ್ದ ದಲಿತ ವಿದ್ಯಾರ್ಥಿಗಳನ್ನು ಸಂಘಟಿಸಿ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ಆಯೋಜಿಸಿದ್ದು, ದಲಿತ ವಿದ್ಯಾರ್ಥಿಗಳ ಸಮಸ್ಯೆ ಕುರಿತು ಅಂದಿನ ಮುಖ್ಯಮಂತ್ರಿಗಳಾಗಿದ್ದ ದೇವರಾಜ ಅರಸು ಅವರೊಟ್ಟಿಗೆ ಮುಖಾಮುಖಿಯಾಗಿ ಚರ್ಚಿಸಿದ ಸಂಗತಿಯನ್ನು ದಾಖಲಿಸಿದ್ದಾರೆ. ಬೆಂಗಳೂರಿನ ಕೊಳಗೇರಿಗಳಲ್ಲಿ ರಾತ್ರಿಶಾಲೆಗಳನ್ನು ಆರಂಭಿಸಿದ್ದು ದಲಿತ ಸಂಘರ್ಷ ಸಮಿತಿಯನ್ನು ಸ್ಥಾಪಿಸಿದ್ದು, ತಮ್ಮ ಮೊದಲ ಕೃತಿ 'ಹೊಲೆಮಾದಿಗರಹಾಡು' ಕವನಸಂಕಲನವನ್ನು ಕಿ. ರಂ. ನಾಗರಾಜ್, ಕಾಲೇಗೌಡ ನಾಗವಾರ, ಡಿ. ಆರ್. ನಾಗರಾಜ್ ಅವರ ನೆರವಿನಿಂದ ಪ್ರಕಟಿಸಿದ್ದು, ಮಾರ್ಕ್ಸ್‌ವಾದಿ ವಿದ್ಯಾಗುರುಗಳಾದ ಜಿ. ಎಸ್. ಶಿವರುದ್ರಪ್ಪನವರು ಸಂಶೋಧಕ ಸಹಾಯಕ ಹುದ್ದೆಯನ್ನು ಕೊಡಿಸಿದ್ದು ಈ ಎಲ್ಲಾ ವಿಚಾರಗಳನ್ನು ಚರ್ಚಿಸಿದ್ದಾರೆ. ಬದುಕಿನ ಸಂಘರ್ಷಗಳನ್ನು ಜಯಿಸುತ್ತಲೇ, ಸಾಮಾಜಿಕ ವ್ಯವಸ್ಥೆಯಲ್ಲಿ ತಮ್ಮ ಅಸ್ತಿತ್ವವನ್ನು ಯಶಸ್ವಿಯಾಗಿ ನಿರ್ಮಿಸಿಕೊಂಡದ್ದನ್ನು ತಿಳಿಯಬಹುದು.

ಸಿದ್ಧಲಿಂಗಯ್ಯನವರು ಆತ್ಮಕಥೆ ಭಾಗ–೧ ರಲ್ಲಿ ಮಾಗಡಿಯ ಬಾಲ್ಯದ ಅನುಭವಗಳಿಂದಿಡಿದು ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ಸಂಶೋಧನೆ ಸಹಾಯಕ ಹುದ್ದೆಗೆ ಸೇರಿಕೊಳ್ಳುವವರೆಗಿನ ಅನುಭವಗಳನ್ನು ದಾಖಲಿಸಿದ್ದಾರೆ. ಅನಂತರದ ತಮ್ಮ ಬದುಕಿನ ಅನುಭವಗಳನ್ನು ಶ್ರೀಧರ ಸಂಪಾದನೆಯ ವಾರಪತ್ರಿಕೆ 'ಅಗ್ನಿ'ಯಲ್ಲಿ ೨೦೦೨ರ ಮಾರ್ಚ್ ೧೫ ರಿಂದ ಊರುಕೇರಿ ಭಾಗ–೨ ಎಂಬ ಶೀರ್ಷಿಕೆಯಡಿ ಪ್ರಕಟಿಸಿದ್ದಾರೆ. 'ಹೊಲೆಮಾದಿಗರಹಾಡು' ಕವನಸಂಕಲನವು ಪ್ರಕಟಗೊಂಡಾಗ ವ್ಯಕ್ತಗೊಂಡ ಪ್ರತಿಕ್ರಿಯೆಗಳ ಸಂದರ್ಭದ ವಿವರದೊಟ್ಟಿಗೆ ಆರಂಭವಾಗುವ 'ಊರುಕೇರಿ ಭಾಗ–೨' ರಲ್ಲಿ ಲೇಖಕರು ತಮ್ಮನ್ನು ತಾವೇ ಗೇಲಿ ಮಾಡಿಕೊಂಡ ಹಲವು ಹಾಸ್ಯ ಪ್ರಸಂಗಗಳನ್ನು ನಿರೂಪಿಸಿದ್ದಾರೆ. ತಮ್ಮಲ್ಲಿದ್ದ ಚಾಲಾಕುತನದ ಬಗೆಗೂ ಹೇಳಿಕೊಂಡಿದ್ದಾರೆ. ಮೊದಲನೆಯ ಭಾಗದಲ್ಲಿಯ ಹಾಗೆ ಹಸಿವು, ಬಡತನ, ಅಸ್ಪೃಶ್ಯತೆ, ಅಪಮಾನದ ಪ್ರಸಂಗಗಳು : ಅವುಗಳ ಬಗೆಗಿನ ಲೇಖಕರ ವ್ಯಂಗ್ಯ ಕಟಕಿಮಾತುಗಳು ಕೂಡ ಇಲ್ಲಿಯೂ ಅಭಿವ್ಯಕ್ತಗೊಂಡಿವೆ. ತಾವು ಕುಡಿತದ ಚಟಕ್ಕೆ ಬಲಿಯಾದ ಪ್ರಸಂಗ ಅದರಿಂದ ಉಂಟಾದ ಅವಾಂತರಗಳನ್ನು ಚಿತ್ರಿಸಿದ್ದಾರೆ. ಸಿದ್ಧಲಿಂಗಯ್ಯನವರು ತಮ್ಮ ಆತ್ಮಕಥೆಯಲ್ಲಿ ಹೇಳಿಕೊಳ್ಳಲೇಬೇಕಾದ ಒಂದು ಘಟನೆಯನ್ನು ಕುರಿತು ಹೇಳುವುದಾದರೆ, ಇವರು ಬರೆದ ಕವಿತೆಗಳನ್ನು [ಕ್ರಾಂತಿಕವಿತೆ] ಪೋಲೀಸರಿಂದ ತೊಂದರೆಯಾಗಬಹುದೆಂದು ತಿಳಿದು ಇವರ ತಂದೆ ಸುಟ್ಟುಹಾಕಿದರಂತೆ. ಆರೀತಿ ಎಲ್ಲವನ್ನು ಸುಟ್ಟು ಹಾಕಿದ್ದರೆ ಇಂದು ಸಿದ್ಧಲಿಂಗಯ್ಯನವರ ಸಾಹಿತ್ಯ ಹರವು [ವಿಸ್ತಾರ] ಕಡಿಮೆಯಾಗಿರುತ್ತಿತ್ತು. ಇದನ್ನ ಸಿದ್ಧಲಿಂಗಯ್ಯನವರು ಪ್ರಸ್ತಾಪಿಸುತ್ತಾ ಸುಟ್ಟು ಹೋದ ಕವಿತೆಗಳಲ್ಲಿ ನನ್ನ ನೆನಪಿನಲ್ಲಿ ಅಚ್ಚಳಿಯದೆ ಉಳಿದಿರುವ ಒಂದು ಕವಿತೆಯ ಸಾಲುಗಳು ಹೀಗಿವೆ ಎಂದು

"ಸಿರಿವಂತರ ಶಿರಲುರುಳಲಿ
ಶುರುವಾಗಲಿ ದಂಗೆ
ಹೊರಚಿಮ್ಮುತ ಹರಿದಾಡಲಿ
ಸಿರಿನೆತ್ತರ ಗಂಗೆ"[೧೧]

ಎಂದು ಅವುಗಳನ್ನು ಹಿಡಿದಿಟ್ಟಿದ್ದಾರೆ. ಈ ಮೇಲಿನ ಸಂಗತಿ ದಲಿತ ಸಮುದಾಯದಲ್ಲಿ ಎರಡು ಮನೋಭಾವವನ್ನು ಪ್ರತಿನಿಧಿಸುತ್ತದೆ. ಶೋಷಕರ ದಬ್ಬಾಳಿಕೆಗೆ ಹೆದರಿ ಶತಮಾನಗಳಿಂದ ಶೋಷಣೆಯನ್ನು ಒಪ್ಪಿಕೊಳ್ಳುತ್ತಲೇ ಬಂದಿರುವ ಲೇಖಕರ ತಂದೆಯನ್ನು ಒಂದು ಮನೋಭಾವ ಪ್ರತಿನಿಧಿಸಿದರೆ, ಅಕ್ಷರ ತಿಳುವಳಿಕೆಯಿಂದಾಗಿ ತಮ್ಮ ಮೇಲಿನ ದೌರ್ಜನ್ಯವನ್ನು ನೇರವಾಗಿ ಪ್ರತಿಭಟಿಸುವ ಮನೋಭಾವವನ್ನು ಬೆಳೆಸಿಕೋಂಡ ಲೇಖಕರನ್ನು ಎರಡನೇ ಮನೋಭಾವ ಪ್ರತಿನಿಧಿಸುತ್ತದೆ.

ಬಾಲ್ಯಾನುಭವದ ನಿರೂಪಣೆಯೊಟ್ಟಿಗೆ ತೆರೆದುಕೊಳ್ಳುವ 'ಊರುಕೇರಿ' ಯು ಬದುಕಿನ ಸಂಘರ್ಷಗಳಿಗೆ ಮುಖಾಮುಖಿಯಾಗುತ್ತಲೇ ಹಂತಹಂತವಾಗಿ ರೂಪಿತಗೊಂಡ ಸಿದ್ಧಲಿಂಗಯ್ಯನವರ ವ್ಯಕ್ತಿತ್ವವನ್ನು ವಸ್ತುನಿಷ್ಠವಾಗಿ ಪರಿಚಯಿಸುತ್ತದೆ. ಲೇಖಕರ ಕೌಟುಂಬಿಕ ಹಿನ್ನಲೆಯ ಸ್ಪಷ್ಟ ಚಿತ್ರಣದ ಜೊತೆಗೆ ಜೀವನದಲ್ಲಿ ಅವರು ಕಂಡುಂಡ ಹಸಿವು, ಬಡತನ, ಅಸ್ಪೃಶ್ಯತೆಯ ಅಪಮಾನ, ನಿರುದ್ಯೋಗ ಸಮಸ್ಯೆಗಳ ನೇರ ಅಭಿವ್ಯಕ್ತಿ ಇದೆ. ವಿದ್ಯಾರ್ಥಿ ದಿಸೆಯಲ್ಲಿಯೇ ತುಂಟತನ, ಕ್ರಿಯಾಶೀಲತೆ, ಸೂಕ್ಷ್ಮಸಂವೇದನಾಶೀಲ ಮನಸ್ಥಿತಿಯವರಾಗಿದ್ದ ಇವರು ಜಾಣ ವಿದ್ಯಾರ್ಥಿಯಾಗಿ, ಕವಿಯಾಗಿ, ಭಾಷಣಕಾರರಾಗಿ, ಚರ್ಚಾಪಟುವಾಗಿ, ಸಂಘಟಕರಾಗಿ, ಹೋರಾಟಗಾರರಾಗಿ, ವೈಚಾರಿಕ ಪ್ರಜ್ಞೆಯನ್ನು ಮೈಗೂಡಿಸಿಕೊಂಡ ಬಗೆಯ ಹಿನ್ನೆಲೆಯಿದೆ. ವ್ಯಂಗ್ಯ, ವಿಡಂಬನೆ, ಹಾಸ್ಯ ನಿರೂಪಣಾಶೈಲಿಯಲ್ಲಿ ತಮ್ಮ ಅನುಭವಗಳನ್ನು ಸಹಜವಾಗಿ ಅಭಿವ್ಯಕ್ತಿಸಿದ್ದಾರೆ. ಬೆಂಗಳೂರಿನ ಕೊಳೆಗೇರಿಗಳಲ್ಲಿ ನಡೆಸುತ್ತಿದ್ದ ರಾತ್ರಿಶಾಲೆ, ಬೂಸಾ ಚಳುವಳಿ, ದಲಿತಸಂಘರ್ಷ ಸಮಿತಿ, ಬಂಡಾಯ ಸಮಘಟನೆ, ಚಳುವಳಿ, ಸಮ್ಮೇಳನ ಸಮಾವೇಶಗಳಲ್ಲಿನ ಲೇಖಕರ ಒಡನಾಟದ ಚಿತ್ರಣ, ಹಲವಾರು ಪ್ರಭಾವೀ ವ್ಯಕ್ತಿಗಳ ಪರಿಚಯ, ಒಡನಾಟ, ಸಮಾಜಮುಖಿ ಚಿಂತನೆ ಹಾಗೂ ಹೋರಾಟದ ವ್ಯಕ್ತಿತ್ವವನ್ನು ಪರಿಚಯಿಸುತ್ತದೆ.

ಬಡತನ ಮತ್ತು ಪ್ರತಿಭೆಗಳ ನಡುವಣದ ಸಂಬಂಧ 'ಊರುಕೇರಿ' ಯ ಒಂದು ಮುಖ್ಯವಸ್ತು ದಲಿತ ಸಾಹಿತಿಗಳ ಆತ್ಮಕಥೆ ಓದುವುದು ಏಕಕಾಲಕ್ಕೆ ಆಸಕ್ತಿ ಮತ್ತು ಆತಂಕಗಳನ್ನು ಹುಟ್ಟಿಸುತ್ತದೆ. ಸಿದ್ಧಲಿಂಗಯ್ಯನವರ ಆತ್ಮಕಥೆಯಲ್ಲಿ ದಲಿತಲೇಖಕರ ಕೃತಿಗಳಲ್ಲಿ ನಾವು ನಿರೀಕ್ಷಿಸಬಹುದಾದ ಅನೇಕ ಅಂಶಗಳಿವೆ. ಬಡತನ, ರೊಚ್ಚು, ಅವಮಾನ ಇತ್ಯಾದಿಗಳೆಲ್ಲ ಇವೆ. ಆದರೆ ಇಡೀ ಕೃತಿಯಲ್ಲಿ ಹೊಸದಾದ ಅನಿರೀಕ್ಷಿತವಾದ ಒಂದು ಮುಖ್ಯಾಂಗವೂ ಇದೆ. ಈ ಕೃತಿಯ ವಸ್ತು ದಲಿತ ಕೃತಿಗಳಿಗೆ ಸಾಮಾನ್ಯವಾದ್ದು, ಸಹಜವಾದದ್ದು. ಆದರೆ ಈ ವಸ್ತುವನ್ನು ನಿರ್ವಹಿಸುವ ಧ್ವನಿ ಭಿನ್ನವಾದದ್ದು ಬಡತನ, ಜಾತಿ, ಅವಮಾನದ ಭೀತಿಗಳಿರದ ದಲಿತಕಥೆಸುಳ್ಳು. ಆದರೆ ಅವುಗಳನ್ನು ಪ್ರತಿಭೆಯಲ್ಲಿ ಲೇಖಕ ಗೆಲ್ಲುತ್ತಾನೆ ಎಂಬ ಮಾತು ನಿಜ. ತಮ್ಮ ಬದುಕಿನಲ್ಲಿ ಹಸಿವು ಅವಮಾನಗಳನ್ನು ಹೋಗಲಾಡಿಸುವ ಮೂಲಕ ಕವಿ ಸಿದ್ಧಲಿಂಗಯ್ಯ ಅವುಗಳನ್ನು ದಾಟುವ ಮಾರ್ಗಗಳನ್ನು ತೋರಿಸುತ್ತಾರೆ.

ಸಿದ್ಧಲಿಂಗಯ್ಯನವರ ವಿಶಿಷ್ಟತೆ ಅವರ ಶೈಲಿಯಲ್ಲಿದೆ. ಇಲ್ಲಿ ಅತ್ಯಂತ ಬುದ್ಧಿವಂತ ತುಂಟನೊಬ್ಬ ವ್ಯಂಗ್ಯ ಪ್ರಬಂಧಧ್ವನಿ ಇತ್ಯಾದಿಗಳನ್ನು ಬಳಸಿ ಹೊಸಬಗೆಯ ಆತ್ಮಪ್ರತಿಮೆಗಳನ್ನು ಸೃಷ್ಟಿಸುತ್ತಿದ್ದಾನೆ ಎಂಬುದು ಓದುಗರಿಗೆ ಗೋಚರಿಸುತ್ತದೆ. ಈ ದೃಷ್ಟಿಯಿಂದ 'ಊರುಕೇರಿ' ಯಲ್ಲಿ ದಲಿತ ವ್ಯಕ್ತಿತ್ವವನ್ನು ಹೊಸರೀತಿಯಲ್ಲಿ ಪ್ರತಿಮೀಕರಿಸುವ ಪ್ರಯತ್ನವಿದೆ. ಈ ರೀತಿಯ ಧ್ವನಿ ಬಹುಪಾಲು ದಲಿತ-ಬಂಡಾಯ ಲೇಖಕರಿಗೆ ಸಾಧ್ಯವಾಗದು ಎಂಬುದನ್ನು ಮರೆಯುವಂತಿಲ್ಲ. ಈ ಕೃತಿಯ

ಮತ್ತೊಂದು ವೈಶಿಷ್ಟತೆ ಎಂದರೆ ದಲಿತ ಸಾಂಸ್ಕೃತಿಕ ರಾಜಕಾರಣ ಪ್ರಜ್ಞಾಪೂರ್ವಕವಾಗಿ ನಂಬಿಕೊಂಡಿರುವ ಅನೇಕ ಕೀಳರಿಮೆಗಳನ್ನು ಕಾಲೆಳೆದು ಬೀಳಿಸುತ್ತದೆ. ಉದಾಹರಣೆಗೆ ಹೇಳುವುದಾದರೆ ದಲಿತರಿಗೆ ಗತಕಾಲದ ಸಂಸ್ಕೃತಿಯಲ್ಲಿ ಹಿರಿಮೆಯ ಪಾಲುದಾರಿಕೆ ಇಲ್ಲ ಎಂಬ ನಂಬಿಕೆಯನ್ನು ಸಿದ್ಧಲಿಂಗಯ್ಯನವರು ತಮ್ಮ ದೊಡ್ಡಪ್ಪನ ಬಗ್ಗೆ ಬರೆಯುತ್ತಾ ಹಂಗಿಸುತ್ತಾರೆ. ಆದರೆ, ನೇರವಾಗಿ ಅಲ್ಲ ಆ ದೊಡ್ಡಪ್ಪ ಕೇರಿಯ ನಾಯಕನಾಗಿ ಇಡೀ ಊರಲ್ಲೇ ಗಣ್ಯನಾದಾತ. ಎಲ್ಲಕ್ಕಿಂತ ಮುಖ್ಯವಾಗಿ ಆತ ಜೈಮಿನಿಭಾರತ ಓದುತ್ತಿದ್ದ ವ್ಯಕ್ತಿ. ಆದರೆ, ಸಾಲಗಾರನಾಗಿ ಆ ಅವಮಾನ ತಾಳಲಾರದೆ ಆತ್ಮಹತ್ಯೆಮಾಡಿಕೊಳ್ಳುತ್ತಾನೆ. ದಲಿತ ಕುಲದ ನೋವು ಮತ್ತು ಆತ್ಮಗೌರವಗಳನ್ನು ಈ ಕಿರುಪ್ರಸಂಗಕ್ಕೂ ಒಂದು ದಿನಗಳನ್ನಷ್ಟೆ ಕುರಿತದ್ದು ಎಂಬುದು ಕುತೂಹಲದ ವಿಷಯ. ಆಧುನಿಕ ಕನ್ನಡ ಸಾಹಿತ್ಯ ಸಂವೇದನೆಯಲ್ಲಿ ಬೇರೂರಿರುವ ಒಂದು ಪ್ರಮುಖ ನಂಬಿಕೆಯ ಮೇಲೂ ಇದು ಬೆಳಕು ಚೆಲ್ಲುತ್ತದೆ. ಬಾಲ್ಯಕಾಲ ಎನ್ನುವುದು ಬರೀ ವಯಸ್ಸಲ್ಲ. ಅದೊಂದು ಸಮೃದ್ಧ ಸೃಜನಶೀಲ ಸ್ಥಿತಿ ಬಾಲ್ಯಕಾಲದ ವಿವರಗಳು ಸಮೃದ್ಧವಾಗಿ ಅರಳಿ, ಒಂದರೊಳಗೊಂದು ಬೆರೆತು ಬೆಳೆಯುತ್ತಾ ಹೋಗುವ ಸ್ಥಿತಿ ನಿಜಕ್ಕೂ ರೋಮಾಂಚನಕಾರಿ. ಇದು ಕುವೆಂಪು ಅವರಿಂದ ಹಿಡಿದು ಈವರೆಗೆ ಆತ್ಮಕಥೆ ಬರೆಯುತ್ತಿರುವ ಎಲ್ಲಾ ಲೇಖಕರಿಗೂ ಅನ್ವಯಿಸುತ್ತದೆ. ವಯಸ್ಕರಾದಾಗ ಆತ್ಮಕಥೆ ಬರೆಯುವಲ್ಲಿ ಸಂವೇದನೆಗೆ ತೊಡಗಬಹುದು. ಹೀಗಾಗಿ ಸಾಮಾಜಿಕ ಸಂಬಂಧಗಳ ತೆಳುವರ್ಣನೆಗಳಾಗಿ ಅವು ಕೊನೆಯಾಗುತ್ತವೆ. ಕುವೆಂಪು ಅವರ 'ನೆನಪಿನದೋಣಿಯನ್ನೆ' ತೆಗೆದುಕೊಂಡು ಚರ್ಚಿಸಬಹುದು. ಬಾಲ್ಯದಟ್ಟವಾದಷ್ಟು ತಾರುಣ್ಯ ಆತ್ಮಕಥೆಯಲ್ಲಿ ದಟ್ಟವಾಗುವುದಿಲ್ಲ. ಪ್ರಬುದ್ಧ ಜೀವನದ ಸರಕುಗಳು ಕಥೆ, ಕಾದಂಬರಿಗಳೊಳಗೆ ವೇಷಾಂತರ ತಳೆದು ನುಗ್ಗುತ್ತವೆ. ಬಾಲ್ಯಕಾಲ ಎನ್ನುವುದು ಸಂವೇದನೆಯ ಅಖಂಡ ಸ್ಥಿತಿ. ವೈಯಕ್ತಿಕ ಸಮಷ್ಟಿ ಖಾಸಗಿ – ಸಾರ್ವಜನಿಕ ಇತ್ಯಾದಿ ವರ್ಗೀಕರಣಗಳಿರದ ಸ್ಥಿತಿ. ತನ್ನ ಸಾಮಾಜಿಕ ಮುಖವಾಡವನ್ನೆ ಸಮರ್ಥಿಸಿಕೊಳ್ಳುವ, ವಿಸ್ತರಿಸುವ, ವಿವರಿಸುವ ಬರವಣಿಗೆಯಾಗಿ ಆತ್ಮಕಥನ ಬಳಕೆಯಾಗುತ್ತದೆ. ಹೀಗಾಗಿ ಸಿದ್ಧಲಿಂಗಯ್ಯನವರು ತೀವ್ರವಾಗಿ ಅನುಭವಿಸಿದ ಹಾಗೂ ಪುನರ್ ಸೃಷ್ಟಿಸಿದ ಬಾಲ್ಯಕಾಲ ಮತ್ತು ಸ್ವಾರಸ್ಯಕರ ತೆಳುತನದಿಂದ ಪುನರ್‌ಸೃಷ್ಟಿಸಿರುವ ಕಾಲೇಜು ದಿನಗಳು ಬಾಲ್ಯದ ಹಾಗೂ ತಾರುಣ್ಯದ ನೋವು, ನಲಿವು, ಸಾಧನೆ, ಸ್ಥಿತಿಗಳನ್ನು ತಿಳಿಸುತ್ತದೆ.

ಅಧ್ಯಾಯ – ೬

ಉಪಸಂಹಾರ

ಸಿದ್ಧಲಿಂಗಯ್ಯನವರು ಎಪ್ಪತ್ತರ ದಶಕ ಕಂಡ ಅಪರೂಪದ ಕ್ರಾಂತಿಕವಿ. ತಮ್ಮ ಸಾಹಿತ್ಯದ ಮುಖೇನ ಆಧುನಿಕ ಕನ್ನಡ ಕಾವ್ಯದ ಜಾಡನ್ನೆ ಬದಲಾಯಿಸಿದ ಅತ್ಯುತ್ತಮ ಬಂಡಾಯ ಕವಿ. ವ್ಯಕ್ತಿಗತ ವೈಯಕ್ತಿಕ ಅಭಿಪ್ರಾಯದ ನೆಲೆಯಲ್ಲಿ ಸಂಚರಿಸುತ್ತಿದ್ದ ನವ್ಯಕಾವ್ಯಕ್ಕಿಂತ ಭಿನ್ನವಾಗಿ ಸಮುದಾಯ ದೃಷ್ಟಿಕೋನದ ಹಿನ್ನಲೆಯಲ್ಲಿ ಇವರ ಕಾವ್ಯ ಹೊರಹೊಮ್ಮಿದ್ದು ಮಹತ್ವದ ಸಂಗತಿಯಾಗಿದೆ. ಒಂದು ಸಾಮಾನ್ಯ ಪುಟ್ಟ ಹಳ್ಳಿಯಲ್ಲಿ ಜನಿಸಿ ತನ್ನ ಸುತ್ತಲಿನ ಪರಿಸರದ ಬಗ್ಗೆ ಸೂಕ್ಷ್ಮವಾಗಿ ಗ್ರಹಿಸಿ ಅದರ ಹಾಗು–ಹೋಗುಗಳ ಬಗ್ಗೆ ಸೂಕ್ಷ್ಮವಾಗಿ ಚಿಂತಿಸಿದ ಸೃಜನಶೀಲ ವ್ಯಕ್ತಿ ಸಿದ್ಧಲಿಂಗಯ್ಯನವರು. ಸಾಹಿತ್ಯ, ಹೋರಾಟಗಾರರ, ಸಂಘಟಕ, ಸಂಸದೀಯಪಟು ಹಾಗೂ ಆಡಳಿತಗಾರ – ಹೀಗೆ ಬಹುಮುಖ ಆಯಾಮದ ಬದುಕಿನ ಹಿನ್ನಲೆಯಿರುವ ಸಿದ್ಧಲಿಂಗಯ್ಯನವರು ಸಾಹಿತ್ಯ ಮತ್ತು ಸಮಾಜಕ್ಕೆ ಅಭೂತಪೂರ್ವ ಕೊಡುಗೆಯನ್ನು ನೀಡಿದ್ದಾರೆ. ಶೋಷಿತ ಸಮುದಾಯದಿಂದ ಬಂದಂತಹ ಸಿದ್ಧಲಿಂಗಯ್ಯನವರು ತಮ್ಮ ಸೃಜನಶೀಲ ಪ್ರತಿಭೆಯ ಮೂಲಕ ತಮ್ಮ ನೋವಿನ ಅಪಮಾನದ ಅನುಭವಗಳ ಅಭಿವ್ಯಕ್ತಿಯಿಂದಾಗಿ ಕನ್ನಡ ಸಾಹಿತ್ಯಕ್ಕೆ ಹೊಸಬಗೆಯ ರೂಪಕ, ಸಂಕೇತ, ಪ್ರತಿಮೆಗಳನ್ನು ಪರಿಚಯಿಸಿದ್ದಾರೆ.

ಸಿದ್ಧಲಿಂಗಯ್ಯ ಅವರದು ಗ್ರಾಮೀಣ ಹಾಗೂ ನಗರ ಪರಿಸರದ ಅನುಭವಗಳನ್ನು ಸೂಕ್ಷ್ಮಮನಸ್ಥಿಯ ಹಿನ್ನೆಲೆಯಲ್ಲಿ ಜೀರ್ಣಿಸಿಕೊಂಡು ಬೆಳೆದ ವ್ಯಕ್ತಿತ್ವ. ಮಾಗಡಿ, ಮಂಚನಬಲೆ ಹಾಗೂ ಅವ್ವೇರಹಳ್ಳಿಯ ಪರಿಸರದಲ್ಲಿ ಕಣ್ತೆರೆದ ಇವರ ಬದುಕು ಉದ್ದಕ್ಕೂ ಆ ಪರಿಸರದ ಅನುಭವಗಳ ಹಿನ್ನಲೆಯಲ್ಲಿಯೇ ತನ್ನ ವಿಸ್ತಾರವನ್ನು ಪಡೆದಿದೆ. ಅಲ್ಲಿನ ನೈಸರ್ಗಿಕ ಸೊಬಗು ಎಷ್ಟರ ಮಟ್ಟಿಗೆ ಇವರ ವ್ಯಕ್ತಿತ್ವ ಹಾಗೂ ಆಲೋಚನೆಯನ್ನು ಪ್ರಭಾವಿಸಿವೆಯೋ ಅಷ್ಟೇ ಪ್ರಮಾಣದಲ್ಲಿ ಬೆಂಗಳೂರಿನ ಅದರಲ್ಲೂ ಕೊಳಗೇರಿಯಾಗಿದ್ದ ಶ್ರೀರಾಂಪುರದ ಮನುಷ್ಯ ಜಗತ್ತಿನ ಹಲಬಗೆಯ ವಿಸ್ಮಯಗಳು ಸಹ ಇವರ ವ್ಯಕ್ತಿತ್ವ ಹಾಗೂ ಸಾಹಿತ್ಯದ ಹಿನ್ನಲೆಯಲ್ಲಿ ಪರಿಣಾಮಕಾರಿಯಾಗಿ ಪ್ರಭಾವಿಸಿವೆ. ಬಡತನದ ಕೌಟುಂಬಿಕ ಹಿನ್ನಲೆಯಿಂದ ಬಂದಂತಹ ಸಿದ್ಧಲಿಂಗಯ್ಯನವರು ಹಸಿವು, ಬಡತನ, ನೋವು, ಸಂಕಷ್ಟಗಳ ಜೊತೆಯಲ್ಲೇ ಬೆಳೆದವರು.

ಸಿದ್ಧಲಿಂಗಯ್ಯನವರು ತಮ್ಮ ಅನುಭವದ ಅಭಿವ್ಯಕ್ತಿಗೆ ಕಾವ್ಯವನ್ನು ಮಾಧ್ಯಮವನ್ನಾಗಿ ಆರಿಸಿಕೊಂಡವರು. 'ಹೊಲೆಮಾದಿಗರಹಾಡು' ಕವನಸಂಕಲನದ ಮೂಲಕ ಕನ್ನಡ ಸಾಹಿತ್ಯಕ್ಕೆ ಅಪರೂಪದ ಅನುಭವ ಹಾಗೂ ಅಭಿವ್ಯಕ್ತಿಯ ಸ್ವರೂಪವನ್ನು ಪರಿಚಯಿಸಿದವರು. ದಲಿತರ

ಬದುಕಿನ ಹಸಿವು, ಬಡತನ, ಶೋಷಣೆ, ಅನ್ಯಾಯ, ಅಸಮಾನತೆ, ಅಸ್ಪೃಶ್ಯತೆಯ ನೋವು ಅಸಹಾಯಕತೆ, ಅಜ್ಞಾನ, ಮೂಢನಂಬಿಕೆ ಇವರ ಕಾವ್ಯಾಭಿವ್ಯಕ್ತಿಯ ಮೂಲಸೆಲೆಗಳಾಗಿವೆ. 'ಹೊಲೆಮಾದಿಗರಹಾಡು' ಸಂಕಲನದಲ್ಲಿ ಶೋಷಣೆಯ ವಿರುದ್ಧ ಬಂಡಾಯ ಸ್ವರೂಪದ ಅಭಿವ್ಯಕ್ತಿ ಇದೆ. 'ಹೊಲೆಮಾದಿಗರಹಾಡು' ಸಂಕಲನದಲ್ಲಿ ಎಲ್ಲಾ ಕವನಗಳನ್ನು ನೋಡಿದರೆ ಅಲ್ಲಿ ಗುಡುಗು ಸಿಡಿಲುಗಳ ಆರ್ಭಟ ಕಿವಿಗಬ್ಬರಿಸುವಂತಹ ಶಬ್ದಾಡಂಬರ ಕಾಣಿಸುತ್ತದೆ. ಸಂವೇದನೆ ಎಂಬುದು ಅಭಿವ್ಯಕ್ತಿಯ ಆಂತರ್ಯದಲ್ಲಿ ಕಮಲದ ಮೇಲಿನ ಮಂಜಿನ [ನೀರಿನ] ಹನಿಯಂತೆ ಇರಬೇಕು. ಸಿದ್ಧಲಿಂಗಯ್ಯನವರಂತೆ ದೇವನೂರು ಮಹಾದೇವ, ಮಾಲಗತ್ತಿಯವರೂ ಕೂಡ ದಲಿತ ಕವಿಗಳೇ. ಆದರೆ ಅವರ ಸಾಹಿತ್ಯದಲ್ಲಿ ಸಿದ್ಧಲಿಂಗಯ್ಯನವರಷ್ಟು ಅಬ್ಬರದ ಶಬ್ದಗಳಿಲ್ಲ. ಅವರುಗಳ ಸಾಹಿತ್ಯ ಸೃಷ್ಟಿ ಅವರ ವಿಭಿನ್ನ ಶೈಲಿಯಿಂದಲೇ ಮತ್ತಷ್ಟು ಪರಿಣಾಮಕಾರಿಯಾಗಿವೆ. ಆದರೆ ಸಿದ್ಧಲಿಂಗಯ್ಯನವರಿಗೆ ಮೇಲಿನ ಮಾತು ಅನ್ವಯಿಸುವುದು 'ಹೊಲೆಮಾದಿಗರಹಾಡು' ಕವನಸಂಕಲನಕಷ್ಟೇ ಸೀಮಿತವಾಗುತ್ತದೆ. ಅನಂತರ ಬಂದಂತಹ 'ಸಾವಿರಾರುನದಿಗಳು' ಸಂಕಲನದಲ್ಲಿ ಶೋಷಕವ್ಯವಸ್ಥೆಯ ವಿರುದ್ಧ ಎಲ್ಲಾ ಜಾತಿಯ ಬಡವರ, ಶೋಷಿತರ ಸಂಘಟನಾತ್ಮಕ ಸ್ವರೂಪದ ಹೋರಾಟದ ಅಭಿವ್ಯಕ್ತಿ ಇದೆ. 'ಕಪ್ಪುಕಾಡಿನಹಾಡು' ಮತ್ತು 'ಮೆರವಣಿಗೆ' ಸಂಕಲನಗಳಲ್ಲಿ ಸಮಸಮಾಜದ ಕನಸು, ಸಾಮಾಜಿಕ ಸಾಮರಸ್ಯ ಹಾಗೂ ಸಮನ್ವಯತೆಯ ಹಂಬಲವನ್ನು ಕಾಣಬಹುದು. ಸಿದ್ಧಲಿಂಗಯ್ಯನವರ ಒಟ್ಟು ಕವನ ಸಂಕಲನವು ಅವರ ವ್ಯಕ್ತಿತ್ವ ಹಾಗೂ ಆಲೋಚನಾಕ್ರಮದಲ್ಲಿ ಉರ್ಧ್ವಮುಖ ಬೆಳವಣಿಗೆಯನ್ನು ಸ್ಪಷ್ಟವಾಗಿ ಪರಿಚಯಿಸುತ್ತದೆ. ಮೊದಲ ಕವನ ಸಂಕಲನದ ಸಂದರ್ಭದಲ್ಲಿ ವ್ಯಷ್ಟೀಯವಾಗಿ ತನ್ನ ಜನಾಂಗದ, ಸಮುದಾಯದ ಬಗ್ಗೆಯಷ್ಟೆ ಚಿಂತಿಸುತ್ತಿದ್ದ ಸಿದ್ಧಲಿಂಗಯ್ಯನವರು ಎರಡನೆ ಸಂಕಲನದ ವೇಳೆಗೆ ತಮ್ಮಂತೆ ನೊವುಂಡ ಶೋಷಣೆಗೊಳಗಾದ ಇತರ ಜನಾಂಗದ ಶೋಷಿತರ ಬಗ್ಗೆಯೂ ಚಿಂತಿಸತೊಡಗುತ್ತಾರೆ. ಇದು ಅವರ ಕವನ ಸಂಕಲನಗಳ ಒಂದು ಆರೋಗ್ಯಕರ ಬೆಳವಣಿಗೆಯ ಮುನ್ಸೂಚನೆ ಎಂದೇ ಹೇಳಬಹುದು. ಇದರ ಜೊತೆಗೆ ಇವರ ಕಾವ್ಯನಾಟಕಗಲ್ಲಿ ಮಾರ್ಕ್ಸ್ ಅಂಬೇಡ್ಕರ್, ಲೋಹಿಯಾ ಅವರುಗಳ ಚಿಂತನೆಯ ಪ್ರಬಲ ಪ್ರೇರಣೆಯನ್ನು ಗುರುತಿಸಬಹುದು. 'ಪಂಚಮ' ಮತ್ತು 'ನೆಲಸಮ', 'ಏಕಲವ್ಯ' ನಾಟಕಗಳಲ್ಲಿ ಅಧಿಕಾರಶಾಹಿ ವ್ಯವಸ್ಥೆ ಹಾಗೂ ರಾಜಕೀಯ ವ್ಯವಸ್ಥೆಯ ಜನವಿರೋಧಿ ನಿಲುವನ್ನು ವಿಡಂಬನಾತ್ಮಕವಾಗಿ ಚಿತ್ರಿಸಿದ್ದಾರೆ. 'ಪಂಚಮ' ಮತ್ತು 'ನೆಲಸಮ' ನಾಟಕಗಳಲ್ಲಿ ಕೆಳ ಸಮುದಾಯದ ತಾಕಲಾಟವನ್ನು, ಕೊಳಗೇರಿಯ ಶ್ರಮಿಕ ಜನರ ದುಸ್ಥಿತಿ ಮತ್ತು ಅಧಿಕಾರಶಾಯಿಯ ದೌರ್ಜನ್ಯಗಳನ್ನು ಸಮರ್ಥವಾಗಿ ವಿವರಿಸಿದ್ದಾರೆ. ಹಾಗೆಯೇ ಈ ನಾಟಕಗಳ ಮೂಲಕ ಇಂದಿರಾ ಗಾಂಧಿ ಯವರ ಆಡಳಿತದ ಒಳಹುಗಳನ್ನು ಮೆಲುಕು ಹಾಕಿಸುತ್ತಾರೆ. 'ಏಕಲವ್ಯ' ನಾಟಕದಲ್ಲಿ ಶೋಷಿತರ ಸಮುದಾಯದ ಪ್ರತಿನಿಧಿಯಾಗಿ ಏಕಲವ್ಯ ಕಂಡುಬರುತ್ತಾನೆ. ಶೋಷಿತ ಸಮುದಾಯ

ಪ್ರಜ್ಞಾವಂತರಾಗಬೇಕು, ಬದುಕಿನ ಅಸ್ತಿತ್ವಕ್ಕಾಗಿ ತಮ್ಮ ಹಕ್ಕನ್ನು ಜಾಗೃತಿಯ ಮೂಲಕ ಪಡೆಯುವ ಸ್ವಾಭಿಮಾನವನ್ನು ಬೆಳೆಸಿಕೊಳ್ಳಬೇಕೆಂದೂ, ಯಾವುದೇ ಅಡ್ಡಿಯುಂಟಾದರೂ ಛಲವನ್ನು ಬಿಡಬಾರದೆಂದೂ, ಎದೆಗಾರಿಕೆಯಿಂದ ವ್ಯವಸ್ಥೆ ವಿರುದ್ಧ ಹೋರಾಡಿ ತಮ್ಮ ತನವನ್ನು ಉಳಿಸಿಕೊಳ್ಳಬೇಕೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ನೊಂದ ಜೀವಿಗಳ ಬಳಿಗೆ ಬೀದಿನಾಟಕ ಹೋಗಬೇಕೆಂಬ ಹಂಬಲವುಳ್ಳವರು ಸಿದ್ಧಲಿಂಗಯ್ಯನವರು. ಇವರ ನಾಟಕಗಳು ಪ್ರತಿಭಟನೆಯ ಅಸ್ತ್ರವಾಗಿ, ಹೋರಾಟದ ದನಿಯಾಗಿ ಸಶಕ್ತವಾಗಿ ಬಳಕೆಯಾಗಿವೆ. ಸಾಮಾಜಿಕ ಬದುಕಿನ ವಾಸ್ತವತೆಯ ಪ್ರಜ್ಞೆಯ ಅರಿವನ್ನು ಎಚ್ಚರಿಸುವಲ್ಲಿನ ಎಲ್ಲಾ ಗುಣಗಳನ್ನು ಇವರ ನಾಟಕಗಳು ಒಳಗೊಂಡಿವೆ. ವಸ್ತು ವೈವಿಧ್ಯತೆಯೊಂದಿಗೆ, ತಮ್ಮ ಪ್ರಾಮಾಣಿಕ ಅನುಭವಗಳನ್ನು ಶೋಷಿತ ಸಮುದಾಯದ ನುಡಿಗಟ್ಟಿನ ಮೂಲಕ ವಿವರಿಸಿದ್ದಾರೆ. ಮಾನವೀಯ ಅಂತಃಕರಣದಿಂದ ದಲಿತ ಬದುಕನ್ನು ಕಂಡಿರುವ ಕವಿ, ಆ ಸಮುದಾಯವನ್ನು, ಶೋಷಕ ನೆಲೆಗಳನ್ನು ಛಿದ್ರಗೊಳಿಸುವ ಸಲುವಾಗಿ ಪ್ರತಿಭಟನಾ ಶಕ್ತಿಗಳಾಗಿ ಬೆಳೆಯುವ ಅಗತ್ಯತೆಯನ್ನು ವಿವರಿಸಿದ್ದಾರೆ.

ಸಿದ್ಧಲಿಂಗಯ್ಯನವರು ಅನುಭವದ ಶ್ರೀಮಂತಿಕೆಯ ಹಿನ್ನಲೆಯಲ್ಲಿ ಕ್ರಮೇಣ ಹಂತಹಂತವಾಗಿ ಮಾಗುತ್ತಾ ಬೆಳೆದವರು. ಹೊಲೆಮಾದಿಗರಹಾಡು ಸಂಕಲನದ ನಂತರದ ಕವಿತೆಗಳಲ್ಲಿ, ಇವರ ತಾತ್ವಿಕ ಚಿಂತನೆ, ಆಲೋಚನೆ ಹಾಗೂ ಅಭಿವ್ಯಕ್ತಿಯಲ್ಲಿ ಆರೋಗ್ಯ ಪೂರ್ಣ ಬೆಳವಣಿಗೆಯನ್ನು ಗುರುತಿಸಬಹುದು. ಆರಂಭದಲ್ಲಿ ಶೋಷಣೆಯ ವಿರುದ್ಧ ಕಿಡಿಕಾರಿದ ಇವರು, ಬಂಡಾಯ ಮನೋಧರ್ಮವನ್ನು ಉಳಿಸಿಕೊಳ್ಳುತ್ತಲೇ ನಂತರದಲ್ಲಿ ಸಂಯಮದ ಅಭಿವ್ಯಕ್ತಿಶೈಲಿಯನ್ನು ಮೈಗೂಡಿಸಿಕೊಂಡಿದ್ದಾರೆ. ಆರಂಭದಕಾವ್ಯದಲ್ಲಿದ್ದ ಆಕ್ರೋಶ, ಸಿಟ್ಟು ನಂತರದ ಕಾವ್ಯಗಳಲ್ಲಿ ಬೆಂಕಿಯಾಗಿ ಧಗಧಗಿಸದೆ ಬೂದಿಮುಚ್ಚಿದ ಕೆಂಡದಂತೆ, ಚಿಪ್ಪಿನೊಳಗಣ ಮುತ್ತಿನಂತೆ ಪ್ರಕಾಶಿಸುತ್ತಾ ಹೋಗುತ್ತದೆ.

ಸಾಹಿತ್ಯರಚನೆಯಲ್ಲಿ ಭಾಷಾಬಳಕೆ ಅತೀಮುಖ್ಯವಾದುದು. ದಲಿತ ಬಂಡಾಯ ಕವಿಗಳ ಕಾವ್ಯರಚನೆಯಲ್ಲಿ ದೇಸೀ ನುಡಿಗಟ್ಟಿನ ಸಮರ್ಥಬಳಕೆಯ ಮೇಲೆ ತಮ್ಮ ಛಾಪನ್ನು ಮೂಡಿಸಿದ್ದಾರೆ. ಆಡುಭಾಷೆಯ ಇವರ ಕಾವ್ಯ ಇಡೀ ದಲಿತ ಸಮೂಹ ಆಕರ್ಷಿತರಾಗಿ ರೋಮಾಂಚನಗೊಳ್ಳುವಂತಿದೆ. ದಲಿತರ ನುಡಿಗಟ್ಟಿಗೆ ಶೋಷಕ ವ್ಯವಸ್ಥೆಯನ್ನು ತಲ್ಲಣಗೊಳಿಸುವ ಹಾಗೂ ದಲಿತ ಜನಾಂಗವನ್ನು ಸಂಘಟಿಸುವ ಸಾಮರ್ಥ್ಯವಿದೆ ಎಂಬುದನ್ನು ಇವರ ಕಾವ್ಯ ತೋರಿಸಿಕೊಟ್ಟಿದೆ.

ಸಿದ್ಧಲಿಂಗಯ್ಯನವದ್ದ ಕಾವ್ಯಭಾಷೆಯನ್ನು ಸಾಮಾಜಿಕ ಸಾಂಸ್ಕೃತಿಕ ನೆಲೆಯಲ್ಲಿ ಗ್ರಹಿಸಿಕೊಳ್ಳಬೇಕಾಗಿದೆ. ಇವರ ಕವಿತೆಗಳು ಹಾಡುಗಳಾಗಿ ಪರಿಣಮಿಸಿದ್ದು, ಜನದೊಡಲಿನ

ಭಾಷೆಯಾಗಿದ್ದು ಅವು ಚಳುವಳಿಗಳಲ್ಲಿ ಕರ್ನಾಟಕದ ಮೂಲೆಮೂಲೆಯಲ್ಲೂ ಮೊಳಗಿವೆ. ಈ ದೃಷ್ಟಿಯಿಂದ ಇವರ ಕಾವ್ಯ ಭಾಷೆ ಕನ್ನಡ ಕಾವ್ಯ ಶೈಲಿಗೆ ಹೊಸ ಪರಿಭಾಷೆಯನ್ನು ಕೊಟ್ಟಿದ್ದು ತುಂಬಾ ಮಹತ್ವದ ಸಂಗತಿಯಾಗಿದೆ.

ಸಿದ್ಧಲಿಂಗಯ್ಯನವರ ಆರಂಭದ ಕೆಲವು ಕವಿತೆಗಳು ಘೋಷಣೆಗಳಾಗಿಯೂ ಕೂಡ ಸಾಮಾಜಿಕ ವಲಯದಲ್ಲಿ ಪ್ರಭಾವಿಪೂರ್ಣ ಪರಿಣಾಮವನ್ನು ಉಂಟುಮಾಡುವ ನಿಟ್ಟಿನಲ್ಲಿ ಯಶಸ್ವಿಯಾಗಿವೆ. ವಸ್ತು ವೈವಿಧ್ಯತೆಯೊಂದಿಗೆ, ತಮ್ಮ ಪ್ರಾಮಾಣಿಕ ಅನುಭವಗಳನ್ನು ಶೋಷಿತ ಸಮುದಾಯದ ನುಡಿಗಟ್ಟಿನ ಮೂಲಕ ಕಾವ್ಯವಾಗಿಸಿದ್ದಾರೆ. ಮಾನವೀಯ ಅಂತಃಕರಣದಿಂದ ದಲಿತ ಬದುಕನ್ನು ಕಂಡಿರುವ ಕವಿ, ಆ ಸಮುದಾಯವನ್ನು, ಶೋಷಕ ನೆಲೆಗಳನ್ನು ಛಿದ್ರಗೊಳಿಸುವ ಸಲುವಾಗಿ ಪ್ರತಿಭಟನಾ ಶಕ್ತಿಗಳಾಗಿ ಬೆಳೆಯುವ ಅಗತ್ಯತೆಯನ್ನು ವಿವರಿಸಿದ್ದಾರೆ.

ಅಡಿ ಟಿಪ್ಪಣಿ

ಅಧ್ಯಾಯ – ೧

೧. ಹಕ್ಕಿನೋಟ – ಸಿದ್ಧಲಿಂಗಯ್ಯ – ಪುಟ ಸಂಖ್ಯೆ ೩೪

೨. ಸಿದ್ಧಲಿಂಗಯ್ಯನವರ ಜೀವನ ಮತ್ತು ಸಾಹಿತ್ಯ – ಅಪ್ಪಗೆರೆ ಸೋಮಶೇಖರ್ – ಪುಟ ಸಂಖ್ಯೆ ೪

೩. ಹಾಡಹಾದಿ ತೋರಿತು – ಹೆಚ್. ಎಸ್. ರಾಘವೇಂದ್ರರಾವ್ – ಪುಟಸಂಖ್ಯೆ ೭೩

೪. ಊರುಕೇರಿ – ಡಾ। ಸಿದ್ಧಲಿಂಗಯ್ಯ – ಪುಟ ಸಂಖ್ಯೆ ೭೨

೫. ಹಕ್ಕಿನೋಟ – ಡಾ। ಸಿದ್ಧಲಿಂಗಯ್ಯ – ಪುಟ ಸಂಖ್ಯೆ ೫

೬. ಊರುಕೇರಿ – ಡಾ। ಸಿದ್ಧಲಿಂಗಯ್ಯ – ಪುಟ ಸಂಖ್ಯೆ ೮೪

೭. ಊರು ಕೇರಿ – ಡಾ। ಸಿದ್ಧಲಿಂಗಯ್ಯ – ಪುಟ ಸಂಖ್ಯೆ ೬೭

೮. ಚಿಂತನ ಸಂಗಮ ಕಾರ್ಯಕ್ರಮದ ಉಪನ್ಯಾಸದಲ್ಲಿ ಸಿದ್ಧಲಿಂಗಯ್ಯನವರ ಭಾಷಣ – ಭಗವಾನ್ ಬುದ್ಧ ಶಿಕ್ಷಕರ ತರಬೇತಿ ಸಂಸ್ಥೆ ಮಳವಳ್ಳಿ

ಅಧ್ಯಾಯ – ೨

೯. ನನ್ನ ಜನಗಳು – ಕೃತಿಗೆ ಬರೆದ ವಿಮರ್ಶೆ – ಮೊಗಳ್ಳಿಗಣೇಶ್ – ಪುಟ ಸಂಖ್ಯೆ ೮

೧೦. ಆಯ್ದ ಕವಿತೆಗಳು – ಮುನ್ನುಡಿ – ಡಿ.ಆರ್. ನಾಗರಾಜ್ – ಪುಟ ಸಂಖ್ಯೆ ೧೧

ಅಧ್ಯಾಯ – ೩

೧೧. ಚಿಂತನ ಸಮಗಮ – ವಿಚಾರ ಸಂಕಿರಣ – ಡಾ। ಸಿದ್ಧಲಿಂಗಯ್ಯನವರ ಉಪನ್ಯಾಸ, ಭ.ಬು.ಶಿ.ತ.ಸಂಸ್ಥೆ, ಮಳವಳ್ಳಿ.

೧೨. ಕರ್ನಾಟಕ ಸಂಗಾತಿ – ಸಂ. ಬರಗೂರು ರಾಮಚಂದ್ರಪ್ಪ – ಪುಟ ಸಂಖ್ಯೆ ೨೪೧

೧೩. ಬಂಡಾಯ ಹತ್ತು ವರ್ಷ – ಸಂ. ನರಹಳ್ಳಿಬಾಲಸುಬ್ರಹ್ಮಣ್ಯ – ಪುಟ ಸಂಖ್ಯೆ ೫

೧೪. ಬಂಡಾಯ ದಲಿತ ಸಾಹಿತ್ಯ – ಪುರುಷೋತ್ತಮ ಬಿಳಿಮಲೆ – ಪುಟ ಸಂಖ್ಯೆ ೪೫

೧೫. ಹೊಲೆಮಾದಿಗರಹಾಡು – ಸಿದ್ಧಲಿಂಗಯ್ಯ – ಹೊಲೆಮಾದಿಗರಹಾಡು ಕವನ ಸಂಕಲನದ ನಾಲ್ಕನೇ ಆವೃತ್ತಿ.

೧೬. ಬಂಡಾಯ ದಲಿತ ಸಾಹಿತ್ಯ – ಜಿ.ಎಸ್. ಶಿವರುದ್ರಪ್ಪ – ಪುಟ ಸಂಖ್ಯೆ ೩೦

೧೭. ಹೊಲೆಮಾದಿಗರಹಾಡು – ಡಿ.ಆರ್.ನಾಗರಾಜ್ ಅವರ "ಅಭಿಪ್ರಾಯಗಳು" – ಪುಟ ಸಂಖ್ಯೆ ೩೭

೧೮. ಬಡವರ ನಗುವಿನ ಶಕ್ತಿ – ಜಿ.ಎಸ್.ಸಿದ್ಧಲಿಂಗಯ್ಯ – ಪುಟ ಸಂಖ್ಯೆ ೧೭೦

೧೯. ಬಡವರ ನಗುವಿನ ಶಕ್ತಿ – ಸಂ. ದಂಡಪ್ಪ – ಪುಟ ಸಂಖ್ಯೆ ೧೭

೨೦. ಹೊಲೆಮಾದಿಗರಹಾಡು – ಸಿದ್ಧಲಿಂಗಯ್ಯ – ನನ್ನ ಜನಗಳು ಕವಿತೆ – ಪುಟ ಸಂಖ್ಯೆ ೫೭

೨೧. ಹೊಲೆಮಾದಿಗರಹಾಡು – ಸಿದ್ಧಲಿಂಗಯ್ಯ – ನನ್ನ ಜನಗಳ ಕವಿತೆ – ಪುಟ ಸಂಖ್ಯೆ ೫೭

೨೨. ಹೊಲೆಮಾದಿಗರಹಾಡು – ಸಿದ್ಧಲಿಂಗಯ್ಯ – ಬೀಳು ಕವಿತೆ – ಪುಟ ಸಂಖ್ಯೆ ೨೭

೨೩. ಹೊಲೆಮಾದಿಗರಹಾಡು – ಸಿದ್ಧಲಿಂಗಯ್ಯ – ಚೋಮನ ಮಕ್ಕಳ ಹಾಡು – ಪುಟ ಸಂಖ್ಯೆ

೨೪. ಹೊಲೆಮಾದಿಗರಹಾಡು – ಸಿದ್ಧಲಿಂಗಯ್ಯ – ಕ್ರಾಂತಿ ಪದ – ಪುಟ ಸಂಖ್ಯೆ ೧೩

೨೫. ಹೊಲೆಮಾದಿಗರಹಾಡು – ಸಿದ್ಧಲಿಂಗಯ್ಯ – ಒಂದು ಮೂಳೆಯ ಹಾಡು – ಪುಟ ಸಂಖ್ಯೆ ೫

೨೬. ಹೊಲೆಮಾದಿಗರಹಾಡು – ಡಿ.ಆರ್.ನಾಗರಾಜ್ ಅವರ ಅಭಿಪ್ರಾಯಗಳು – ಪುಟ ಸಂಖ್ಯೆ ೩೮

೨೭. ಹೊಲೆಮಾದಿಗರಹಾಡು – ಸಿದ್ಧಲಿಂಗಯ್ಯ – ನನ್ನವಳಿಗೆ ಕವಿತೆ – ಪುಟ ಸಂಖ್ಯೆ ೨೩

೨೮. ಹೊಲೆಮಾದಿಗರಹಾಡು – ಸಿದ್ಧಲಿಂಗಯ್ಯ – ಅಡುಗೂಲಜ್ಜಿಯ ಕಥೆ – ಪುಟ ಸಂಖ್ಯೆ ೧೫

೨೯. ಕಪ್ಪುಕಾಡಿನ ಹಾಡು – ಸಿದ್ಧಲಿಂಗಯ್ಯ – ನಲವತ್ತೇಳರ ಸ್ವಾತಂತ್ರ್ಯ – ಪುಟ ಸಂಖ್ಯೆ ೨೮

೩೦. ಮೆರವಣಿಗೆ – ಸಿದ್ಧಲಿಂಗಯ್ಯ – ಪ್ರಕೃತಿ – ಪುಟ ಸಂಖ್ಯೆ ೨೫

೩೧. ಮೆರವಣಿಗೆ – ಸಿದ್ಧಲಿಂಗಯ್ಯ – ಕಪ್ಪುದೇವತೆಯ ಕಣ್ಣಾಗವಲು – ಪುಟ ಸಂಖ್ಯೆ ೩೦

೩೨. ಕಪ್ಪುಕಾಡಿನ ಹಾಡು – ಸಿದ್ಧಲಿಂಗಯ್ಯ – ಸುಟ್ಟಾವು ಬೆಳ್ಳಿಕಿರಣ – ಪುಟಸಂಖ್ಯೆ ೫

೩೩. ಹೊಲೆಮಾದಿಗರಹಾಡು – ಸಿದ್ಧಲಿಂಗಯ್ಯ – ನನ್ನವಳಿಗೆ – ಪುಟ ಸಂಖ್ಯೆ ೨೩

೩೪. ಕಪ್ಪುಕಾಡಿನ ಹಾಡು – ಸಿದ್ಧಲಿಂಗಯ್ಯ – ನನ್ನಕವನ – ಪುಟ ಸಂಖ್ಯೆ ೧

೩೫. ಕಪ್ಪುಕಾಡಿನಹಾಡು – ಸಿದ್ಧಲಿಂಗಯ್ಯ – ನನ್ನಕವನ – ಪುಟ ಸಂಖ್ಯೆ ೨

೩೬. ಹೊಲೆಮಾದಿಗರಹಾಡು – ಸಿದ್ಧಲಿಂಗಯ್ಯ ಅಂಬೇಡ್ಕರ್ – ಪುಟ ಸಂಖ್ಯೆ ೩೧

೩೭. ಮೆರೆವಣಿಗೆ – ಸಿದ್ಧಲಿಂಗಯ್ಯ – ಕಾರ್ಲ್‌ಮಾರ್ಕ್ಸ್ – ಪುಟ ಸಂಖ್ಯೆ ೪೪

೩೮. ಬಡವರನಗುವಿನ ಶಕ್ತಿ – ಚಂದ್ರಶೇಖರ ಕಂಬಾರ "ಅಭಿಪ್ರಾಯಗಳು" – ಪುಟ ಸಂಖ್ಯೆ ೧೬೮

೩೯. ಮೆರವಣಿಗೆ – ಡಿ.ಆರ್.ನಾಗರಾಜ್ (ಮುನ್ನುಡಿ) – ಪುಟ ಸಂಖ್ಯೆ ೧೧

೪೦. ಸಾವಿರಾರು ನದಿಗಳು – ಸಿದ್ಧಲಿಂಗಯ್ಯ – ಬೆಲ್ಜಿಯ ಹಾಡು – ಪುಟ ಸಂಖ್ಯೆ ೩

೪೧. ಸಾವಿರಾರು ನದಿಗಳು – ಸಿದ್ಧಲಿಂಗಯ್ಯ – ನನ್ನಜನ – ಪುಟ ಸಂಖ್ಯೆ ೧

೪೨. ಸಾವಿರಾರು ನದಿಗಳು – ಸಿದ್ಧಲಿಂಗಯ್ಯ – ದಲಿತರು ಬರುವರು – ಪುಟ ಸಂಖ್ಯೆ ೬

೪೩. ಕಪ್ಪು ಕಾಡಿನಹಾಡು – ಸಿದ್ಧಲಿಂಗಯ್ಯ – ಸುಟ್ಟಾವು ಬೆಳ್ಳಿ ಕಿರಣ – ಪುಟ ಸಂಖ್ಯೆ ೫

೪೪. ಸಾವಿರಾರು ನದಿಗಳು – ಸಿದ್ಧಲಿಂಗಯ್ಯ – ಅಲ್ಲೆಕುಂತವರೆ – ಪುಟ ಸಂಖ್ಯೆ ೩೦

೪೫. ಸಾವಿರಾರುನದಿಗಳು – ಸಿದ್ಧಲಿಂಗಯ್ಯ – ಅಲ್ಲೆಕುಂತವರೆ – ಪುಟ ಸಂಖ್ಯೆ ೩೧

೪೬. ದಲಿತಮಾರ್ಗ – ಕಿ.ರಂ. ನಾಗರಾಜು – ಅಭಿಪ್ರಾಯಗಳು – ಪುಟಸಂಕ್ಯೆ ೩೦೬

ಅಧ್ಯಾಯ – ೪

೪೭. ಆಧುನಿಕ ಕನ್ನಡ ನಾಟಕಗಳು – ಕೆ.ಮರುಳಸಿದ್ದಪ್ಪ – ಪುಟ ಸಂಖ್ಯೆ ೧೧೨

೪೮. ಪಂಚಮ – ಸಿದ್ಧಲಿಂಗಯ್ಯ – ಪುಟ ಸಂಖ್ಯೆ ೨೩

೪೯. ಆಧುನಿಕ ಕನ್ನಡ ನಾಟಕಗಳು – ಕೆ.ಮರುಳಸಿದ್ದಪ್ಪ – ಪುಟ ಸಂಖ್ಯೆ ೧೧೭

೫೦. ನೆಲಸಮ – ಸಿದ್ಧಲಿಂಗಯ್ಯ – ಪುಟ ಸಂಖ್ಯೆ ೧೫

೫೧. ಏಕಲವ್ಯ – ಸಿದ್ಧಲಿಂಗಯ್ಯ – ಪುಟಸಂಖ್ಯೆ ೭

೫೨. ದಲಿತಯುಗ ಮತ್ತು ಕನ್ನಡ ಸಾಹಿತ್ಯ – ಅರವಿಂದ ಮಾಲಗತ್ತಿ – ಪುಟ ಸಂಖ್ಯೆ ೨೧

ಅಧ್ಯಾಯ – ೫

೫೩. ಊರುಕೇರಿ – ಸಿದ್ಧಲಿಂಗಯ್ಯ – ಪುಟ ಸಂಖ್ಯೆ ೭

೫೪. ಬಂಡಾಯ ಹತ್ತು ವರ್ಷ – ನರಹಳ್ಳಿ ಬಾಲಸುಬ್ರಹ್ಮಣ್ಯ – ಪುಟ ಸಂಖ್ಯೆ ೮

೫೫. ಸಿದ್ಧಲಿಂಗಯ್ಯನವರ ಜೀವನ ಮತ್ತು ಸಾಹಿತ್ಯ – ಅಪ್ಪಗೆರೆ ಸೋಮಶೇಖರ್ – ಪುಟ ಸಂಖ್ಯೆ ೧೮

ಆಕರ ಗ್ರಂಥಗಳು

ಸಿದ್ಧಲಿಂಗಯ್ಯ ಅವರ ಕೃತಿಗಳು

೧. ಸಿದ್ಧಲಿಂಗಯ್ಯ : ೧೯೯೧ : ಹೊಲೆಮಾದಿಗರ ಹಾಡು, ಜನಸ್ನೇಹ ಪ್ರಕಾಶನ, ಬೆಂಗಳೂರು.
೨. ಸಿದ್ಧಲಿಂಗಯ್ಯ : ೧೯೮೫ : ಸಾವಿರಾರು ನದಿಗಳು, ಕನ್ನಡ ಸಂಸ್ಕೃತಿ ಮಿದೇರ್ಶನಾಲಯ, ಬೆಂಗಳೂರು.
೩. ಸಿದ್ಧಲಿಂಗಯ್ಯ : ೧೯೮೩ : ಕಪ್ಪುಕಾಡಿನ ಹಾಡು, ರೂಪಧ್ವನಿ ಪ್ರಕಾಶನ, ಬೆಂಗಳೂರು.
೪. ಸಿದ್ಧಲಿಂಗಯ್ಯ : ೨೦೦೦ : ಮೆರವಣಿಗೆ, ಅಂಕಿತ ಮಸ್ತಕ ಪ್ರಾಕಾಶನ, ಬೆಂಗಳೂರು.
೫. ಸಿದ್ಧಲಿಂಗಯ್ಯ : ೨೦೦೨ : ಆಯ್ದಕವಿತೆಗಳು, ಜನಪ್ರಿಯ ಮಸ್ತಕಮಾಲೆ, ಬೆಂಗಳೂರು.
೬. ಸಿದ್ಧಲಿಂಗಯ್ಯ : ೧೯೮೦ : ಪಂಚಮನೆಲಸಮ, ಪಂಚಮ ಪ್ರಕಾಶನ, ಬೆಂಗಳೂರು.
೭. ಸಿದ್ಧಲಿಂಗಯ್ಯ : ೧೯೮೭ : ಏಕಲವ್ಯ, ಅಜಂತ ಪ್ರಕಾಶನ, ಬೆಂಗಳೂರು.
೮. ಸಿದ್ಧಲಿಂಗಯ್ಯ : ೧೯೮೩ : ಅವತಾರಗಳು, ಸ್ನೇಹಪ್ರಕಾಶನ, ಬೆಂಗಳೂರು.
೯. ಸಿದ್ಧಲಿಂಗಯ್ಯ : ೧೯೯೩ : ಗ್ರಾಮದೇವತೆಗಳು, ಮೂಲಭಾರತಿ ಪ್ರಕಾಶನ, ಬೆಂಗಳೂರು.
೧೦. ಸಿದ್ಧಲಿಂಗಯ್ಯ : ೨೦೦೦ : ಊರುಕೇರಿ [ಆತ್ಮಕಥೆ], ಅಂಕಿತ ಮಸ್ತಕ ಪ್ರಕಾಶನ, ಬೆಂಗಳೂರು.

ಇತರೆ ಆಕರಗ್ರಂಥಗಳು

೧೧. ಅರವಿಂದ ಮಾಲಗತ್ತಿ : ೧೯೯೩ : ಕನ್ನಡ ಕಾವ್ಯದಲ್ಲಿ ದಲಿತಧ್ವನಿಗಳು, ವಿಚಾರ ವಾದಿ ಪ್ರಕಾಶನ, ಬೆಂಗಳೂರು.
೧೨. ಅರವಿಂದ ಮಾಲಗತ್ತಿ : ೧೯೯೪ : ಗೌರ್ಮೆಂಟ್‌ಬ್ರಾಹ್ಮಣ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
೧೩. ಅಪ್ಪಗೆರೆಶೋಮಶೇಖರ : ೨೦೦೪ : ಸಿದ್ಧಲಿಂಗಯ್ಯನವರ ಜೀವನ ಮತ್ತು ಸಾಧನೆ, ಮೈಸೂರು.
೧೪. ದೇವನೂರು ಮಹದೇವ : ೧೯೯೩ : ದೇವನೂರು ಮಹದೇವ ಅವರ ಕೃತಿಗಳು, ಪತ್ರಿಕಾ ಪ್ರಕಾಶನ, ಬೆಂಗಳೂರು.
೧೫. ದೊಡ್ಡ ಹುಲ್ಲೂರು ರುಕ್ಕೋಜಿ : ೧೯೯೨ : ಸದನದಲ್ಲಿ ಸಿದ್ಧಲಿಂಗಯ್ಯ, ಮೂಲಭಾರತಿ ಪ್ರಕಾಶನ, ಬೆಂಗಳೂರು.
೧೬. ನರಹಳ್ಳಿ ಬಾಲಸುಬ್ರಹ್ಮಣ್ಯ : ೧೯೯೮ : ಸಾಹಿತ್ಯ ಸಂಸ್ಕೃತಿ, ಅಂಕಿತ ಮಸ್ತಕ ಪ್ರಕಾಶನ, ಬೆಂಗಳೂರು.
೧೭. ಮರುಳಸಿದ್ದಪ್ಪ ಕೆ. : ೨೦೦೨ : ಆಧುನಿಕ ಕನ್ನಡನಾಟಕಗಳು, ಅಂಕಿತ ಮಸ್ತಕ ಪ್ರಕಾಶನ, ಬೆಂಗಳೂರು.
೧೮. ಮೊಗಳ್ಳಿ ಗಣೇಶ್ : ೧೯೯೩ : ದೇಶಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ ಅಕಾಡೆಮಿ, ಬೆಂಗಳೂರು.
೧೯. ರಾಘವೇಂದ್ರರಾವ್ ಹೆಚ್.ಎಸ್. : ೨೦೦೧ : ಶತಮಾನದ ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೨೦. ಶೇಷಗಿರಿರಾವ್ ಎಲ್. ಎಸ್. : ೧೯೯೯ : ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಮಸ್ತಕ ಪ್ರಕಾಶನ, ಬೆಂಗಳೂರು.
೨೧. ಭಗವಾನ್ ಬುದ್ಧ ಶಿಕ್ಷಣ ಮಹಾವಿದ್ಯಾಲಯ – ಚಿಂತನಸಂಗಮ ಕಾರ್ಯಕ್ರಮಗಳಲ್ಲಿ ಸಿದ್ಧಲಿಂಗಯ್ಯನವರು ನೀಡಿದ ಉಪನ್ಯಾಸಗಳು